KA / BG-GPO /2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೪ || ಬೆಂಗಳೂರು, ಗುರುವಾರ, ಜುಲೈ ೩೦, ೨೦೦೯ (ಶ್ರಾವಣ ೮, ಶಕವರ್ಷ ೧೯೩೧) || ಸಂಚಿಕೆ ೩೧

ವಿಷಯಸೂಚಿ

ಕರ್ನಾಟಕ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು
http//www.Kar.nic.in/gazette.

೨೦೦೯-೨೦೧೦ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪರಿಷ್ಕೃತ ಚಂದಾ ದರ

ಕ್ರಮ ಸಂಖ್ಯೆ	ರಾಜ್ಯಪತ್ರದ ಭಾಗಗಳು	ಪ್ರತಿ ಒಂದಕ್ಕೆ ರೂ. ಪೈ.	ವಾರ್ಷಿಕ ಚಂದಾ ದರ ರೂ. ಪೈ.
1.	ಭಾಗ - 1	12-00	700-00
2.	ಭಾಗ - 2	4-00	208-00
3.	ಭಾಗ - 3	30-00	1075-00
4.	ಭಾಗ - 4	3-00	240-00
5.	ಭಾಗ - 4ಎ	8-00	285-00
6.	ಭಾಗ - 5	13-00	528-00
7.	ಭಾಗ - 6 (ಬೆಂಗಳೂರು).................................	7-00	325-00
8.	ಭಾಗ - 6ಎ (ಮೈಸೂರು).................................	50-00	1111-00
9.	ಭಾಗ - 6ಬಿ (ಧಾರವಾಡ).................................	25-00	1637-00
10.	ಭಾಗ - 6ಸಿ (ಗುಲ್ಬರ್ಗ).................................	29-00	1469-00
11.	ಸಂಪೂರ್ಣ ಕರ್ನಾಟಕ ರಾಜ್ಯಪತ್ರ ಕ್ರ. ಸ. 1 ರಿಂದ 7 (ಭಾಗ-1 ರಿಂದ 6) ವಿಶೇಷ ರಾಜ್ಯಪತ್ರವನ್ನು ಹೊರತುಪಡಿಸಿ	77-00	3360-00
12.	ವಿಶೇಷ ರಾಜ್ಯಪತ್ರಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಪಡೆಯಿರಿ ಮತ್ತು ಸರ್ಕಾರಿ ಪುಸ್ತಕ ಮಳಿಗೆಗಳಲ್ಲಿ ಮಾರಾಟಕ್ಕೆ ಲಭ್ಯವಿರುತ್ತವೆ.		

೨೦೦೯-೨೦೧೦ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪ್ರಕಟಣೆ ದರ

ಕ್ರಮ ಸಂಖ್ಯೆ	ಪ್ರಕಟಣೆ ದರಗಳು		ಮೊತ್ತ ರೂ. ಪೈ.
1.	ಸ್ಥಳೀಯ / ಸ್ಥಾನಿಕ ಸಂಸ್ಥೆ ಮತ್ತು ಸರ್ಕಾರದ ಇಲಾಖೆ ಎ4 ಅಳತೆಯ ಪ್ರತಿ ಪುಟಕ್ಕೆ	...	500-00
2.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್	...	7-00
3.	ಖಾಸಗಿ ಸಂಸ್ಥೆ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದಂತೆ (ಕೆಪಿಟಿಸಿಎಲ್, ಕೆಎಸ್‌ಆರ್‌ಟಿಸಿ ತರಹ ಇತ್ಯಾದಿ ಪ್ರತಿ ಪುಟಕ್ಕೆ)	...	750-00
4.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್	...	11-00
5.	ಅರ್ಧ ಪುಟಕ್ಕೆ ಅಥವಾ ಕಾಲು ಪುಟಕ್ಕೆ ಬರುವ ವಿಷಯ	...	½ ಅಥವಾ ¼ ಪುಟಕ್ಕೆ ದರ ನಿಗಧಿ
6.	ಕಾಲು ಪುಟಕ್ಕಿಂತ ಕಡಿಮೆ ಇರುವ ವಿಷಯಕ್ಕೆ	...	ಕ್ರಮ ಸಂಖ್ಯೆ 1 ಮತ್ತು 3 ಕ್ರಮ ಸಂಖ್ಯೆ 2 ಮತ್ತು 4 ರಲ್ಲಿ ನಮೂದಿಸಿರುವಂತೆ ಪ್ರತಿ ಸಾಲಿಗೆ ದರ ನಿಗಧಿಪಡಿಸಿರುವುದು.
7.	ಹೆಚ್ಚಾಗಿ ಬೇಕಾಗಿರುವ ಪ್ರತಿ ಹಾಳೆಯ ಬೆಲೆ (ಮುದ್ರಿಸಿರುವ ಹಾಳೆಯ ಅಳತೆಯನ್ನು ನಿರೂಪಿಸಿ)	...	1-00

ಸೂಚನೆ :-
1. ಚಂದಾಹಣದ / ಪ್ರಕಟಣಾ ವೆಚ್ಚದ ಮೊತ್ತವನ್ನು "0058 ಲೇಖನ ಸಾಮಗ್ರಿ ಮತ್ತು ಮುದ್ರಣ (1) ರಾಜ್ಯಪತ್ರ ಮತ್ತು ಇತರ ಪ್ರಕಟಣಾ ವೆಚ್ಚಗಳು" ಖಜಾನೆಗೆ ಸಲ್ಲಿಸಿ, ಮೂಲ ಚಲನನ್ನು ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ಕಳುಹಿಸಬೇಕು.
2. ಭಾಗ VI-ಎ, VI-ಬಿ, VI-ಸಿ ಗಳನ್ನು ಅನುಕ್ರಮವಾಗಿ ಮೈಸೂರು, ಧಾರವಾಡ ಮತ್ತು ಗುಲ್ಬರ್ಗಾದ ಶಾಖಾ ಮುದ್ರಣಾಲಯಗಳಿಂದ ಪಡೆಯಬಹುದು.
3. ಕರ್ನಾಟಕ ರಾಜ್ಯ ಪತ್ರಕ್ಕಾಗಿ ಈ ಕೆಳಕಂಡ ವಿಳಾಸದಲ್ಲಿ ಪತ್ರ ವ್ಯವಹರಿಸತಕ್ಕದ್ದು.

ಸಂಕಲನಾಧಿಕಾರಿಗಳು,
ಕರ್ನಾಟಕ ರಾಜ್ಯಪತ್ರ,
ಸರ್ಕಾರಿ ಹೊರವಲಯ ಮುದ್ರಣಾಲಯ,
ಮೈಸೂರು ರಸ್ತೆ, ಬೆಂಗಳೂರು-59.

ಮುದ್ರಕರು :- ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು-59

KA / BG-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೪	ಬೆಂಗಳೂರು, ಗುರುವಾರ, ಜುಲೈ ೩೦, ೨೦೦೯ (ಶ್ರಾವಣ ೮, ಶಕ ವರ್ಷ ೧೯೩೧)	ಸಂಚಿಕೆ ೩೧

ಭಾಗ – ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ: ಶ್ರೀ ಜಿ.ಬಿ. ದೇಸಾಯಿ ನಿರ್ದೇಶಕರು (ನಿ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಇವರ ವಿರುದ್ಧದ ಆರೋಪಗಳ ವಿಚಾರಣೆಯ ಅಂತಿಮ ಆದೇಶ.

ಓದಲಾಗಿದೆ:
1) ಸರ್ಕಾರಿ ಆದೇಶ ಸಂಖ್ಯೆ :ಸಿಆಸುಇ 4 ಎಸ್ಇಎನ್ 2005, ದಿನಾಂಕ :28.11.2006.
2) ಪ್ರಾದೇಶಿಕ ಆಯುಕ್ತರು ಬೆಳಗಾವಿ ವಿಭಾಗ, ಬೆಳಗಾವಿ ಹಾಗೂ ವಿಚಾರಣಾಧಿಕಾರಿಗಳು ಇವರ ವರದಿ ದಿನಾಂಕ :14.8.2007ರ.

ಪ್ರಸ್ತಾವನೆ:

ಡಾ: ಜಿ.ಬಿ. ದೇಸಾಯಿ ನಿವೃತ್ತ, ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಸೇವೆಗಳು ಇವರು ನಿರ್ದೇಶಕರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ 2003–04 ಮತ್ತು 2004–05 ನೇ ಸಾಲಿಗಾಗಿ ಆಸ್ಪತ್ರೆಗಳಿಗೆ ಬೇಕಾದ ವಿವಿಧ ಡಿಸ್ಪೋಸಿಬಲ್ ಸಿರಂಜ್‌ಗಳು ಹಾಗೂ ಸರ್ಜಿಕಲ್ ಉಪಕರಣಗಳ ಖರೀದಿಯಲ್ಲಿ ಅವ್ಯವಹಾರ ಎಸಗಿದ್ದಾರೆಂಬ ಆರೋಪಕ್ಕಾಗಿ ಮೇಲೆ (1)ರಲ್ಲಿ ಓದಲಾದ ದಿನಾಂಕ:26.11.2006ರ ಸರ್ಕಾರಿ ಆದೇಶದಲ್ಲಿ ಅವರ ವಿರುದ್ಧ ಇಲಾಖಾ ವಿಚಾರಣೆಯನ್ನು ಆದೇಶಿಸಿ ಪ್ರಾದೇಶಿಕ ಆಯುಕ್ತರು ಬೆಳಗಾವಿ ವಿಭಾಗ ಬೆಳಗಾವಿ ಇವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಲಾಗಿತ್ತು. ವಿಚಾರಣಾಧಿಕಾರಿಗಳು ಮೇಲೆ ಓದಲಾದ (2)ರ ದಿನಾಂಕ:14.8.2007ರ ವಿಚಾರಣಾ ವರದಿ ಸಲ್ಲಿಸಿ ಪ್ರಕರಣದಲ್ಲಿ ಡಾ:ಜಿ.ಬಿ. ದೇಸಾಯಿ ಅವರು ಭಾರತ ಸರ್ಕಾರದ ದರ ಗುತ್ತಿಗೆ ಅಡಿಯಲ್ಲಿ ನಿಯಮಗಳನ್ನು ಪಾಲಿಸಿ ಪರಿಕರಗಳನ್ನು ಖರೀದಿಸಲು ಜಿಲ್ಲಾ ಆರೋಗ್ಯ ಅಧಿಕಾರಿಗಳಿಗೆ ಅನುಮತಿ ನೀಡಿದ್ದಾರೆ. ಸಿಗ್ಮಾ ಮಾರ್ಕೆಟಿಂಗ್ ಸಂಸ್ಥೆಯು ಅಂಗೀಕೃತವಲ್ಲವೆಂದು ತಿಳಿಸಿ ಭಾರತ ಸರ್ಕಾರದ ದಿನಾಂಕ:15.3.2004ರ ಪತ್ರವು ಭಾರತ ಸರ್ಕಾರದ ದಿನಾಂಕ:30.3.2004ರ ನೆನಪೋಲೆಯೊಡನೆ ದಿನಾಂಕ:13.4.2004 ರಂದು ನಿರ್ದೇಶನಾಲಯದಲ್ಲಿ ಸ್ವೀಕರಿಸಲ್ಪಟ್ಟಿದೆ.

ಈ ಮಾಹಿತಿ ದೊರತ ತಕ್ಷಣವೇ ಆರೋಪಿಯು ಎಲ್ಲಾ ಜಿಲ್ಲಾ ಆರೋಗ್ಯ ಅಧಿಕಾರಿಗಳಿಗೆ ದಿನಾಂಕ:19.4.2004 ರಂದು ಟೆಲಿಗ್ರಾಂ ಕಳುಹಿಸಿ ಸಿಗ್ಮಾ ಸಂಸ್ಥೆಗೆ ಹಣ ಪಾವತಿ ಮಾಡದಿರುವಂತೆ ಸೂಚನೆ ನೀಡಿದ್ದಾರೆ. ಹಾಗೂ ಕೋಟಾ ದಾಖಲೆಗಳನ್ನು ಸಲ್ಲಿಸಿದ ಸಿಗ್ಮಾ ಸಂಸ್ಥೆಯ ವಿರುದ್ಧ ದಿನಾಂಕ:7.5.2004ರಂದು ಶೇಷಾದ್ರಿಪುರಂ ಪೋಲೀಸ್ ಠಾಣೆಗೆ ದೂರನ್ನು ದಾಖಲಿಸಿದ್ದಾರೆ. ಭಾರತ ಸರ್ಕಾರಬ ಪತ್ರಗಳನ್ನು ನಿರ್ದೇಶನಾಲಯ ಮುಖ್ಯ ಲೆಕ್ಕಾಧಿಕಾರಿಗಳು ಆರೋಪಿಗೆ ವಿಳಂಬವಾಗಿ ಸಲ್ಲಿಸಿದ್ದಾರೆ. ಮೇಲಾಗಿ ಜಿಲ್ಲಾ ಆರೋಗ್ಯ ಅಧಿಕಾರಿಗಳ ಲಿಖಿತ ಬೇಡಿಕೆಗಳನ್ನು ಸಲ್ಲಿಸಿದ ನಂತರವೇ ಆರೋಪಿಯು ಅನುಮತಿ ನೀಡಿರುವುದು ಕಂಡುಬರುತ್ತದೆ. ಆದ್ದರಿಂದ ಆರೋಪ ಸಾಬೀತಾಗಿಲ್ಲ ಎಂಬ ಅಭಿಪ್ರಾಯ ನೀಡಿದ್ದಾರೆ.

ವಿಚಾರಣಾ ವರದಿಯಲ್ಲಿ ಡಾ: ಜಿ.ಬಿ. ದೇಸಾಯಿ ನಿರ್ದೇಶಕರು (ನಿವೃತ್ತ) ಇವರ ವಿರುದ್ಧದ ಆರೋಪವು ಸಾಬೀತಾಗಿರುವುದಿಲ್ಲವೆಂಬ ವರದಿಯನ್ನು ಸರ್ಕಾರವು ಕೂಲಂಕುಷವಾಗಿ ಪರಿಶೀಲಿಸಿದೆ. ಈ ವಿಚಾರಣಾ ವರದಿಯನ್ನು ಅಂಗೀಕರಿಸಲು ನಿರ್ಣಯಿಸಿ ಈ ಮುಂದಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 04 ಎಸ್‌ಇಎನ್ 2005, ಬೆಂಗಳೂರು, ದಿನಾಂಕ: 24ನೇ ಫೆಬ್ರವರಿ 2009

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಕಾರಣಗಳಿಂದಾಗಿ, ಶ್ರೀ ಜಿ.ಬಿ. ದೇಸಾಯಿ ನಿರ್ದೇಶಕರು (ನಿವೃತ್ತ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಅವರನ್ನು ಪ್ರಸ್ತಾವನೆಯಲ್ಲಿ ವಿವರಿಸಿದ ಆರೋಗಳಿಂದ ದೋಷಮುಕ್ತಗೊಳಿಸಿ ಆದೇಶಿಸಿದೆ. ಈ ಇಲಾಖಾ ವಿಚಾರಣೆ ನಡೆಯದಿದ್ದಲ್ಲಿ ಶ್ರೀಯುತರು ಯಾವ ಸೌಲಭ್ಯಗಳನ್ನು ಪಡೆಯುತ್ತಿದ್ದರೋ ಅವುಗಳನ್ನು ಪಡೆಯಲು ಅರ್ಹರಾಗಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಎಸ್. ಶಿವರಾಮ್
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–3)

ಪಿ.ಆರ್. 798

ವಿಷಯ: ಶ್ರೀ ಆರ್.ಎಚ್. ರೆಡ್ಡಿ ನಿವೃತ್ತ ಜಿಲ್ಲಾ ನ್ಯಾಯಾಧೀಶರು ಅವರ ವಿರುದ್ಧ ಕೆ.ಸಿ.ಎಸ್.ಆರ್ಸ್. ನಿಯಮ 214 ರನ್ವಯ ಶಿಸ್ತು ಕ್ರಮವನ್ನು ಜರುಗಿಸಲು ಸರ್ಕಾರದ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ: ಪತ್ರ ಸಂಖ್ಯೆ ಹೆಚ್ ವಿಸಿ 36/05, ದಿನಾಂಕ :25.10.2008 ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ ಬೆಂಗಳೂರು, ಅವರಿಂದ.

ಪ್ರಸ್ತಾವನೆ:

ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು, ಅವರು ಮೇಲೆ ಓದಲಾದ ದಿನಾಂಕ:25.10.2008ರ ಪತ್ರದಲ್ಲಿ ಶ್ರೀ ಆರ್.ಎಚ್. ರೆಡ್ಡಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರು (ನಿವೃತ್ತ ದಿನಾಂಕ:30.6.2005) 21ನೇ ಅಡಿಷನಲ್ ಸಿಟಿ ಸಿವಿಲ್ ಅಂಡ್ ಸೆಷನ್ಸ್ ಜಡ್ಜ್ ಬೆಂಗಳೂರು (ಸಿಬಿಐ ಪ್ರಕರಣಗಳ ವಿಚಾರಣಾ ನ್ಯಾಯಾಲಯ) ಈ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ ಮಾಜಿ ಮುಖ್ಯಮಂತ್ರಿ ಎಸ್. ಬಂಗಾರಪ್ಪ ಅವರ ವಿರುದ್ಧ ಹೂಡಲಾದ ವಿಶೇಷ ಸಿಸಿ ಸಂಖ್ಯೆ 47/99ರಲ್ಲಿ ಆರೋಪಿ ಪರ ವಕೀಲರಿಂದ ಅಪಾರ ಪ್ರಮಾಣದ ಅಕ್ರಮ ಸಂಭಾವನೆಯನ್ನು ಪಡೆದು ಸಂಶಯಕ್ಕೆ ಎಡೆಮಾಡುವ ರೀತಿಯಲ್ಲಿ ಪ್ರಕರಣದ ವಿಚಾರಣೆ ನಡೆಸಿದಂತೆ ಕೇಸ್ ಶೀಟ್‌ಗಳಲ್ಲಿ ನಮೂದುಗಳನ್ನು ಮಾಡಿ ಆರೋಪಿಯನ್ನು ಖುಲಾಸೆಗೊಳಿಸಿ ಕಾಲ್ಪನಿಕ ದಿನಾಂಕಗಳಲ್ಲಿ ಆದೇಶವನ್ನು ಹೊರಡಿಸಿರುವುದು ಉಚ್ಚ ನ್ಯಾಯಾಲಯದ ವಿಚಕ್ಷಣ ಘಟಕವು ನಡೆಸಿದ ಪ್ರಾಥಮಿಕ ತನಿಖೆಯಿಂದ ಮೇಲ್ನೋಟಕ್ಕೆ ದೃಢಪಟ್ಟಿದ್ದು ಇದಕ್ಕಾಗಿ ಅವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ 214ನೇ ನಿಯಮದನ್ವಯ ಶಿಸ್ತು ಕ್ರಮವನ್ನು ಜರುಗಿಸಲು ಸರ್ಕಾರದ ಮಂಜೂರಾತಿ ನೀಡುವಂತೆ ಕೋರಿದ್ದಾರೆ. ಕರ್ನಾಟಕ ಉಚ್ಚ ನ್ಯಾಯಾಲಯದ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಅದನ್ನು ಒಪ್ಪಿ ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 1 ಸೇಲುನ್ಯಾ 2009, ಬೆಂಗಳೂರು, ದಿನಾಂಕ: 3ನೇ ಮಾರ್ಚ್ 2009

ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ 214(2)(ಬಿ)(i)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಶ್ರೀ ಆರ್.ಎಚ್. ರೆಡ್ಡಿ ನಿವೃತ್ತ ಜಿಲ್ಲಾ ನ್ಯಾಯಾಧೀಶರು ಅವರ ವಿರುದ್ಧ ಮೇಲೆ ಹೇಳಿದ ಆರೋಪ ಕುರಿತು ಶಿಸ್ತು ಕ್ರಮವನ್ನು ಜರುಗಿಸಲು ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಈ ಮೂಲಕ ಮಂಜೂರಾತಿ ನೀಡುತ್ತದೆ.

ವಿಚಾರಣೆಯು ಬೆಂಗಳೂರಿನಲ್ಲಿ ನಡೆಯತಕ್ಕದ್ದು ಹಾಗೂ ಸೇವೆಯಲ್ಲಿರುವ ಸರ್ಕಾರಿ ನೌಕರನನ್ನು ಸೇವೆಯಿಂದ ವಜಾ ಮಾಡುವಾಗ ಅನುಸರಿಸುವ ಕಾರ್ಯ ವಿಧಾನವನ್ನು ಈ ವಿಚಾರಣೆಯಲ್ಲಿಯೂ ಅನುಸರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ.ಎಸ್. ಶಿವರಾಮ್
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–3)

ಪಿ.ಆರ್. 799

COMMERCE & INDUSTRIES SECRETARIAT

Sub : Sub-lease of 8.0069 acres of land to M/s Gyenex De-Sulphur India [P] Ltd.,

Read :

1) Proceedings of the 45th SLSWCC meeting held on 3.10.2008
2) SLSWCC Letter No. KUM/SLSWCC-45/AD/339/2008-09 Dated 21.10.2008 issued to the Company.
3) Letter No. KUM/SLSWCC /AD/399/2008-09 dated :19.1.2009.

Preamble :

M/s Gyenex De-sulphur India [P] Ltd., Bellary has proposed to establish unit for manufacture of "Desulphurising Compound [DSC]" with an investment of Rs. 45.00 crores, in 8 acres of land to be taken

on sub-lease from M/s JSW steel Ltd., adjacent to the factory of M.s Jamipol at No A/4/9 W Nagar, Torangallu, Sandur, Bellary.

The Proposal has been considered in the 45th State Level Single Window Clearance Committee held on 3.10 2008 and after detailed discussions the project is approved to establish unit for manufacture of "Desulphurising Compound [DSC]" with an investment of Rs 45.00 crores, in 8 acres of land to be taken on sub-lease from M/s JSW Steel Ltd., Hence the following order.

Government Order No.CI 20 SPI 2009, Bangalore, Dated: 13th February 2009

In the circumstances explained above, The Government is pleased to approve the project proposal of M/s Gyenex De-sulphur India [P] Ltd., Bellary.

INFRASTRUCTURE FACILITIES:

Land: For manufacture of "Desulphurising Compound [DSC]" 8 acres of land to be taken on sub-lease from M/s JSW Steel Ltd., adjacent to the factory of M/s Jamipol at No.A/4/9, W Nagar ,Torangallu, Sandur, Bellary.

Power: BESCOM to service 500KVA power supply.

Water: the Unit shall adopt Rain Water harvesting waste water recycling.

Environment Clearnace: The promoters were advised to obtain EC from State No work shall commence without prior to EC, as per prevailing Law.

Pollution Control: The promoters were advised to obtain consent from KSPCB to establish the units.

Building and Machinery/Layout Plan Approval: The promoters to obtain prior approval for proposed building plan and machinery layout from factories and boilers Department.

Employment: The Company shall prepare a plan for development of human resource required for the project, train local people and provide employment to these trained local youth and comply with Government policy providing Employment to local people. A copy of human resource development plan shall be sent to the Commissioner for I.D. & Director of Industries and Commerce for monitoring.

Incentives and Concessions: As applicable under Industrial Policy 2006-11.

Statutory Approval and Clearances: Company to obtain statuory Clearance and apporver as applicable.

Others: The promoter shall provide employment to local Kanadigas as per Dr. Sarojini Mahishi Report, wherever possible solar lighting and solar water heating must be adopted. There shall no violation of zoning regulations.

In pursuance of the decision of the SLWCC, Government has no objection to sub-lease 8.0069 acres of land to M/s Gyenex De-sulphur India [P] Ltd., from M/s JSW Steel Ltd., as per the schedule given below

Sl.No	Village	Survey Nos.	Extent [Acres]
1	Torangallu	82	0.2823
2	Torangallu	83	1.5458
3	Torangallu	97	0.9468
4	Torangallu	98	1,658
5	Torangallu	154	3.574
	Total		**8.0069**

By order and in the name of the Governor of Karnataka,

APARNA PAVATE

Desk Officer (Technical Cell)

Commerce & Industries Department

P.R. 628

PERSONNEL AND ADMINISTRATIVE REFORMS SECRETARIAT

Government Order No. DPAR 04 SFP 2009, Bangalore, Dated:10th February, 2009

Sub: Redesignation & up-gradation of the Cadre post of Principal Chief Conservator of Forests in Karnataka State in terms of IFS (Pay) Amendment Rules, 2008- issue of orders- regarding.

Read: 1) Notification No. 14021/4/2008-AIS-II, dated :27.9.2008 of Government of India, DOPT, New Delhi.

2) Letter dated 27.9.2008 from the Government of India, Ministry of Personnel, Public Grievances & Pensions, Department of Personnel and Training, New Delhi, addressed to the Chief Secretaries of all the State Governments.

In pursuance of the letter dated 27.9.2008 of the Government of India read at Sl.No. 2 above and under rule 3(1)(D)(iii) of IFS (Pay) 2nd Amendment Rules, 2008 vide Government of India Notification read at Sl.No. 1 above the existing IFS cadre post of Principal Chief Conservator of Forests, Karnataka, Bangalore in the "Above Super Time Scale (HAG+) of Rs .75, 500/- (Annual increment at 3%) Rs. 80,000/- (fixed) Grade Pay-Nil" is upgraded and designated as Principal Chief Conservator of Forests (Head of Forest Force), Karnataka, Bangalore in the "Above Super Time Apex Scale of Rs.80,000/- (fixed) Grade Pay Nil w.e.f 27.9.2008 i.e. date of issue of Notification of IFS (Pay) Amendment Rules, 2008.

The incumbent who occupies the said post will be entitled to draw the apex scale of Rs. 80,000 (fixed) Grade Pay Nil as long as he/she occupies the said post.

The post of Principal Chief Conservator of Forests (Head of Forest Force) Karnataka Bangalore in the Apex scale shall be filled by Selection from amongst the IFS officers holding the post of PCCF in the State Cadre in the "Above Super Time Scale (HAG+)Rs. 75,500/- (annual increment of 3%)-80, 000/- Grade Pay Nil" as per Note 2 below rule 3(1) (D) of IFS Pay 2nd Amendment Rules, 2008.

By order and in the name of the Governor of Karnataka

ASHOK.P. ATRE

P.R. 630

Under Secretary to Government

Department of Personnel and Administrative Reforms (Services-4)

INFRASTRUCTURE DEVELOPMENT SECRETARIAT

Sub : Release of funds for construction of RuB in lieu of L.C.No. 31 between Gadag-Hulakoti Stations (Deposit works).

Read : 1) G.O. No. IDD 121 NSW 06 dated :16.6.2008.

2) G.O.No. IDD 65 NSW 08 dated :31.1.2009.

3) Letter No. RUB /GDG/154/Est dated :18.12.2008 from the Deputy Chief Engineer, Construction, SWR Hubli.

PREAMBLE:

In the Government Orders read at (1) & (2) above, Government of Karnataka has released so far an amount of Rs. 3.90 crore towards construction of RuB in lieu of L.C. No. 31 located between Gadag-Hulakoti Stations on deposit contribution work basis.

2. The Deputy Chief Engineer, Construction, SWR, Hubli in his letter read at (3) above has stated that as per the detailed estimate the total cost works out to be Rs .4.90 crores and has requested to release the balance amount of Rs. 1.00 crores towards construction of the said RuB.

3. The Proposal of Railways has been examined and it has been decided to release an amount of Rs .1.00 crore out of the Budget of Rs. 30.00 crore provided under Head of Account 5465-01-190-3-04 (P)-211K-RIDE ROB/BUB projects during 2008-09 Hence this order.

Government Order No.IDD 65 NSW 2008, Bangalore, Dated:12th February 2009

Government is pleased to release an amount of Rs. 1.00 Crores (one Crore Only) towards construction of RuB in lieu of L.C.No. 31 between Gadag-Hulakoti Stations for deposit contribution work.

2. This amount shall be met out under the Budgetary Head of Account 5465-01-190-3-04(P)-211K-RIDE, ROB/RUB projects.

3. The Chief Executive Officer, K-RIDE, is authorized to draw the amount on a payee's receipt duty countersigned by the Under Secretary to Govt., IDD and CFO, K-RIDE, shall in turn deposit the same with the Financial Advisor and Chief Accounts Officer (Construction), SWR, Bangalore.

4. This order is issued in exercise of the Financial Powers delegated vide, G.O.No. FD 1 TFP 2008 dated 16.5.08 to Secretaries/Principal Secretaries of Administrative Department.

By order and in the name of the Governor of Karnataka,

N. MANJULA GEETHA

P.R. 649

Under Secretary to Government

Infrastructure Development Department

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ: ಆಯುಷ್ (ಆಯುರ್ವೇದ, ಯೋಗ, ಯುನಾನಿ ಮತ್ತು ಹೋಮಿಯೋಪತಿ) ಪದವಿ ಕೋರ್ಸುಗಳ ವ್ಯಾಸಂಗಕ್ಕೆ ಪ್ರವೇಶ ಪರೀಕ್ಷೆಯನ್ನು ರದ್ದುಪಡಿಸುವ ಬಗ್ಗೆ.

ಪ್ರಸ್ತಾವನೆ:

ನಮ್ಮ ರಾಜ್ಯದಲ್ಲಿರುವ ಸರ್ಕಾರಿ ಮತ್ತು ಖಾಸಗಿ ಆಯುಷ್ (ಆಯುರ್ವೇದ, ಯೋಗ, ಯುನಾನಿ, ಮತ್ತು ಹೋಮಿಯೋಪತಿ) ವಿಜ್ಞಾನ ಸಂಸ್ಥೆಗಳಲ್ಲಿ ಬೋಧಿಸುತ್ತಿರುವ ಆಯುಷ್ (ಆಯುರ್ವೇದ, ಯೋಗ, ಯುನಾನಿ, ಮತ್ತು ಹೋಮಿಯೋಪತಿ) ವ್ಯಾಸಂಗಗಳಿಗೆ ಪ್ರವೇಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸುವ ಪ್ರವೇಶ ಪರೀಕ್ಷೆಯ ಮೂಲಕ ನೀಡಲಾಗುತ್ತಿದೆ.

ವಿಷಯವನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿದ ನಂತರ, ಆಯುಷ್ ((ಆಯುರ್ವೇದ, ಯೋಗ, ಯುನಾನಿ, ಮತ್ತು ಹೋಮಿಯೋಪತಿ) ಪದವಿ ವ್ಯಾಸಂಗದ ಪ್ರವೇಶಕ್ಕೆ ಪ್ರಸ್ತುತ ಜಾರಿಯಲ್ಲಿರುವ ಪ್ರವೇಶ ಪರೀಕ್ಷೆಯನ್ನು ರದ್ದುಪಡಿಸಿ, ದ್ವಿತೀಯ ಪಿಯುಸಿ/12ನೇ ತರಗತಿಯಲ್ಲಿ ಪಡೆದಿರುವ ಅಂಕಗಳ ಆಧಾರದ ಮೇಲೆ ಆಯುಷ್ (ಆಯುರ್ವೇದ, ಯೋಗ, ಯುನಾನಿ, ಮತ್ತು ಹೋಮಿಯೋಪತಿ) ಸೀಟುಗಳನ್ನು ಹಂಚಿಕೆ ಮಾಡಲು ಸರ್ಕಾರವು ತೀರ್ಮಾನಿಸಿ, ಈ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಆಕುಕ 47 ಪಿಟಿಡಿ 2009, ಬೆಂಗಳೂರು, ದಿನಾಂಕ: 5ನೇ ಮಾರ್ಚ್ 2009

2009–10ನೇ ಸಾಲಿನಿಂದ ಆಯುಷ್ (ಆಯುರ್ವೇದ, ಯೋಗ, ಯುನಾನಿ, ಮತ್ತು ಹೋಮಿಯೋಪತಿ) ಪದವಿ ಕೋರ್ಸುಗಳ ವ್ಯಾಸಂಗದ ಪ್ರವೇಶಕ್ಕೆ ಪ್ರಸ್ತುತ ಜಾರಿಯಲ್ಲಿರುವ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು (CET)ಈ ಕೂಡಲೇ ಜಾರಿಗೆ ಬರುವಂತೆ ರದ್ದುಪಡಿಸಿ, ಮುಂದಿನ ಆದೇಶದವರೆಗೆ ದ್ವಿತೀಯ ಪಿಯುಸಿ/12ನೇ ತರಗತಿಯಲ್ಲಿ ಕನಿಷ್ಠ ಶೇ 50 ರಷ್ಟು ಅಂಕಗಳನ್ನು ಪಡೆದಿರುವ ವಿದ್ಯಾರ್ಥಿಗಳಿಗೆ ಮೆರಿಟ್ ಆಧಾರದ ಮೇಲೆ ಆಯುಷ್ (ಆಯುರ್ವೇದ, ಯೋಗ, ಯುನಾನಿ, ಮತ್ತು ಹೋಮಿಯೋಪತಿ) ಪದವಿ ಕೋರ್ಸುಗಳ ವ್ಯಾಸಂಗಕ್ಕೆ ಸೀಟುಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಹಂಚಿಕೆ ಮಾಡಲು ಸರ್ಕಾರದ ಅನುಮೋದನೆ ನೀಡಲಾಗಿದೆ.

ವೈದ್ಯಕೀಯ ಮತ್ತು ಇಂಜನಿಯರಿಂಗ್ ವ್ಯಾಸಂಗಕ್ಕೆ ಕೌನ್ಸಿಲಿಂಗ್ ಮುಗಿದ ನಂತರ. ಆಯುಷ್ ವ್ಯಾಸಂಗಗಳಿಗೆ ಕೌನ್ಸಿಲಿಂಗನ್ನು ಜರುಗಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್. ಮಹಾಲಕ್ಷ್ಮಮ್ಮ

ಪಿ.ಆರ್. 860

ಸರ್ಕಾರದ ಅಧೀನ ಕಾರ್ಯದರ್ಶಿ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಭಾರತೀಯ ವೈದ್ಯ ಪದ್ಧತಿ)

ಶಿಕ್ಷಣ ಸಚಿವಾಲಯ

ತಿದ್ದುಪಡಿ ಆದೇಶ ಸಂಖ್ಯೆ:ಇಡಿ:193:ಯೋಯೋಕ 2008, ಬೆಂಗಳೂರು, ದಿನಾಂಕ:2ನೇ ಮಾರ್ಚ್, 2009

ವಿಷಯ: ಶಿಕ್ಷಣ ಇಲಾಖೆಯ ಉನ್ನತ ಶಿಕ್ಷಣ ವಲಯದಡಿ ಬರುವ ಕಾಲೇಜು ಶಿಕ್ಷಣ ಇಲಾಖೆಯಡಿ ಹೊಸ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸುವ ಬಗ್ಗೆ ಹೊರಡಿಸಿದ ಆದೇಶಕ್ಕೆ ತಿದ್ದುಪಡಿ ಮಾಡುವ ಕುರಿತು.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ:[ಇಡಿ:144:ಯೋಯೋಕಾ 2007, ದಿನಾಂಕ:23.7.2007]
[ಇಡಿ:105: ಸ್ವೀಮರ (ಯುನಿಕ್) 2009, ದಿನಾಂಕ:23.7.2007]

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರದ ಆದೇಶದ ಅನುಬಂಧದಲ್ಲಿನ

ಜಿಲ್ಲೆ	ಗ್ರಾಮದ ಹೆಸರು	ತಾಲ್ಲೂಕಿನ ಹೆಸರು
ಮೈಸೂರು	ಹನಗೋಡು	ಹುಣಸೂರು
ಹಾಸನ	ಹೆತ್ತೂರು	ಸಕಲೇಶಪುರ
ಚಿಕ್ಕಮಗಳೂರು	ಯಗಟಿ	ಕಡೂರು
ಉತ್ತರ ಕನ್ನಡ	ಬಾಡ	ಕುಮಟಾ

ಎಂಬುದಕ್ಕೆ ಬದಲಾಗಿ

ಜಿಲ್ಲೆ	ಗ್ರಾಮದ ಹೆಸರು	ತಾಲ್ಲೂಕಿನ ಹೆಸರು
ಬೆಳಗಾವಿ	ಯರಗಟ್ಟಿ	ಸವದತ್ತಿ
ಬಾಗಲಕೋಟೆ	ಕಲಾದಗಿ	ಬೀಳಗಿ
ಬಾಗಲಕೋಟೆ	ರಬಕವಿ–ಬನಹಟ್ಟಿ	ಜಮಖಂಡಿ
ಮೈಸೂರು	ಕೆ.ಆರ್. ನಗರ	ಕೆ.ಆರ್. ನಗರ

ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಉಳಿದ ಅಂಶಗಳು ಯಥಾವತ್ತಾಗಿ ಮುಂದುವರೆಯುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಐ.ಎಫ್. ಮಾಗಿ

ವಿಶೇಷಾಧಿಕಾರಿ ಹಾಗೂ ಪದನಿಮಿತ್ತ

ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಯೋಜನೆ)

ಪಿ.ಆರ್. 880

ಕಾರ್ಮಿಕ ಸಚಿವಾಲಯ

ವಿಷಯ: 1999ನೇ ಸಾಲಿನ ಪ್ರೋಬೇಷನರಿ ಸಹಾಯಕ ಕಾರ್ಮಿಕ ಆಯುಕ್ತರುಗಳು ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುತ್ತಾರೆಂದು ಘೋಷಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಅಧಿಸೂಚನೆ ಸಂಖ್ಯೆ :ಕಾಇ 326 ಎಲ್ಇಟಿ 2005(1) ದಿನಾಂಕ :25.1.2006.

2) ಸರ್ಕಾರದ ಪತ್ರ ಸಂಖ್ಯೆ :ಕಾಇ 326 ಎಲ್ಇಟಿ 2005, ದಿನಾಂಕ :17.2.2006.

3) ಕಾರ್ಮಿಕ ಆಯುಕ್ತರು, ಬೆಂಗಳೂರು ಇವರ ಪತ್ರ ಸಂಖ್ಯೆ :ಜಿಜಿಡ್‌ಟಿ/ಸಿಆರ್–144/2007–08, ದಿನಾಂಕ:15.4.2008.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ(1) ದಿನಾಂಕ:25.1.2006ರ ಸರ್ಕಾರಿ ಅಧಿಸೂಚನೆಯಲ್ಲಿ ಕರ್ನಾಟಕ ಗೆಜೆಟೆಡ್ ಪ್ರೋಬೇಷನರುಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕ) ನಿಯಮಗಳು 1977ರಡಿಯಲ್ಲಿ ಕರ್ನಾಟಕ ಲೋಕಸೇವಾ ಆಯೋಗದಿಂದ ಆಯ್ಕೆಗೊಂಡ ಒಟ್ಟು 5 ಅಭ್ಯರ್ಥಿಗಳನ್ನು ಸಹಾಯಕ ಕಾರ್ಮಿಕ ಆಯುಕ್ತರು ಹುದ್ದೆಗೆ ನೇಮಕಾತಿ ಆದೇಶ ನೀಡಲಾಗಿತ್ತು. ಸದರಿ ಅಧಿಸೂಚನೆಯಲ್ಲಿ ಈ ಸಹಾಯಕ ಕಾರ್ಮಿಕ ಆಯುಕ್ತರುಗಳನ್ನು 2 ವರ್ಷಗಳ ಕಾಲ ಪರಿವೀಕ್ಷಣಾ ಅವಧಿಯ ಮೇಲೆ ಇರುತ್ತಾರೆಂದು ಮತ್ತು ಈ ಅವಧಿಯಲ್ಲಿ ಸಹಾಯಕ ಕಾರ್ಮಿಕ ಆಯುಕ್ತರ ಹುದ್ದೆಗೆ ನಿಗಧಿಪಡಿಸಿರುವ ಎಲ್ಲಾ ಇಲಾಖಾ ಪರೀಕ್ಷೆಗಳಲ್ಲಿ ತೇರ್ಗಡೆಯಾಗಬೇಕೆಂದು ತಿಳಿಸಲಾಗಿತ್ತು. ನೇಮಕಗೊಂಡ 5 ಸಹಾಯಕ ಕಾರ್ಮಿಕ ಆಯುಕ್ತರುಗಳು ಕರ್ತವ್ಯಕ್ಕೆ ಹಾಜರಾಗಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ದಿನಾಂಕ:17.2.2006ರ ಸರ್ಕಾರದ ಪತ್ರದಲ್ಲಿ ಎಲ್ಲಾ 5 ಜನ ಸಹಾಯಕ ಕಾರ್ಮಿಕ ಆಯುಕ್ತರುಗಳಿಗೆ ಎರಡು ವರ್ಷಗಳ ತರಬೇತಿಗಾಗಿ ತೈನಾತಿಸಲಾಗಿತ್ತು.

ಕಾರ್ಮಿಕ ಆಯುಕ್ತರು ಮೇಲೆ ಓದಲಾದ ಕ್ರಮಸಂಖ್ಯೆ (3) ದಿನಾಂಕ:15.4.2008ರ ಪತ್ರದಲ್ಲಿ 1999ನೇ ಬ್ಯಾಚ್‌ನ ಪ್ರೋಬೇಷನರಿ ಸಹಾಯಕ ಕಾರ್ಮಿಕ ಆಯುಕ್ತರುಗಳ ಪೈಕಿ ಶ್ರೀ ಗಿರೀಶ್ ಎಸ್. ಪಾಟೀಲ್, ಪ್ರೋಬೇಷನರಿ ಸಹಾಯಕ ಕಾರ್ಮಿಕ ಆಯುಕ್ತರವರು ಯಾವುದೇ ದಾಖಲೆ ಒದಗಿಸಿರುವುದಿಲ್ಲವೆಂದು ತಿಳಿಸಿದ್ದಾರೆ. ಉಳಿದ ಪ್ರೋಬೇಷನರಿ ಸಹಾಯಕ ಕಾರ್ಮಿಕ ಆಯುಕ್ತರುಗಳ ಪರೀಕ್ಷಾರ್ಥಿ ಅವಧಿಯು ಅವರುಗಳ ಹೆಸರುಗಳ ಎದುರಿಗೆ ನಮೂದಿಸಿರುವ ದಿನಾಂಕದಂದು ಮುಕ್ತಾಯವಾಗಿರುತ್ತದೆಂದು ಹಾಗೂ ನಿಗಧಿತ ಇಲಾಖಾ ಪರೀಕ್ಷೆಗಳಲ್ಲಿ (ಕನ್ನಡ ಭಾಷಾ ವಿನಾಯಿತಿ ಸೇರಿ) ಉತ್ತೀರ್ಣರಾಗಿರುತ್ತಾರೆಂದು, ಇವರುಗಳ ವಿರುದ್ಧ ಯಾವುದೇ ಇಲಾಖಾ ವಿಚಾರಣೆ ಅಥವಾ ಕ್ರಿಮಿನಲ್ ಮೊಕದ್ದಮೆಗಳು ಬಾಕಿ ಇರುವುದಿಲ್ಲ ಆದ್ದರಿಂದ ಈ ಪತ್ರಾಂಕಿತ ಅಧಿಕಾರಿಗಳು 1977ರ ಕರ್ನಾಟಕ ನಾಗರೀಕ ಸೇವಾ (ಪರೀಕ್ಷಾರ್ಥಿ) ನಿಯಮಾವಳಿಯ ನಿಯಮ 5ರನ್ವಯ ಪರೀಕ್ಷಾರ್ಥಿ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುತ್ತಾರೆಂದು ಘೋಷಿಸುವಂತೆ ಕಾರ್ಮಿಕ ಆಯುಕ್ತರು ಕೋರಿರುತ್ತಾರೆ. ಇದನ್ನು ಪರಿಶೀಲಿಸಿದಲ್ಲಿ ಶ್ರೀಮತಿ ಎ.ಜೆ. ಶ್ರೀವಳ್ಳಿ, ಪ್ರೋಬೇಷನರಿ ಸಹಾಯಕ ಕಾರ್ಮಿಕ ಆಯುಕ್ತರು ಇವರ ಕಾರ್ಯನಿರ್ವಹಣಾ ವರದಿ ಲಭ್ಯವಿರುವುದಿಲ್ಲ.

ಕಾರ್ಮಿಕ ಆಯುಕ್ತರು, ಬೆಂಗಳೂರು, ಇವರು 3 ಜನ ಪರಿವೀಕ್ಷಣಾ ಸಹಾಯಕ ಕಾರ್ಮಿಕ ಆಯುಕ್ತರುಗಳ ಬಗ್ಗೆ ನಿಗಧಿತ ಇಲಾಖಾ ಪರೀಕ್ಷೆಗಳಲ್ಲಿ (ಕನ್ನಡ ಭಾಷಾ ವಿನಾಯಿತಿ ಸೇರಿ) ಉತ್ತೀರ್ಣರಾಗಿರುವುದಾಗಿ ಹಾಗೂ ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವಾಗಿ ನಿರ್ವಹಿಸಿರುತ್ತಾರೆ ಎಂದು ಶಿಫಾರಸ್ಸು ಮಾಡಿರುವುದರಿಂದ ಕರ್ನಾಟಕ ನಾಗರೀಕ ಸೇವಾ (ಪರಿವೀಕ್ಷಣಾ) ನಿಯಮಗಳು 1977ರ ನಿಯಮ 5(1) ರನ್ವಯ ಈ ಕೆಳಕಂಡ 3 ಜನ ಪರಿವೀಕ್ಷಣಾ ಸಹಾಯಕ ಕಾರ್ಮಿಕ ಆಯುಕ್ತರುಗಳು ತೃಪ್ತಿಕರವಾಗಿ ಪರಿವೀಕ್ಷಣಾ ಅವಧಿಯನ್ನು ಪೂರೈಸಿರುತ್ತಾರೆಂದು ಘೋಷಿಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶದ ಸಂಖ್ಯೆ:ಕಾಇ 153 ಎಲ್ ಇಟಿ 2008, ಬೆಂಗಳೂರು, ದಿನಾಂಕ:12ನೇ ಮಾರ್ಚ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಈ ಕೆಳಕಂಡ ಪರಿವೀಕ್ಷಣಾ ಸಹಾಯಕ ಕಾರ್ಮಿಕ ಆಯುಕ್ತರುಗಳು ಅವರ ಹೆಸರಿನ ಮುಂದೆ ಕಲಂ 4ರಲ್ಲಿ ನಮೂದಿಸಿರುವ ದಿನಾಂಕದಿಂದ ಜಾರಿಗೆ ಬರುವಂತೆ ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುತ್ತಾರೆಂದು ಕರ್ನಾಟಕ ನಾಗರೀಕ ಸೇವಾ (ಪರಿವೀಕ್ಷಣಾ) ನಿಯಮಗಳು 1977ರ ನಿಯಮ 5(1)ರಡಿ ಘೋಷಿಸಲಾಗಿದೆ.

ಕ್ರ. ಸಂ.	ಪರಿವೀಕ್ಷಣಾ ಸಹಾಯಕ ಕಾರ್ಮಿಕ ಆಯುಕ್ತರ ಹೆಸರು	ಕರ್ತವ್ಯಕ್ಕೆ ಹಾಜರಾದ ದಿನಾಂಕ	ಪರಿವೀಕ್ಷಣಾ ಅವಧಿ ಮುಕ್ತಾಯವಾದ ದಿನಾಂಕ
1	ಶ್ರೀ ರವಿಕುಮಾರ್ ಎಸ್.ಬಿ	30.1.2006	30.1.2008
2	ಶ್ರೀ ಉಮೇಶ್ ಎ.ಹೆಚ್.	30.1.2006	30.1.2008
3	ಶ್ರೀ ವೆಂಕಟೇಶ್ ಅಪ್ಪಯ್ಯ ಸಿಂಧಿಹಟ್ಟಿ	3.2.2006	3.2.2008

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 931

ಯು.ಎನ್.ನಾಗೇಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ, ಕಾರ್ಮಿಕ ಇಲಾಖೆ

ವಿಷಯ : 1998ನೇ ಸಾಲಿನ ಪ್ರೊಬೇಷನರಿ ಸಹಾಯಕ ಕಾರ್ಮಿಕ ಆಯುಕ್ತರುಗಳು ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುತ್ತಾರೆಂದು ಘೋಷಿಸುವ ಬಗ್ಗೆ.

ಓದಲಾಗಿದೆ :
1) ಸರ್ಕಾರದ ಅಧಿಸೂಚನೆ ಸಂಖ್ಯೆ :ಕಾಇ 47 ಎಲ್ಇಟಿ 2006 ದಿನಾಂಕ :15.5.2006.
2) ಸರ್ಕಾರದ ಪತ್ರ ಸಂಖ್ಯೆ :ಕಾಇ 47 ಎಲ್ಇಟಿ 2006, ದಿನಾಂಕ :26.6.2006.
3) ಕಾರ್ಮಿಕ ಆಯುಕ್ತರು, ಬೆಂಗಳೂರು ಇವರ ಪತ್ರ ಸಂಖ್ಯೆ :ಜಿಜಡ್‌ಟಿ/ಸಿಆರ್–144/2007–08, ದಿನಾಂಕ :25.6.2008.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಸಂಖ್ಯೆ(1) ದಿನಾಂಕ:15.5.2006ರ ಸರ್ಕಾರಿ ಅಧಿಸೂಚನೆಯಲ್ಲಿ ಕರ್ನಾಟಕ ಗೆಜೆಟೆಡ್ ಪ್ರೊಬೇಷನರುಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕ) ನಿಯಮಗಳು 1977ರಡಿಯಲ್ಲಿ ಕರ್ನಾಟಕ ಲೋಕಸೇವಾ ಆಯೋಗದಿಂದ ಆಯ್ಕೆಗೊಂಡ ಒಟ್ಟು 3 ಅಭ್ಯರ್ಥಿಗಳಿಗೆ ಸಹಾಯಕ ಕಾರ್ಮಿಕ ಆಯುಕ್ತರು ಹುದ್ದೆಗೆ ನೇಮಕಾತಿ ಆದೇಶ ನೀಡಲಾಗಿತ್ತು. ಸದರಿ ಅಧಿಸೂಚನೆಯಲ್ಲಿ ಈ ಅಭ್ಯರ್ಥಿಗಳು 2 ವರ್ಷಗಳ ಕಾಲ ಪರಿವೀಕ್ಷಣಾ ಅವಧಿಯ ಮೇಲೆ ಇರುತ್ತಾರೆಂದು ಮತ್ತು ಈ ಅವಧಿಯಲ್ಲಿ ಸಹಾಯಕ ಕಾರ್ಮಿಕ ಆಯುಕ್ತರ ಹುದ್ದೆಗೆ ನಿಗಧಿಪಡಿಸಿರುವ ಎಲ್ಲಾ ಇಲಾಖಾ ಪರೀಕ್ಷೆಗಳಲ್ಲಿ ತೇರ್ಗಡೆಯಾಗಬೇಕೆಂದು ತಿಳಿಸಲಾಗಿತ್ತು. ನೇಮಕಗೊಂಡ 3 ಸಹಾಯಕ ಕಾರ್ಮಿಕ ಆಯುಕ್ತರುಗಳು ಕರ್ತವ್ಯಕ್ಕೆ ಹಾಜರಾಗಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ದಿನಾಂಕ:26.6.2006ರ ಸರ್ಕಾರದ ಪತ್ರದಲ್ಲಿ ಎಲ್ಲಾ 3 ಜನ ಸಹಾಯಕ ಕಾರ್ಮಿಕ ಆಯುಕ್ತರುಗಳಿಗೆ ಎರಡು ವರ್ಷಗಳ ತರಬೇತಿಗಾಗಿ ತೈನಾತಿಸಲಾಗಿತ್ತು.

ಕಾರ್ಮಿಕ ಆಯುಕ್ತರು ಮೇಲೆ ಓದಲಾದ ಕ್ರಮಸಂಖ್ಯೆ (3) ದಿನಾಂಕ:25.6.2008ರ ಪತ್ರದಲ್ಲಿ 1998ನೇ ಬ್ಯಾಚ್‌ನ ಪ್ರೊಬೇಷನರಿ ಸಹಾಯಕ ಕಾರ್ಮಿಕ ಆಯುಕ್ತರುಗಳ ಪರೀಕ್ಷಾರ್ಥಿ ಅವಧಿಯು ಅವರುಗಳ ಹೆಸರುಗಳ ಎದುರಿಗೆ ನಮೂದಿಸಿರುವ ದಿನಾಂಕದಂದು ಮುಕ್ತಾಯವಾಗಿರುತ್ತದೆಂದು ಹಾಗೂ ನಿಗಧಿತ ಇಲಾಖಾ ಪರೀಕ್ಷೆಗಳಲ್ಲಿ (ಕನ್ನಡ ಭಾಷಾ ವಿನಾಯಿತಿ ಸೇರಿ) ಉತ್ತೀರ್ಣರಾಗಿರುತ್ತಾರೆಂದು, ಇವರುಗಳ ವಿರುದ್ದ ಯಾವುದೇ ಇಲಾಖಾ ವಿಚಾರಣೆ ಅಥವಾ ಕ್ರಿಮಿನಲ್ ಮೊಕದ್ದಮೆಗಳು ಬಾಕಿ ಇರುವುದಿಲ್ಲವೆಂದೂ ಆದ್ದರಿಂದ ಈ ಪತ್ರಾಂಕಿತ ಅಧಿಕಾರಿಗಳು 1977ರ ಕರ್ನಾಟಕ ನಾಗರೀಕ ಸೇವಾ (ಪರಿವೀಕ್ಷಣಾ) ನಿಯಮಾವಳಿಯ ನಿಯಮ 5ರನ್ವಯ ಪರೀಕ್ಷಾರ್ಥಿ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುತ್ತಾರೆಂದು ಘೋಷಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಕಾರ್ಮಿಕ ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿ ಕರ್ನಾಟಕ ನಾಗರೀಕ ಸೇವಾ (ಪರಿವೀಕ್ಷಣಾ) ನಿಯಮಗಳು 1977ರ ನಿಯಮ 5(1) ರನ್ವಯ ಈ ಕೆಳಕಂಡ 3 ಜನ ಸಹಾಯಕ ಕಾರ್ಮಿಕ ಆಯುಕ್ತರುಗಳು ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುತ್ತಾರೆಂದು ಘೋಷಿಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶದ ಸಂಖ್ಯೆ:ಕಾಇ 266 ಎಲ್‌ಇಟಿ 2008, ಬೆಂಗಳೂರು, ದಿನಾಂಕ:12ನೇ ಮಾರ್ಚ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಈ ಕೆಳಕಂಡ 3 ಮಂದಿ ಸಹಾಯಕ ಕಾರ್ಮಿಕ ಆಯುಕ್ತರುಗಳು ಅವರ ಹೆಸರಿನ ಮುಂದೆ ಕಲಂ 4ರಲ್ಲಿ ನಮೂದಿಸಿರುವ ದಿನಾಂಕದಿಂದ ಜಾರಿಗೆ ಬರುವಂತೆ ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುತ್ತಾರೆಂದು ಕರ್ನಾಟಕ ನಾಗರೀಕ ಸೇವಾ (ಪರಿವೀಕ್ಷಣಾ) ನಿಯಮಗಳು 1977ರ ನಿಯಮ 5(1)ರಡಿ ಘೋಷಿಸಲಾಗಿದೆ.

ಕ್ರ.ಸಂ	ಪರಿವೀಕ್ಷಣಾ ಸಹಾಯಕ ಕಾರ್ಮಿಕ ಆಯುಕ್ತರ ಹೆಸರು	ಕರ್ತವ್ಯಕ್ಕೆ ಹಾಜರಾದ ದಿನಾಂಕ	ಪರಿವೀಕ್ಷಣಾ ಅವಧಿ ಮುಕ್ತಾಯವಾದ ದಿನಾಂಕ
1	ಶ್ರೀ ಶ್ರೀಪಾದ ಎಸ್. ಬೋಳಶೆಟ್ಟಿ	25.5.2006	25.5.2008
2	ಶ್ರೀ ಚಿದಾನಂದ ಎಂ.ಎಸ್	25.5.2006	22.5.2008
3	ಶ್ರೀ ಸಿ.ಹೆಚ್. ಬಾಲಕೃಷ್ಣ	29.5.2006	29.5.2008

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಯು.ಎನ್.ನಾಗೇಂದ್ರ
ಸರ್ಕಾರದ ಅಧೀನ ಕಾರ್ಯದರ್ಶಿ, ಕಾರ್ಮಿಕ ಇಲಾಖೆ

ಪಿ.ಆರ್. 932

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ: ಶ್ರೀ ಎ.ಕೆ. ಸೋಮಣ್ಣ, ನಿವೃತ್ತ ಅಪರ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಅವರ ವಿರುದ್ಧ ಇಲಾಖಾ ವಿಚಾರಣೆ–ಆರೋಪ ಮುಕ್ತರನ್ನಾಗಿಸಿ ಅಂತಿಮ ಆದೇಶವನ್ನು ಹೊರಡಿಸುವ ಬಗ್ಗೆ.

ಓದಲಾಗಿದೆ:
1) ನೋಟೀಸ್ ಸಂಖ್ಯೆ ಸಿಆಸುಇ 190 ಎಸ್‌ಇಎನ್ 2006, ದಿನಾಂಕ :2.1.2008
2) ಶ್ರೀ ಎ.ಕೆ. ಸೋಮಣ್ಣ ನಿವೃತ್ತ ಅಪರ ನಿರ್ದೇಶಕರು, ಕೈಗಾರಿಕೆ ಮತು ವಾಣಿಜ್ಯ ಇಲಾಖೆ ಅವರ ದಿನಾಂಕ :17.1.2008ರ ಉತ್ತರ.

ಪ್ರಸ್ತಾವನೆ:

ಶ್ರೀ ಎ.ಕೆ. ಸೋಮಣ್ಣ ನಿವೃತ್ತ ಅಪರ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಅವರು ಯೋಜನಾ ಸಮನ್ವಯಾಧಿಕಾರಿ, ಬಿ.ಎಂ.ಐ.ಸಿ.ಪಿ. ಈ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆಸಲಾದ ಸಭೆಗೆ ಹಾಜರಾಗದೆ ಉಳಿದ ಹಾಗೂ ವ್ಯಾಜ್ಯ ನಿರ್ವಹಣಾಧಿಕಾರಿಯಾಗಿದ್ದೂ ಸಹ ನ್ಯಾಯಾಲಯದ ಮುಂದೆ ಸಲ್ಲಿಸಲಾದ ಪ್ರಮಾಣ ಪತ್ರವನ್ನು ಪ್ರಮಾಣಿಸದೇ ನಿರಾಕರಿಸಿದ ಆರೋಪಗಳಿಗಾಗಿ ಅವರಿಗೆ ಮೇಲೆ (1)ರಲ್ಲಿ ಓದಲಾದ ದಿನಾಂಕ:2.1.2008ರ ನೋಟೀಸ್ ನೀಡಿ ಸಮುಜಾಯಿಷಿಯನ್ನು ಕೇಳಲಾಗಿತ್ತು.

ಆರೋಪಿ ನಿವೃತ್ತ ಅಧಿಕಾರಿ ಶ್ರೀ ಎ.ಕೆ. ಸೋಮಣ್ಣ ನಿವೃತ್ತ ಅಪರ ನಿರ್ದೇಶಕರು ಅವರು ಮೇಲೆ (2)ರಲ್ಲಿ ಓದಲಾದ ದಿನಾಂಕ:17.1.2008ರ ಉತ್ತರವನ್ನು ಸಲ್ಲಿಸಿ ಅವರ ವೈಯಕ್ತಿಕ ಜೀವನದಲ್ಲಿ ನಡೆದ ದುರ್ಘಟನೆಯಿಂದಾಗಿ ಅವರು ವ್ಯಾಕುಲರಾಗಿದ್ದು, ಅದರ ಪರಿಣಾಮವಾಗಿ ಈ ರೀತಿಯಾಗಿದೆಯೇ ಹೊರತು ಇನ್ನಾವುದೇ ದುರ್ನಡತೆ ಇರುವುದಿಲ್ಲ ಎಂದು ತಿಳಿಸಿ, ತಮ್ಮನ್ನು ಆರೋಪ ಮುಕ್ತರನ್ನಾಗಿಸಲು ಕೋರಿದ್ದಾರೆ ಅವರ ಉತ್ತರವನ್ನು ಪರಿಶೀಲಿಸಿದ ಸರ್ಕಾರವು ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 190 ಎಸ್‌ಇಎನ್ 2006, ಬೆಂಗಳೂರು, ದಿನಾಂಕ:17ನೇ ಮಾರ್ಚ್ 2009

ಸರ್ಕಾರವು ಶ್ರೀ ಎ.ಕೆ. ಸೋಮಣ್ಣ ನಿವೃತ್ತ ಅಪರ ನಿರ್ದೇಶಕರು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಅವರನ್ನು ದಿನಾಂಕ:2.1.2008ರ ನೋಟೀಸ್‌ನಲ್ಲಿ ಮಾಡಲಾದ ಆರೋಪಗಳಿಂದ ಮುಕ್ತರನ್ನಾಗಿಸುತ್ತದೆ. ಒಂದು ವೇಳೆ ಈ ವಿಚಾರಣೆ ನಡೆಯದೇ ಇದ್ದಲ್ಲಿ ಶ್ರೀ ಎ.ಕೆ. ಸೋಮಣ್ಣ ಅವರು ಯಾವ ಸೌಲಭ್ಯಗಳನ್ನು ಪಡೆಯುತ್ತಿದ್ದರೋ ಅವುಗಳನ್ನು ಪಡೆಯಲು ಅರ್ಹರಿರುತ್ತಾರೆ. ಅದಾಗ್ಯೂ ಅವರಿಗೆ ಈ ರೀತಿ ಸನ್ನಿವೇಶಗಳು ಉದ್ಭವಿಸಿರುವುದರ ವಿರುದ್ಧ ತೀವ್ರ ಎಚ್ಚರಿಕೆಯನ್ನು ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಎಸ್. ಶಿವರಾಮ್
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–3)

ಪಿ.ಆರ್. 934

ಸಹಕಾರ ಸಚಿವಾಲಯ

ವಿಷಯ: ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:3769/2008 (ಸಿಎಸ್) ರಲ್ಲಿ ಕೋದಂಡರಾಮಸ್ವಾಮಿ ವ್ಯವಸಾಯ ಸೇವಾ ಸಹಕಾರ ಸಂಘ ನಿಯಮಿತ, ಮೈಸೂರು ವಿರುದ್ಧ ರಾಜ್ಯ ಸರ್ಕಾರ ಮತ್ತು ಇತರರು.

ಓದಲಾಗಿದೆ: ಸರ್ಕಾರಿ ವಕೀಲರ ಪತ್ರ ದಿನಾಂಕ :25.2.2009

ಪ್ರಸ್ತಾವನೆ:

ಉಲ್ಲೇಖಿತ ಸರ್ಕಾರಿ ವಕೀಲರ ಪತ್ರದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯವು ಮೇಲ್ಕಂಡ ರಿಟ್ ಅರ್ಜಿಯನ್ನು ದಿನಾಂಕ:20.2.2009ರಲ್ಲಿ ಇತ್ಯರ್ಥಪಡಿಸಿದ್ದು, ಈ ರಿಟ್ ಅರ್ಜಿಯ ಸಂಬಂಧ ಗೌರವ ಉಚ್ಚ ನ್ಯಾಯಾಲಯವು ನೀಡಿದ ಆದೇಶಕ್ಕೆ ಪ್ರತಿವಾದಿಗಳು ಸಕಾರಾತ್ಮಕ ಕ್ರಮವನ್ನು ಕೈಗೊಳ್ಳದ ಕಾರಣ ವೆಚ್ಚ ರೂ. 10,000.00ಗಳನ್ನು ಭರಿಸಲು ಆದೇಶಿಸಿರುತ್ತದೆ. ಎಂದೂ ಈ ವೆಚ್ಚವನ್ನು 2, 3 ಮತ್ತು 5ನೇ ಪ್ರತಿವಾದಿಗಳು ಭರಿಸುವ ಬಾಬ್ತು 1ನೇ ಪ್ರತಿವಾದಿಯಾದ ರಾಜ್ಯ ಸರ್ಕಾರವು ಜವಾಬ್ದಾರಿ ನಿಗದಿಪಡಿಸಲು ನಿರ್ದೇಶಿಸಿರುತ್ತದೆ ಎಂದು ತಿಳಿಸಲಾಗಿದೆ. ಈ ಹಿನ್ನಲೆಯಲ್ಲಿ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಸಿಇ 14 ಸಿಡಬ್ಲ್ಯೂಪಿ 2009, ಬೆಂಗಳೂರು, ದಿನಾಂಕ: 17ನೇ ಮಾರ್ಚ್ 2009

ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನೆಲೆಯಲ್ಲಿ ಗೌರವ ಉಚ್ಚನ್ಯಾಯಾಲಯವು ವಿಧಿಸಿರುವ ರೂ. 10,000.00 (ಹತ್ತು ಸಾವಿರ ರೂಪಾಯಿ ಮಾತ್ರ) ಗಳು ವೆಚ್ಚದ ಬಾಬ್ತು ರಿಟ್ ಅರ್ಜಿಯಲ್ಲಿನ ಪ್ರತಿವಾದಿಗಳ ಪೈಕಿ 2ನೇ ಪ್ರತಿವಾದಿಯು ರೂ. 4,000.00 3ನೇ ಪ್ರತಿವಾದಿಯು ರೂ. 4,000.00 ಹಾಗೂ 5ನೇ ಪ್ರತಿವಾದಿಯು ರೂ. 2,000,00 ಗಳನ್ನು ಭರಿಸಲು ಆದೇಶಿಸಲಾಗಿದೆ. ಈ ವೆಚ್ಚವನ್ನು ಗೌರವ ಉಚ್ಚ ನ್ಯಾಯಾಲಯದಲ್ಲಿ ದಿನಾಂಕ:20.3.2009ರ ಒಳಗಾಗಿ ಠೇವಣಿಸುವಂತೆ ಆದೇಶಿಸಿದೆ. ಈ ಸಂಬಂಧ ಸರ್ಕಾರಿ ವಕೀಲರಿಗೆ/ಸರ್ಕಾರಕ್ಕೆ ವರದಿ ಸಲ್ಲಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 946

ಎನ್.ಸಿ. ಮುನಿಯಪ್ಪ

ಕಾರ್ಯದರ್ಶಿ, ಸಹಕಾರ ಇಲಾಖೆ

ವಿಷಯ: ಶ್ರೀ ರಾಯ್‌ಚಂದ್ ಜೈನ್, ವರ್ತಕರ ಪ್ರತಿನಿಧಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸುರಪುರ ಇವರ ಸದಸ್ಯತ್ವವನ್ನು ರದ್ದುಪಡಿಸುವ ಕುರಿತು.

ಓದಲಾಗಿದೆ:
1) ನಿರ್ದೇಶಕರು, ಕೃಷಿ ಮಾರಾಟ ಇಲಾಖೆ ಇವರ ಕಡತ ಸಂಖ್ಯೆ :ಕೃಮಾಇ/99/ಚುನಾವಣೆ/2008.
2) ಸರ್ಕಾರದ ತಿಳುವಳಿಕೆ ನೋಟೀಸು ಸಂಖ್ಯೆ :ಸಇ 14 ಎಂಆರ್‌ಇ 2008 ದಿನಾಂಕ :1.2.2008
3) ಶ್ರೀ ರಾಯ್‌ಚಂದ್ ಜೈನ್, ವರ್ತಕರ ಪ್ರತಿನಿಧಿ ಹಾಗೂ ಸದಸ್ಯರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸುರಪುರ ಇವರ ಲಿಖಿತ ಹೇಳಿಕೆ ದಿನಾಂಕ :19.2.2008.
4) ನಿರ್ದೇಶಕರು, ಕೃಷಿ ಮಾರಾಟ ಇಲಾಖೆ ಇವರ ಪತ್ರ ಸಂಖ್ಯೆ :ಕೃಮಾಇ/99/ಚುನಾವಣೆ/2008 ದಿನಾಂಕ :1.1.2009.

ಪ್ರಸ್ತಾವನೆ:

ಶ್ರೀ ರಾಯ್‌ಚಂದ್ ಜೈನ್, ವರ್ತಕರ ಸಂಘದ ಪ್ರತಿನಿಧಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸುರಪುರ ಇವರು ಕೃಷಿ ಮಾರಾಟ ಇಲಾಖೆಯ ಅಧಿಕಾರಿಗಳಾದ ಶ್ರೀ ಎಸ್. ನಂಜಯ್ಯ ಮಾರುಕಟ್ಟೆ ಅಧಿಕಾರಿ ಹಾಗೂ ಶ್ರೀ ಎನ್. ರಾಮಸುಬ್ಬಯ್ಯ, ಉಪ ನಿರ್ದೇಶಕರು, ಕಾನೂನು ಜಾರಿಕೋಶ, ಉತ್ತರ ವಲಯ, ಹುಬ್ಬಳ್ಳಿ ಇವರು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ಕಾಯ್ದೆ 1966 ರನ್ವಯ ಕಾನೂನು ಜಾರಿಕೋಶದ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದಾಗ ಅವರುಗಳ ಮೇಲೆ ಹಲ್ಲೆ ನಡೆಸಿರುವುದು ಹಾಗೂ ಈ ಕುರಿತಾಗಿ ಆರಕ್ಷಕ ನಿರೀಕ್ಷಕರು ಸುರಪುರ ಪೋಲೀಸ್ ಠಾಣೆಯಲ್ಲಿ ದೂರು ದಾಖಲಾಗಿರುವ ಹಿನ್ನೆಲೆಯಲ್ಲಿ ಇವರ ದುರ್ನಡತೆಗಾಗಿ ಶಿಸ್ತು ಕ್ರಮ ಕೈಗೊಳ್ಳಲು ಮೇಲೆ (1) ರಲ್ಲಿ ಓದಲಾದ ಕೃಷಿ ಮಾರಾಟ ಇಲಾಖೆಯ ಕಡತದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು.

ಶ್ರೀ ರಾಯ್‌ಚಂದ್ ಜೈನ್, ವರ್ತಕರ ಸಂಘದ ಪ್ರತಿನಿಧಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸುರಪುರ ಇವರಿಗೆ ಈ ಬಗ್ಗೆ ಮೇಲೆ [2]ರಲ್ಲಿ ಓದಲಾದ ಸರ್ಕಾರದ ತಿಳುವಳಿಕೆ ನೋಟೀಸು ಜಾರಿ ಮಾಡಿ 15 ದಿನಗಳ ಒಳಗೆ ಅವರ ಲಿಖಿತ ಹೇಳಿಕೆ ಸಲ್ಲಿಸುವಂತೆ ಸೂಚಿಸಲಾಗಿತ್ತು.

ಮೇಲೆ (3)ರಲ್ಲಿ ಓದಲಾದ ಪತ್ರದಲ್ಲಿ ಶ್ರೀ ರಾಯ್‌ಚಂದ್ ಜೈನ್, ವರ್ತಕರ ಸಂಘದ ಪ್ರತಿನಿಧಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸುರಪುರ ರವರು ಲಿಖಿತ ಹೇಳಿಕೆಯನ್ನು ನೀಡಿ ಆರೋಪಗಳನ್ನು ಅಲ್ಲಗಳೆದು ಕೃಷಿ ಮಾರಾಟ ಇಲಾಖೆಯ ಕಾನೂನು ಜಾರಿಕೋಶದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ವಿನಂತಿಸಿದ್ದರು.

ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ರವರು ಶ್ರೀ ರಾಯ್‌ಚಂದ್ ಜೈನ್, ವರ್ತಕರ ಸಂಘದ ಪ್ರತಿನಿಧಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸುರಪುರ ರವರು ಸರ್ಕಾರದ ತಿಳುವಳಿಕೆ ನೋಟೀಸಿಗೆ ಸಲ್ಲಿಸಿದ ಲಿಖಿತ ಹೇಳಿಕೆಗಳಿಗೆ ಕಂಡಿಕೆವಾರು ಉತ್ತರಗಳನ್ನು ನೀಡಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸುರಪುರ ಪ್ರಾಂಗಣದಲ್ಲಿರುವ ರಾವತ್ ಮುಲ್ಲಾ ಅಂಡ್ ಸನ್ಸ್, ದಲ್ಲಾಲರು ಹಾಗೂ ಉದಯ್ ಟ್ರೇಡಿಂಗ್ ಕಂಪನಿರವರಿಗೆ ಸೇರಿದ ಅಂಗಡಿ–ವ–ಗೋದಾಮು ಸಂಖ್ಯೆ 1ರ ಮುಂದೆ ನಿಯಂತ್ರಿತ ಹುಟ್ಟುವಳಿಯಾದ ಸೂರ್ಯಪಾನ ಬೀಜವನ್ನು ಲಾರಿಗೆ ತುಂಬುತ್ತಿರುವ ಸಂದರ್ಭದಲ್ಲಿ ಕಾನೂನು ಜಾರಿಕೋಶದ ಅಧಿಕಾರಿಗಳು ದಾಖಾಲಾತಿಗಳನ್ನು ಕೇಳಿದಾಗ ದಾಖಲಾತಿಗಳನ್ನು ನಿರ್ವಹಿಸಿಲ್ಲವೆಂದು ಇದು ನಿಯಮಬಾಹಿರವಾಗಿರುವುದಾಗಿ ಸದರಿ ಗೋದಾಮಿನ ಭೌತಿಕ ದಾಸ್ತಾನು ದೃಢೀಕರಿಸಲು ಮುಂದಾದಾಗ ಶ್ರೀ ಕಿಶೋರ್‌ಚಂದ್ರ ಜೈನ್, ವರ್ತಕ ಸಂಘದ ಅಧ್ಯಕ್ಷರು ಹಾಗೂ ಶ್ರೀ ರಾಯ್‌ಚಂದ್ ಜೈನ್, ವರ್ತಕ ಸಂಘದ ಪ್ರತಿನಿಧಿ ಹಾಗೂ ಸಮಿತಿ ಸದಸ್ಯರು ಧಾವಿಸಿ ಏಕಾಏಕಿ ಅಧಿಕಾರಿಗಳಿಗೆ ಅಸಭ್ಯವಾಗಿ ಮಾತನಾಡಿ ಅವಾಚ್ಯ ಶಬ್ದಗಳಿಂದ ನಿಂಧಿಸಿ, ಕಾಗದ ಪತ್ರಗಳನ್ನು ಹರಿದು ಹಾಕಿ ಹಲ್ಲೆ ಮಾಡಿ ಸರ್ಕಾರದ ಕೆಲಸಕ್ಕೆ ಅಡ್ಡಿ ಉಂಟು ಮಾಡಿರುತ್ತಾರೆ. ಈ ದಾಂಧಲೆಯಿಂದ ರಕ್ಷಣಾತ್ಮಕ ದೃಷ್ಟಿಯಿಂದ ಸುರಪುರ ಪೋಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ:208/2007 ದಿನಾಂಕ:4.11.2007 ರಂದು ದೂರು ದಾಖಲಾಗಿದ್ದು. ಈ ಸಂಬಂಧ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಸಿ.ಸಿ. ಸಂಖ್ಯೆ:43/2007 ದಾಖಲಾಗಿದ್ದು ನ್ಯಾಯಾಲಯದಲ್ಲಿ ಪರಿಶೀಲನೆಯಲ್ಲಿದೆ. ಈ ಹಿನ್ನೆಲೆಯಲ್ಲಿ ವರ್ತಕರ ದುರ್ನಡತೆ ಸಾಬೀತಾಗಿರುವುದರಿಂದ ನಿಯಮಾನುಸಾರ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಪರಿಶೀಲಿಸಿ ಶ್ರೀ ರಾಯ್‌ಚಂದ್ ಜೈನ್, ವರ್ತಕರ ಸಂಘದ ಪ್ರತಿನಿಧಿ ಹಾಗೂ ಸದಸ್ಯರು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸುರಪುರ ಇವರ ದುರ್ವರ್ತನೆ ನಡೆಸಿರುವ ಆರೋಪವು ಸಾಬೀತಾಗಿರುವುದರಿಂದ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ಕಾಯ್ದೆ 1966ರ ಪ್ರಕರಣ 129 ರ ಪ್ರಕಾರ ಸಮಿತಿ ಸದಸ್ಯತ್ವವನ್ನು ವಜಾ ಮಾಡಲು ತೀರ್ಮಾನಿಸಿದ ಸರ್ಕಾರವು ಈ ಆದೇಶವನ್ನು ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಸ ಇ 14 ಎಂಆರ್‌ಇ 2008, ಬೆಂಗಳೂರು, ದಿನಾಂಕ:19ನೇ ಮಾರ್ಚ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ ಪ್ರಕರಣ 129ರಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ರಾಯ್‌ಚಂದ್ ಜೈನ್, ವರ್ತಕರ ಸಂಘದ ಪ್ರತಿನಿಧಿ ಹಾಗೂ ಸದಸ್ಯರು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸುರಪುರ ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸುರಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಸದಸ್ಯತ್ವದಿಂದ ವಜಾ ಮಾಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 947

ಸಿ.ಕೆ. ವಾಸುದೇವ ಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ, ಸಹಕಾರ ಇಲಾಖೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ: ಆಯುಷ್ (ಆಯುರ್ವೇದ, ಯೋಗ, ಯುನಾನಿ ಮತ್ತು ಹೋಮಿಯೋಪತಿ) ಪದವಿ ಕೋರ್ಸುಗಳ ವ್ಯಾಸಂಗಕ್ಕೆ ಪ್ರವೇಶ ಪರೀಕ್ಷೆಯನ್ನು ರದ್ದುಪಡಿಸುವ ಆದೇಶವನ್ನು ತಡೆ ಹಿಡಿಯುವ ಬಗ್ಗೆ.

ಓದಲಾಗಿದೆ: ಸರ್ಕಾರದ ಆದೇಶ ಸಂಖ್ಯೆ:ಆಕುಕ 47 ಪಿಟಿಡಿ 2009, ದಿನಾಂಕ:5.3.2009.

ಪ್ರಸ್ತಾವನೆ:

2009–10ನೇ ಸಾಲಿನಿಂದ ಆಯುಷ್ (ಆಯುರ್ವೇದ, ಯೋಗ, ಯುನಾನಿ, ಮತ್ತು ಹೋಮಿಯೋಪತಿ) ಪದವಿ ಕೋರ್ಸುಗಳ ವ್ಯಾಸಂಗದ ಪ್ರವೇಶಕ್ಕೆ ಜಾರಿಯಲ್ಲಿರುವ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ((CET) ಈ ಕೂಡಲೇ ಜಾರಿಗೆ ಬರುವಂತೆ ರದ್ದುಪಡಿಸಿ, ಮುಂದಿನ ಆದೇಶದವರೆಗೆ ದ್ವಿತೀಯ ಪಿಯುಸಿ/12ನೇ ತರಗತಿಯಲ್ಲಿ ಕನಿಷ್ಠ ಶೇ.50ರಷ್ಟು ಅಂಕಗಳನ್ನು ಪಡೆದಿರುವ ವಿದ್ಯಾರ್ಥಿಗಳಿಗೆ ಮೆರಿಟ್ ಆಧಾರದ ಮೇಲೆ ಆಯುಷ್ (ಆಯುರ್ವೇದ, ಯೋಗ, ಯುನಾನಿ, ಮತ್ತು ಹೋಮಿಯೋಪತಿ) ಪದವಿ ಕೋರ್ಸುಗಳ ವ್ಯಾಸಂಗಕ್ಕೆ ಸೀಟುಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಹಂಚಿಕೆ ಮಾಡಲು ಮೇಲೆ ಓದಲಾದ ಸರ್ಕಾರದ ಆದೇಶದಲ್ಲಿ ಅನುಮೋದನೆ ನೀಡಲಾಗಿತ್ತು.

ವಿಷಯವನ್ನು ಪುನರ್ ಪರಿಶೀಲಿಸಿದ ನಂತರ ಸರ್ಕಾರದ ಆದೇಶ ಸಂಖ್ಯೆ:ಆಕುಕ 47 ಪಿಟಿಡಿ 2009, ದಿನಾಂಕ:5.3.2009ನ್ನು ತಡೆ ಹಿಡಿಯಲು ಸರ್ಕಾರವು ತೀರ್ಮಾನಿಸಿ, ಈ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಆಕುಕ 47 ಪಿಟಿಡಿ 2009, ಬೆಂಗಳೂರು, ದಿನಾಂಕ:21ನೇ ಮಾರ್ಚ್ 2009

ಸರ್ಕಾರದ ಆದೇಶ ಸಂಖ್ಯೆ ಆಕುಕ 47 ಪಿಟಿಡಿ 2009, ದಿನಾಂಕ:5.3.2009ನ್ನು ಮುಂದಿನ ಆದೇಶದವರೆಗೆ ಈ ಮೂಲಕ ತಡೆ ಹಿಡಿಯಲಾಗಿದೆ. (kept in abeyance).

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 948

ಎನ್. ಮಹಾಲಕ್ಷ್ಮಮ್ಮ

ಸರ್ಕಾರದ ಅಧೀನ ಕಾರ್ಯದರ್ಶಿ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಭಾರತೀಯ ವೈದ್ಯ ಪದ್ಧತಿ)

ಸಹಕಾರ ಸಚಿವಾಲಯ

ವಿಷಯ: ಜವಹರ್ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಬೆಂಗಳೂರು ಇದರ ಆಡಳಿತಗಾರರ ಅವಧಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ: 1) ಸಹಕಾರ ಸಂಘಗಳ ಅಪರ ನಿಬಂಧಕರ ಆದೇಶ ಸಂಖ್ಯೆ :ಹೆಚ್ಎಸ್‌ಜಿ-1/117(ಎ) ಹೆಚ್ಎಸ್ಎಸ್/2008-09, ದಿನಾಂಕ :2.12.2008 ಮತ್ತು 3.12.2008.

2) ಸಹಕಾರ ಸಂಘಗಳ ನಿಬಂಧಕರ ಪತ್ರ ಸಂಖ್ಯೆ:ಹೆಚ್ಎಸ್‌ಜಿ-1 :117(ಎ): ಹೆಚ್‌ಹೆಚ್ಎಸ್ :2008-09, ದಿನಾಂಕ :7.2.2009.

ಪ್ರಸ್ತಾವನೆ:

ಮೇಲೆ ಓದಲಾದ (1)ರ ಆದೇಶದಲ್ಲಿ ಸಹಕಾರ ಸಂಘಗಳ ಅಪರ ನಿಬಂಧಕರು ದಿನಾಂಕ:27.1.2007ರಂದು ಜವಹರ್ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ ಇದರ ಆಡಳಿತ ಮಂಡಳಿಯನ್ನು ಆರು ತಿಂಗಳ ಅವಧಿಗೆ ರದ್ದುಗೊಳಿಸಿ ಆಡಳಿತಗಾರರನ್ನು ನೇಮಿಸಿದ್ದು ಆಡಳಿತಗಾರರ ಅವಧಿಯನ್ನು ದಿನಾಂಕ:26.7.2008ರವರೆಗೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 30(1)ರಡಿ ಸಹಕಾರ ಸಂಘಗಳ ನಿಬಂಧಕರಿಗೆ ದತ್ತವಾದ ಅಧಿಕಾರದ ಮೇರೆಗೆ ವಿಸ್ತರಿಸಿ ಆದೇಶಿಸಿರುತ್ತಾರೆ. ಈ ಕೆಳಕಂಡ ಸಮಸ್ಯೆಗಳ ಕಾರಣದಿಂದ ಮೇಲೆ ಓದಲಾದ (2)ರ ಪತ್ರದಲ್ಲಿ ಆಡಳಿತಗಾರರ ಅವಧಿಯನ್ನು ದಿನಾಂಕ:27.7.,2008 ರಿಂದ ದಿನಾಂಕ:26.7.2009ರವರೆಗೆ ವಿಸ್ತರಿಸಲು ಸಹಕಾರ ಸಂಘಗಳ ಅಪರ ನಿಬಂಧಕರು ಸರ್ಕಾರವನ್ನು ಕೋರಿರುತ್ತಾರೆ.

1. ಚುನಾವಣೆ ಹೊರತು, ಸಂಘದ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಲೂ ಸಹ ಹಣಕಾಸು ಇರದೆ ತೊಂದರೆಯಾಗಿರುವುದು.
2. ಅರ್ಹ ಸದಸ್ಯರ ಪಟ್ಟಿಯನ್ನು ಈವರೆವಿಗೆ ತಯಾರಿಸದೇ ಇರುವುದು. ಇದರ ತಯಾರಿಕೆಗೆ ಸಂಘದಲ್ಲಿ ಹಣ ಹಾಗೂ ಸಿಬ್ಬಂದಿ ಇರದೇ ಇರುವುದು.
3. ಸಂಘದ ಸದಸ್ಯರಿಗೆ ಗುರುತಿನ ಚೀಟಿಯನ್ನು ನೀಡಲು ಹಣ ಇಲ್ಲದೆ ಇರುವುದು.
4. ಬೆಂಗಳೂರು ಜಿಲ್ಲಾ & ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ ಬೆಂಗಳೂರು ಇದಕ್ಕೆ ಸಂಘದಿಂದ ಮರುಪಾವತಿಸಬೇಕಾಗಿರುವ ಸಾಲದ ಬೃಹತ್ ಹೊರೆ ಇರುವುದು.
5. ಸಂಘದ ಜಮೀನುಗಳ ಬಗ್ಗೆ ತಕರಾರು ವ್ಯಾಜ್ಯಗಳು ಇರುವುದು.
6. ಸಂಘದ ಲೆಕ್ಕಪತ್ರಗಳು 1995-96ರಿಂದ ಈವರೆಗೆ ಲೆಕ್ಕಪರಿಶೋಧನೆಯಾಗದೇ ಇರುವುದು
7 ಸಂಘದ ಕಾರ್ಯಚಟುವಟಿಕೆಗಳು ಸ್ಥಗಿತಗೊಂಡಿರುವುದು.

ಸಂಘದ ಆಡಳಿತಗಾರರ ಅವಧಿಯನ್ನು ದಿನಾಂಕ:27.7.2008ರಿಂದ ದಿನಾಂಕ:26.7.2009ರವರೆವಿಗೆ ಒಂದು ವರ್ಷದ ಅವಧಿಗೆ ವಿಸ್ತರಿಸಲು ಕೋರಿದ ಪ್ರಸ್ತಾವೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಸಿಒ 35 ಸಿಎಲ್ಎಂ 2009, ಬೆಂಗಳೂರು, ದಿನಾಂಕ:18ನೇ ಮಾರ್ಚ್ 2009

ಪ್ರಸ್ತಾವನೆಯಲ್ಲಿ ವಿವರಿಸಿದ ಸಂಗತಿಗಳ ಹಿನ್ನೆಲೆಯಲ್ಲಿ ಜವಹರ್ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಬೆಂಗಳೂರು ಇದರ ಆಡಳಿತಗಾರರ ಅವಧಿಯಲ್ಲಿ ದಿನಾಂಕ:27.7.2008ರಿಂದ ದಿನಾಂಕ:26.7.2009ರವರೆಗೆ ವಿಸ್ತರಿಸಲು ಅನುವಾಗುವಂತೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 121ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಸದರಿ ಅಧಿನಿಯಮದ ಪ್ರಕರಣ 30(1) ಈ ಕೆಳಕಂಡ ಮಾರ್ಪಾಟುಗಳೊಂದಿಗೆ ಜವಹರ್ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಬೆಂಗಳೂರು ಇದಕ್ಕೆ ಅನ್ವಯವಾಗತಕ್ಕದ್ದೆಂದು ನಿರ್ದೇಶಿಸುತ್ತದೆ ಎಂದರೆ:

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 30 ಉಪಪ್ರಕರಣ (1)ರಲ್ಲಿನ **"ಒಂದು ವರ್ಷ"** ಎಂಬ ಪದಗಳಿಗೆ ಬದಲಾಗಿ **"ಇಪ್ಪತ್ತನಾಲ್ಕು ತಿಂಗಳು"** ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಸೂಚನೆ: 2) ಪ್ರಕರಣ 30 ಉಪ-ಪ್ರಕರಣ (1)ಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ:26.7.2009 ರವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿ ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ ಸದರಿ ಪ್ರಕರಣ 30 ಉಪ-ಪ್ರಕರಣ (1)ರಲ್ಲಿನ ಉಪಬಂಧಗಳು ಪುನಃ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್.ಎಸ್. ಹುಚ್ಚಾಚಾರಿ

ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ

ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ

ಪಿ.ಆರ್. 949

ಶಿಕ್ಷಣ ಸಚಿವಾಲಯ

ವಿಷಯ: ಬಿಜಾಪುರದ ಸರ್ಕಾರಿ ಪಾಲಿಟೆಕ್ನಿಕ್‌ಗೆ ಆಡಳಿತ ಕಛೇರಿ ಬ್ಲಾಕ್ ಕಟ್ಟಡ ನಿರ್ಮಾಣದ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:
1. ನಿರ್ದೇಶಕರು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ಪತ್ರ ಸಂಖ್ಯೆ : ಡಿಟಿಇ/34/ಬಿ.ಎಲ್.ಡಿ 2008/ದಿನಾಂಕ :12/13-02-2009.
2. ಮುಖ್ಯ ಅಭಿಯಂತರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಸಂಪರ್ಕ ಮತ್ತು ಕಟ್ಟಡಗಳು [ಉತ್ತರ], ಧಾರವಾಡ ಇವರ ಪತ್ರ ಸಂಖ್ಯೆ :ಸಿಇಎನ್/ತಾಂಸ-2/ಆಯವ್ಯಯ/ಕಟ್ಟಡ/ಅಅ/ವಿಜಾಪುರ/12030, ದಿನಾಂಕ :21.1.2009

ಪ್ರಸ್ತಾವನೆ:

(1) ಮೇಲೆ ಓದಲಾದ ಪತ್ರದಲ್ಲಿ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರು, ಬಿಜಾಪುರ ಸರ್ಕಾರಿ ಪಾಲಿಟೆಕ್ನಿಕ್ ಕಟ್ಟಡದ ಭಾಗಶಃ ನೆಲಮಹಡಿ ಕಟ್ಟಡ [ಆಡಳಿತ ಕಛೇರಿ ಕಟ್ಟಡ] ಕಾಮಗಾರಿಯ ಅಂದಾಜು ಮೊತ್ತ 50.00 ಲಕ್ಷರೂಗಳಿಗೆ, 2008-09ನೇ ಸಾಲಿಗೆ ಲೆಕ್ಕಶೀರ್ಷಿಕೆ 4059ರಲ್ಲಿ 15.00 ಲಕ್ಷರೂಗಳನ್ನು ಒದಗಿಸಿರುವುದಾಗಿ ಮುಖ್ಯ ಅಭಿಯಂತರರು, ಲೋಕೋಪಯೋಗಿ ಇಲಾಖೆರವರ ಮೇಲೆ ಓದಲಾದ (2)ರ ಪತ್ರದಲ್ಲಿ ತಿಳಿಸಿರುವುದಾಗಿ ತಿಳಿಸಿ, ಸದರಿ ಅಂದಾಜು ಪಟ್ಟಿ ಮತ್ತು ನಕ್ಷೆಯನ್ನು ಮುಖ್ಯ ಅಭಿಯಂತರರು, ಲೋಕೋಪಯೋಗಿ ಇಲಾಖೆ ಧಾರವಾಡರವರಿಂದ ಸ್ವೀಕರಿಸಿ ಅದಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲು ಅನುಮತಿ ನೀಡುವಂತೆ ಸರ್ಕಾರವನ್ನು ಕೋರಿರುತ್ತಾರೆ.

(2) ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸುತ್ತದೆ.

ಸರ್ಕಾರಿ ಆದೇಶ ಸಂಖ್ಯೆ:ಇಡಿ 36 ಯೋಸಕ 2009, ಬೆಂಗಳೂರು, ದಿನಾಂಕ:11ನೇ ಮಾರ್ಚ್ 2009

[ಇಡಿ:36:ಸ್ವೀಮರ (ಯುನಿಕ್) 2009, ದಿನಾಂಕ:11.3.2009]

(3) ಬಿಜಾಪುರದ ಸರ್ಕಾರಿ ಪಾಲಿಟೆಕ್ನಿಕ್ ಕಟ್ಟಡದ ಭಾಗಶಃ ನೆಲಮಹಡಿ ಕಟ್ಟಡ [ಆಡಳಿತ ಕಛೇರಿ ಕಟ್ಟಡಗಳ] ಕಾಮಗಾರಿಯ 50.00 ಲಕ್ಷ ರೂಗಳ [ಐವತ್ತು ಲಕ್ಷ ರೂಪಾಯಿಗಳು ಮಾತ್ರ] ಅಂದಾಜು ಮತ್ತು ನಕ್ಷೆಗೆ ಕಾಮಗಾರಿಯನ್ನು ಪ್ರಚಲಿತವಿರುವ ಕರ್ನಾಟಕ ಪಾರದರ್ಶಕತೆ ಅಧಿನಿಯಮದನ್ವಯ ಕೈಗೊಳ್ಳುವ ಷರತ್ತನ್ನು ವಿಧಿಸಿ, ಆಡಳಿತಾತ್ಮಕ ಅನುಮೋದನೆ ನೀಡಿ, ಮೂಲ ಅಂದಾಜು ಮತ್ತು ನಕ್ಷೆಯನ್ನು ಲೋಕೋಪಯೋಗಿ ಇಲಾಖೆಗೆ ಹಿಂತಿರುಗಿಸಲು, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಸರ್ಕಾರವು ಅನುಮತಿ ನೀಡಿದೆ.

(4) ಕಾಮಗಾರಿಯ ಗುಣಮಟ್ಟದ ಬಗ್ಗೆ ಇಲಾಖೆಯ ಅಧಿಕಾರಿಗಳು ಆಗಿಂದಾಗ್ಗೆ ಪರಿಶೀಲಿಸಲು ಸೂಚಿಸಿದೆ.

(5) ಸದರಿ ಆದೇಶವನ್ನು ಶಿಕ್ಷಣ ಇಲಾಖೆಯ ಆಂತರಿಕ ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಶಿ.ಇ. 493 :ಐ.ಎಫ್ (ಬಿಎ) 2008/ದಿನಾಂಕ:21.2.2008ರಲ್ಲಿನ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಐ.ಎಫ್. ಮಾಗಿ
ಪಿ.ಆರ್. 950
ವಿಶೇಷಾಧಿಕಾರಿಗಳು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಯೋಜನೆ)

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ವಿಷಯ: ಶ್ರೀ ಪಿ.ಎಸ್. ಇಟಕಂಪಳ್ಳಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ್ ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು-ಅಂತಿಮ ಆದೇಶ.

ಓದಲಾಗಿದೆ:
1. ಜಿಲ್ಲಾಧಿಕಾರಿಗಳು, ಬೀದರ್ ಕಚೇರಿಯ ಆದೇಶ ಸಂಖ್ಯೆ:ಕಂ/ಸಿಬ್ಬಂದಿ/ಸಿಆರ್/ಜಿಎ/2008-09/4770 ದಿ:16.8.208.
2. ಜಿಲ್ಲಾಧಿಕಾರಿಗಳು, ಬೀದರ್, ಕಚೇರಿಯ ಆದೇಶ ಸಂಖ್ಯೆ:ಕಂ/ಸಿಬ್ಬಂದಿ/ಸಿಆರ್/ಜಿಎ/2008-09/5598 ದಿ:16.8.2008
3. ಸರ್ಕಾರದ ಆದೇಶ ಸಂಖ್ಯೆ:ಮಮಇ 460 ಎಸ್‌ಜೆಡಿ 2008 ದಿ:23.12.2008.
4. ಸರ್ಕಾರದ ಆದೇಶ ಸಂಖ್ಯೆ:ಮಮಇ 460 ಎಸ್‌ಜೆಡಿ 2008 (ಭಾಗ-1) ದಿ:3.1.2009
5. ಶ್ರೀ ಪಿ.ಎಸ್ .ಇಟಕಂಪಳ್ಳಿ, ನಿರೂಪಣಾಧಿಕಾರಿ, ಸಹಾಯಕ ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ್ ರವರ ಮನವಿ ದಿ:5.1.2009.

ಪ್ರಸ್ತಾವನೆ:

ಬೀದರ್ ನಗರದಲ್ಲಿ ನಡೆಯುತ್ತಿರುವ ಅಂಗನವಾಡಿ ಕೇಂದ್ರಗಳ ಕಾರ್ಯನಿರ್ವಹಣೆ ಬಗ್ಗೆ ಸಾರ್ವಜನಿಕರಿಂದ ಹಾಗೂ ಚುನಾಯಿತ ಪ್ರತಿನಿಧಿಗಳಿಂದ ಅನೇಕ ಬಾರಿ ದೂರುಗಳು ಬಂದ ಹಿನ್ನೆಲೆಯಲ್ಲಿ, ಅಂಗನವಾಡಿ ಕೇಂದ್ರಗಳ ತಪಾಸಣೆಯನ್ನು

ಪಿಸಿಯು ಅಧಿಕಾರಿಗಳಿಂದ ನಡೆಸಿ ಕೇಂದ್ರಗಳ ತಪಾಸಣೆ ಬಳಿಕ ನ್ಯೂನತೆಗಳು ಇರುವುದು ವರದಿಯಾಗಿರುವ ಕುರಿತು ದಿ:16.8.2008 ರ ಜನಸ್ಪಂದನ ಸಮಿತಿ ಸಭೆಯಲ್ಲಿ ವಿವರವಾಗಿ ಚರ್ಚಿಸಿ ತಪಾಸಣೆ ತಂಡದವರ ಅಭಿಪ್ರಾಯದ ಪ್ರಕಾರ ಅಂಗನವಾಡಿ ಕೇಂದ್ರಗಳ ಕಾರ್ಯನಿರ್ವಹಣೆ ತೃಪ್ತಿಕರವಾಗಿಲ್ಲದಿರುವುದನ್ನು ಮನಗಂಡು, ಅನೇಕ ಅಂಗನವಾಡಿ ಕೇಂದ್ರಗಳಿಗೆ ವರ್ಷ ಕಳೆದರು ಶ್ರೀ ರಾಮಕೃಷ್ಣ ಟಿ. ಪಡಗಣ್ಣನವರ, ಉಪ ನಿರ್ದೇಶಕರು ಹಾಗೂ ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ್ ಮತ್ತು ಶ್ರೀ ಪಿ.ಎಸ್. ಇಟಕಂಪಳ್ಳಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಬೀದರ್ ಇವರುಗಳು ನಿಯಮಿತವಾಗಿ ಬೇಟಿ ನೀಡಿ ಮೇಲ್ವಿಚಾರಣೆ ಮಾಡದೆ ಇರುವುದರಿಂದ ಈ ಕಾರ್ಯಕ್ರಮವು ಒಂದು ಖೋಟಾ ಕಾರ್ಯಕ್ರಮವಾಗಿ ಪರಿಗಣಿಸಿದ್ದು, ಮಕ್ಕಳು ಹಾಗೂ ಸ್ತ್ರೀಯರಿಗಾಗಿ ರೂಪಿಸಿದ ಕಾರ್ಯಕ್ರಮವನ್ನು ಬುಡಮೇಲು ಮಾಡಿದಂತಾಗಿರುವುದು ಮೇಲ್ನೋಟಕ್ಕೆ ಕಂಡು ಬಂದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ, ಬೀದರ್ ರವರು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿ:16.8.2008 ರ ಆದೇಶದಲ್ಲಿ ಶ್ರೀ ರಾಮಕೃಷ್ಣ ಟಿ. ಪಡಗಣ್ಣನವರ, ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ್ ಹಾಗೂ ಮೇಲೆ ಕ್ರಮ ಸಂಖ್ಯೆ(2)ರಲ್ಲಿ ಓದಲಾದ ದಿ:16.8.2008ರ ಆದೇಶದಲ್ಲಿ ಶ್ರೀ ಪಿ.ಎಸ್.ಇಟಕಂಪಳ್ಳಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಬೀದರ್, ಇವರುಗಳನ್ನು ಅಮಾನತ್ತುಗೊಳಿಸಿ ಆದೇಶ ಹೊರಡಿಸಿರುತ್ತಾರೆ.

ಜಿಲ್ಲಾಧಿಕಾರಿ, ಬೀದರ್ ರವರು ಅಮಾನತ್ತುಗೊಳಿಸಿ ಹೊರಡಿಸಿರುವ ದಿ:16.8.2008ರ ಆದೇಶವನ್ನು ಪ್ರಶ್ನಿಸಿ ಶ್ರೀ ರಾಮಕೃಷ್ಣ ಟಿ. ಪಡಗಣ್ಣನವರ, ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ್ ರವರು ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಅರ್ಜಿ ಸಂಖ್ಯೆ:4069/2008 ರಲ್ಲಿ ಮೊಕದ್ದಮೆ ಹೂಡಿ, ಜಿಲ್ಲಾಧಿಕಾರಿ, ಬೀದರ್ ರವರು ಅಮಾನತ್ತುಗೊಳಿಸಿ ಹೊರಡಿಸಿರುವ ದಿ:16.8.2008ರ ಆದೇಶವನ್ನು ರದ್ದುಗೊಳಿಸುವಂತೆ ಕೋರಲಾಗಿದ್ದು, ಸದರಿ ಪ್ರಕರಣವನ್ನು ಮಾನ್ಯ ನ್ಯಾಯಮಂಡಳಿಯು ದಿ:13.10.2008 ರಂದು ವಿಚಾರಣೆ ನಡೆಸಿ ಶಿಸ್ತು ಪ್ರಾಧಿಕಾರವಲ್ಲದ ಹಾಗೂ ಜಿಲ್ಲಾಧಿಕಾರಿಗಳಿಗೆ ಗ್ರೂಪ್ 'ಎ' ಅಧಿಕಾರಿಯನ್ನು ಅಮಾನತ್ತುಗೊಳಿಸಲು ಅಧಿಕಾರವಿಲ್ಲದಿದ್ದರೂ ಸಹ ಜಿಲ್ಲಾಧಿಕಾರಿಗಳು, ಬೀದರ್ ರವರು ದಿ:16.8.2008 ರಂದು ಅಮಾನತ್ತುಗೊಳಿಸಿ ಹೊರಡಿಸಿರುವ ಆದೇಶವನ್ನು ಗಂಭೀರವಾಗಿ ಪರಿಗಣಿಸಿ ಜಿಲ್ಲಾಧಿಕಾರಿಗಳಿಗೆ ರೂ 5,000/– ಗಳನ್ನು ದಂಡವನ್ನಾಗಿ ಪಾವತಿಸುವಂತೆ ಹಾಗೂ ಜಿಲ್ಲಾಧಿಕಾರಿಗಳು ಹೊರಡಿಸಿರುವ ಅಮಾನತ್ತಿನ ಆದೇಶವನ್ನು ರದ್ದುಪಡಿಸಿ ತೀರ್ಪು ನೀಡಿರುತ್ತದೆ. ಮಾನ್ಯ ನ್ಯಾಯಮಾಂಡಳಿಯು ದಿ:13.10.2008 ರಂದು ನೀಡಿರುವ ತೀರ್ಪನ್ನು ಕಾನೂನು ಮುಖ್ಯಸ್ಥರು ಪರಿಶೀಲಿಸಿ ಸದರಿ ತೀರ್ಪು ಮೇಲ್ಮನವಿಗೆ ಅರ್ಹ ಪ್ರಕರಣವಲ್ಲವೆಂದು ತಿಳಿಸಿರುತ್ತಾರೆ. ಸರ್ಕಾರವು ಕರ್ನಾಟಕ ಆಡಳಿತ ನ್ಯಾಯಮಂಡಳಿಯ ದಿ:13.10.2008 ರ ತೀರ್ಪು ಹಾಗೂ ಕಾನೂನು ಕೋಶದ ಮುಖ್ಯಸ್ಥರು ನೀಡಿರುವ ಅಭಿಪ್ರಾಯ ಹಾಗೂ ಪ್ರಕರಣದ ವಾಸ್ತವಾಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ದಿ:23.12.2008ರ ಆದೇಶದಲ್ಲಿ ಜಿಲ್ಲಾಧಿಕಾರಿಗಳು ಬೀದರ್ ರವರು ಶ್ರೀ ರಾಮಕೃಷ್ಣ ಟಿ. ಪಡಗಣ್ಣನವರ, ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ್ ಇವರನ್ನು ಕಚೇರಿ ಆದೇಶ ಸಂಖ್ಯೆ:ಸಿಬ್ಬಂದಿ/ಸಿಆರ್/ಜಿಎ/2008–09/4770 ದಿ:16.8.2008 ರಂದು ಅಮಾನತ್ತುಗೊಳಿಸಿ ಹೊರಡಿಸಿರುವ ಆದೇಶವನ್ನು ರದ್ದುಪಡಿಸಿ ಇವರ ವಿರುದ್ಧ ಇರುವ ಆರೋಪಗಳನ್ನು ಹಿಂಪಡೆದು ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಗೆ ಪುನರ್ ಸ್ಥಾಪಿಸಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಗುಲ್ಬರ್ಗಾ ಇಲ್ಲಿನ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ ಖಾಲಿ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಿ ಅವರು ಇನ್ನು ಮುಂದೆ ಅವರ ಕಾರ್ಯನಿರ್ವಹಣೆಯಲ್ಲಿ ಎಚ್ಚರಿಕೆ ವಹಿಸುವಂತೆ ಅವರಿಗೆ ಒಂದು ಆಡಳಿತಾತ್ಮಕ ಎಚ್ಚರಿಕೆಯನ್ನು ನೀಡಿದೆ.

ಶ್ರೀ ಪಿ.ಎಸ್. ಇಟಕಂಪಳ್ಳಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಬೀದರ್ ಹಾಗೂ ಶ್ರೀ ರಾಮಕೃಷ್ಣ ಟಿ. ಪಡಗಣ್ಣನವರ, ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ್ ಇವರುಗಳ ಪ್ರಕರಣ ಒಂದೇ ಆಗಿದ್ದು, ಈ ಇಬ್ಬರು ಅಧಿಕಾರಿಗಳನ್ನು ಜಿಲ್ಲಾಧಿಕಾರಿ, ಬೀದರ್ ರವರು ಅಮಾನತ್ತುಗೊಳಿಸಿದ್ದು, ಇವರುಗಳ ಪೈಕಿ ಶ್ರೀ ರಾಮಕೃಷ್ಣ ಟಿ. ಪಡಗಣ್ಣನವರ, ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ್, ಇವರನ್ನು ಜಿಲ್ಲಾಧಿಕಾರಿಗಳು, ಬೀದರ್ ರವರು ದಿನಾಂಕ:16.8.2008 ರಂದು ಅಮಾನತ್ತುಗೊಳಿಸಿ ಆದೇಶವನ್ನು ರದ್ದುಪಡಿಸಿ ಇವರ ವಿರುದ್ಧ ಇರುವ ಆರೋಪಗಳನ್ನು ಹಿಂಪಡೆದು ದಿ:23.12.2008 ರಂದು ಆದೇಶ ಹೊರಡಿಸಿರುವ ಹಿನ್ನೆಲೆಯಲ್ಲಿ, ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ದಿ:3.1.2009ರ ಆದೇಶದಲ್ಲಿ ಜಿಲ್ಲಾಧಿಕಾರಿಗಳು, ಬೀದರ್ ರವರು ಶ್ರೀ ಪಿ.ಎಸ್. ಇಟಕಂಪಳ್ಳಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಬೀದರ್, ಇವರನ್ನು ಕಛೇರಿಯ ಆದೇಶ ಸಂಖ್ಯೆ:ಸಿಬ್ಬಂದಿ/ಜಿಎ/2008–09/5598 ದಿ:16.8.2008ರಲ್ಲಿ ಅಮಾನತ್ತುಗೊಳಿಸಿ ಹೊರಡಿಸಿರುವ ಆದೇಶವನ್ನು ರದ್ದುಪಡಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ(5)ರಲ್ಲಿ ಓದಲಾದ ದಿ:5.1.2009ರ ಪತ್ರದಲ್ಲಿ ಶ್ರೀ ಪಿ.ಎಸ್. ಇಟಕಂಪಳ್ಳಿ, ನಿರೂಪಾಣಾಧಿಕಾರಿ, ಸಹಾಯಕ ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಬಿವೃದ್ಧಿ ಇಲಾಖೆ, ಬೀದರ್ ರವರು ಶ್ರೀ ರಾಮಕೃಷ್ಣ ಟಿ., ಪಡಗಣ್ಣನವರ ಹಾಗೂ ಅವರ ಪ್ರಕರಣವು ಒಂದೇ ಆಗಿರುತ್ತದೆ. ಆದರೆ ಸರ್ಕಾರವು ಶ್ರೀ ರಾಮಕೃಷ್ಣ ಟಿ. ಪಡಗಣ್ಣನವರ

ಅಮಾನತ್ತಿನ ಆದೇಶವನ್ನು ರದ್ದುಪಡಿಸಿ ಅವರ ವಿರುದ್ಧದ ಆರೋಪಗಳನ್ನು ಹಿಂಪಡೆದು ಅವರ ಕಾರ್ಯನಿರ್ವಹಣೆಯಲ್ಲಿ ಎಚ್ಚರಿಕೆ ವಹಿಸುವಂತೆ ಅವರಿಗೆ ಆಡಳಿತಾತ್ಮಕ ಎಚ್ಚರಿಕೆ ನೀಡಿರುತ್ತದೆಂದು ಆದರೆ ಅವರಿಗೆ ಮಾತ್ರ ಅವರ ವಿರುದ್ಧದ ಪ್ರಕರಣದ ಬಗ್ಗೆ ಪರಿಶೀಲನೆಯನ್ನು ಬಾಕಿಯಿರಿಸಿ ಅಮಾನತ್ತಿನ ಆದೇಶವನ್ನು ರದ್ದುಪಡಿಸಿದೆಯೆಂದು, ಅವರು ಅಂಗವಿಕಲರಾಗಿದ್ದು, ಜಿಲ್ಲಾಧಿಕಾರಿಗಳು, ಬೀದರ್ ರವರು ಹೊರಡಿಸಿರುವ ಅಮಾನತ್ತಿನ ಆದೇಶವನ್ನು ಪ್ರಶ್ನಿಸಲು ಆರ್ಥಿಕವಾಗಿ ದುರ್ಬಲರಾಗಿರುವುದರಿಂದ ಅವರಿಗೂ ಸಹ ಶ್ರೀ ರಾಮಕೃಷ್ಣ ಟಿ. ಪಡಗಣ್ಣನವರ ಪ್ರಕರಣವನ್ನು ಮುಕ್ತಾಯಗೊಳಿಸುವಂತೆ ಅವರನ್ನೂ ಸಹ ಈ ಆರೋಪಗಳಿಂದ ಮುಕ್ತಗೊಳಿಸಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಸರ್ಕಾರವು ಶ್ರೀ ಪಿ.ಎಸ್. ಇಟಕಂಪಳ್ಳಿ, ನಿರೂಪಣಾಧಿಕಾರಿರವರ ಮನವಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ಶ್ರೀ ರಾಮಕೃಷ್ಣ ಟಿ. ಪಡಗಣ್ಣನವರ, ಹಿಂದಿನ ಸಹಾಯಕ ನಿರ್ದೇಶಕರು, ಹಾಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ ಹಾಗೂ ಶ್ರೀ ಪಿ.ಎಸ್. ಇಟಕಂಪಳ್ಳಿ, ಹಿಂದಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಹಾಲಿ ನಿರೂಪಣಾಧಿಕಾರಿ, ಇವರುಗಳ ಪ್ರಕರಣವು ಒಂದೇ ಆಗಿರುವುದನ್ನು ಮನಗಂಡು ಶ್ರೀ ರಾಮಕೃಷ್ಣ ಟಿ. ಪಡಗಣ್ಣನವರ ಇವರಿಗೆ ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ದಿ:23.12.2008 ರ ಆದೇಶದಲ್ಲಿ ಅವರ ವಿರುದ್ಧ ಆರೋಪಗಳನ್ನು ಹಿಂಪಡೆದು ಅವರು ಇನ್ನು ಮುಂದೆ ಅವರ ಕಾರ್ಯನಿರ್ವಹಣೆಯಲ್ಲಿ ಎಚ್ಚರಿಕೆ ವಹಿಸುವಂತೆ ಸೂಚಿಸಿ ಅವರಿಗೆ ಆಡಳಿತಾತ್ಮಕ ಎಚ್ಚರಿಕೆಯನ್ನು ನೀಡಿರುವ ಹಿನ್ನಲೆಯಲ್ಲಿ ಶ್ರೀ ಪಿ.ಎಸ್. ಇಟಕಂಪಳ್ಳಿ, ಇವರಿಗೂ ಸಹ ಅವರ ವಿರುದ್ಧದ ಆರೋಪಗಳನ್ನು ಹಿಂಪಡೆದು ಅವರು ಇನ್ನು ಮುಂದೆ ಬದ್ಧತೆಯಿಂದ ಕಾರ್ಯನಿರ್ವಹಿಸಲು ಎಚ್ಚರಿಕೆ ನೀಡಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಮಮಇ 460 ಎಸ್‌ಜಿಡಿ 2008 (ಭಾಗ–1), ಬೆಂಗಳೂರು, ದಿನಾಂಕ: 18ನೇ ಮಾರ್ಚ್, 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಶ್ರೀ ಪಿ.ಎಸ್. ಇಟಕಂಪಳ್ಳಿ, ಹಿಂದಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ್ ಹಾಲಿ ನಿರೂಪಣಾಧಿಕಾರಿ, ಸಹಾಯಕ ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ್ ಇವರ ವಿರುದ್ಧ ಇರುವ ಆರೋಪಗಳನ್ನು ಹಿಂಪಡೆದು ಸದರಿಯವರು ಇನ್ನು ಮುಂದೆ ಅವರ ಕಾರ್ಯನಿರ್ವಹಣೆಯಲ್ಲಿ ಎಚ್ಚರಿಕೆ ವಹಿಸುವಂತೆ ಸೂಚಿಸಿ ಅವರಿಗೆ ಒಂದು ಆಡಳಿತಾತ್ಮಕ ಎಚ್ಚರಿಕೆಯನ್ನು ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಆರ್. ನರಸಿಂಹಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ–2(ಪ್ರಭಾರ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಪಿ.ಆರ್. 933

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ವಿಷಯ: ಕನ್ನಡ ಸಂಸ್ಕೃತಿ ಮತ್ತು ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಗೆ 08 ಕಂಪ್ಯೂಟರ್ ಕುರ್ಚಿಗಳನ್ನು ಖರೀದಿಸುವ ಬಗ್ಗೆ.

ಓದಲಾಗಿದೆ:

1. ಪ್ರವಾಸೋದ್ಯಮ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳ ದಿನಾಂಕ:25.11.2008 ಟಿಪ್ಪಣಿ ಸಂಖ್ಯೆ :ಕಸಂವಾಪ್ರ 188 ಆಶಾ 08.
2. ಪ್ರವಾಸೋದ್ಯಮ ಶಾಖೆಯ ಅಧೀನ ಕಾರ್ಯದರ್ಶಿಯವರ ದಿ:31.1.2009ರ ಟಿಪ್ಪಣಿ ಸಂಖ್ಯೆ:ಕಸಂವಾಪ್ರ 115 ಪ್ರ 2009.
3. ಸರ್ಕಾರದ ಆದೇಶ ಸಂಖ್ಯೆ :ಸಿಆಸುಇ 6 ಡಿಎಸ್.ವೈ 2008, ದಿ :10.10.2008.

ಪ್ರಸ್ತಾವನೆ:

ಮೇಲೆ ಓದಲಾದ (1 ಹಾಗೂ 2)ರ ಟಿಪ್ಪಣಿಗಳಲ್ಲಿ ಪ್ರವಾಸೋದ್ಯಮ ಪ್ರಧಾನ ಕಾರ್ಯದರ್ಶಿಯವರ ಆಪ್ತ ಶಾಖೆಗೆ ಹಾಗೂ ಪ್ರವಾಸೋದ್ಯಮ ಅಧೀನ ಕಾರ್ಯದರ್ಶಿಯವರ ಶಾಖೆಗೆ ತಲಾ 04 ಹಾಗೂ 05 ಕಂಪ್ಯೂಟರ್ ಕುರ್ಚಿಗಳನ್ನು ಒದಗಿಸಲು ಕೋರಲಾಗಿದೆ.

ಮೇಲೆ ಓದಲಾದ (2)ರ ಆದೇಶದಲ್ಲಿ ಕ್ನನಡ ಮತ್ತು ಸಂಸ್ಕೃತಿ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಗೆ ಲೇಖನ ಸಾಮಗ್ರಿಗೆ ರೂ. 40,000ಗಳನ್ನು ಹಾಗೂ ಪೀಠೋಪಕರಣಗಳಿಗೆ ರೂ. 80,000ಗಳನ್ನು ಒದಗಿಸಲಾಗಿದೆ.

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯ, ಪ್ರವಾಸೋದ್ಯಮ ಪ್ರಧಾನ ಕಾರ್ಯದರ್ಶಿಯವರ ಆಪ್ತ ಶಾಖೆಗೆ 04 ಕಂಪ್ಯೂಟರ್ ಕುರ್ಚಿಗಳನ್ನು ಹಾಗೂ ಪ್ರವಾಸೋದ್ಯಮ ಶಾಖೆಗೆ 04 ಕಂಪ್ಯೂಟರ್ ಕುರ್ಚಿಗಳನ್ನು ಖರೀದಿಸುವ ಸಲುವಾಗಿ 03 ಫರ್ನೀಚರ್ ಕಂಪನಿಗಳಿಂದ ದರಪಟ್ಟಿಯನ್ನು ಪಡೆಯಲಾಗಿದೆ. ಸದರಿ ದರಪಟ್ಟಿಯಲ್ಲಿ ಪ್ರತಿಯೊಂದು ಕಂಪ್ಯೂಟರ್ ಕುರ್ಚಿಗೆ ಈ ಕೆಳಗಿನಂತೆ ಬೆಲೆಯನ್ನು ನೀಡಿರುತ್ತದೆ.

ಕ್ರ.ಸಂ	ಕಂಪನಿಯ ಹೆಸರು	ವಿವರ	ಪ್ರಮಾಣ	ಬೆಲೆ	ಒಟ್ಟು ರೂ.ಗಳಲ್ಲಿ
1	ಲಕ್ಷ್ಮಿ ಟ್ರೇಡರ್ಸ್	ಕಂಪ್ಯೂಟರ್ ಕುರ್ಚಿ	8	01 ಕುರ್ಚಿಗೆ ರೂ. 3300/– +12.5% ವ್ಯಾಟ್ ಸೇರಿದಂತೆ	29.700/–
2	ಜನತಾ ಬಜಾರ್	ಕಂಪ್ಯೂಟರ್ ಕುರ್ಚಿ	8	01 ಕುರ್ಚಿಗೆ ರೂ. 3200/– +12.5% ವ್ಯಾಟ್ ಸೇರಿದಂತೆ	28.800/–
3	ಚಂದು ಫರ್ನೀಚರ್ಸ್	ಕಂಪ್ಯೂಟರ್ ಕುರ್ಚಿ	8	01 ಕುರ್ಚಿಗೆ ರೂ. 3450/– +12.5% ವ್ಯಾಟ್ ಸೇರಿದಂತೆ	31/050/–

ಈ ಮೇಲ್ಕಂಡ ಪೀಠೋಪಕರಣಗಳ ಕಂಪನಿಗಳಿಂದ ಪಡೆದ ದರಗಳನ್ನು ಅವಲೋಕಿಸಿ, ಅತೀ ಕಡಿಮೆ ದರವನ್ನು ಸೂಚಿಸಿರುವ ಜನತಾ ಬಜಾರ್ ಕಂಪನಿಯಿಂದ ಎಂಟು ಕಂಪ್ಯೂಟರ್ ಕುರ್ಚಿಗಳನ್ನು ರೂ. 25.600/– ಮತ್ತು ಶೇಕಡಾ 12.5 ವ್ಯಾಟ್ ತೆರಿಗೆ ರೂ. 3200/– ಸೇರಿಸಿ ಒಟ್ಟು ರೂ. 28.800/ನ್ನು ನೀಡಿ ಖರೀದಿಸಲು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಕಸಂವಾಪ್ರ 159 ಸ್ವೀಮರ 2008, ಬೆಂಗಳೂರು, ದಿನಾಂಕ: 19ನೇ ಮಾರ್ಚ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಗೆ ಅಗತ್ಯವಿರುವ ಕಂಪ್ಯೂಟರ್ ಕುರ್ಚಿಗಳನ್ನು ಬೆಂಗಳೂರಿನ ವಿಮಾನಪುರದ ಹೆಚ್.ಎ.ಎಲ್. ಓಲ್ಡ್ ಟೌನ್ ಶೀಪ್‌ನಲ್ಲಿರುವ ಜನತಾ ಬಜಾರ್ ಕಂಪನಿಯಿಂದ ಪ್ರತಿಯೊಂದು ಕುರ್ಚಿಗೆ ರೂ. 3200/.–ಗಳಂತೆ (ಮೂರು ಸಾವಿರದ ಇನ್ನೂರು ರೂ.ಗಳು ಮಾತ್ರ) ಶೇ 12.5 ವ್ಯಾಟ್ ಸೇರಿದಂತೆ 08 (ಎಂಟು) ಕಂಪ್ಯೂಟರ್ ಕುರ್ಚಿಗಳಿಗೆ ರೂ. 28.800/– (ಇಪ್ಪತ್ತೆಂಟು ಸಾವಿರದ ಎಂಡುನೂರು ಮಾತ್ರ) ಗಳಿಗೆ ಸರ್ಕಾರದ ಮಂಜುರಾತಿ ನೀಡಲಾಗಿದೆ. ಈ ವೆಚ್ಚವನ್ನು ಸರ್ಕಾರ ಆದೇಶ ಸಂಖ್ಯೆ ಸಿಆಸುಇ 6 ಡಿಎಸ್‌ವೈ 2008, ದಿ:10.10.2008ರಲ್ಲಿ ತಿಳಿಸಿರುವ ಲೆಕ್ಕಶೀರ್ಷಿಕೆ 2052–00–090–0–01–53 (ಫರ್ನೀಚರ್ ಮತ್ತು ಫಿಕ್ಸ್ ಚರ್ ಫಾರ್ ಆಫೀಸ್) (ಯೋಜನೇತರ) ಅಡಿಯಲ್ಲಿ ಭರಿಸುವುದು. ಜನತಾ ಬಜಾರ್ ಕಂಪನಿಗೆ ಮೇಲ್ಕಂಡ ಮೊತ್ತವನ್ನು ಸಿ.ಆ.ಸು.ಇ ಲೆಕ್ಕಪತ್ರ ಶಾಖೆಯು DC ಬಿಲ್ ಮೂಲಕ ಬಿಡುಗಡೆ ಮಾಡುವುದು.

ಮೇಲ್ಕಂಡ ಜನತಾ ಬಜಾರ್, ಪೀಠೋಪಕರಣಗಳ ಕಂಪನಿಯು ಸದರಿ ಎಂಟು ಕುರ್ಚಿಗಳನ್ನು ಕೂಡಲೇ ಕನ್ನಡ ಸಂಸ್ಕೃತಿ ಮತ್ತು ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಗೆ ಸರಬರಾಜು ಮಾಡುವುದು ಹಾಗೂ ಸಿ.ಆ.ಸು. ಇಲಾಖೆಯಿಂದ ನೀಡುವ ಮೊತ್ತಕ್ಕೆ ಸ್ವೀಕೃತಿ ನೀಡುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಕೆ. ಭರ್ಮರಾಜಪ್ಪ
ಪಿ.ಆರ್. 942 ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ (ಆಡಳಿತ ಕನ್ನಡ)

FOREST, ECOLOGY AND ENVIRONMENT SECRETARIAT

Sub: Diversion of 4.18 ha. of forest land in Kagenari and Kanchanakumari RF in Sy.No.1 and 16 of Yadakumari Village, Sakleshpura Taluk, Hassan District for establishment of 18.90 MW Hongadahalla Mini Hydel Project inf avour of M/s Maruthi Power-Gen(India)Private Limited, Bangalore.

Read:
1. Letter No. A5(3)GFL.CR.64/07-08, Dated: 24.05.2008 of Principal Chief Conservator of Forests, Bangalore.
2. State Government letter No. FEE 100 FLL 2008, dated: 29.05.2008.
3. Letter No. 4-KRB449/2008-BAN/2617, dated: 30.06.2008 of Government of India, Ministry of Environment and Forests, Regional Office, Southern Zone, Bangalore.
4. Letter No. A5(3)GFL.CR.64/07-08, Dated: 05.08.2008 of Principal Chief Conservator of Forests, Bangalore.
5. State Government letter No. FEE 100 FLL 2008, dated: 11.03.2009.
6. Letter No.4-KRB499/2008-BAN/4132, dated: 26.03.2009 of Government of India, Ministry of Environment and Forests, Regional Office, Southern Zone, Bangalore.

PREAMBLE:

The Principal Chief Conservator of Forests, Bangalore vide his letter dated:24.05.2008 read at (1) above has submitted the proposal to obtain the approval of Government of India under Section 2 of the Forest (Conservation) Act,1980 for diversion of 4.18 ha. of forest land in Kagenari and Kanchanakumari RF in Sy.No.1 and 16 of Yadakumari Village, Sakleshpura Taluk, Hassan District for

establishment of 18.90 MW Hongadahalla Mini Hydel Project in favour of M/s Maruthi Power-Gen(India) Private Limited, Bangalore subject to certain conditions.

Accordingly the proposal was recommended to Government of India vide State Government letter dated 29.05.2008 read at (2) above.

The Government of India, Ministry of Environment and Forests, Regional office, Bangalore vide their letter dated 03.06.2008 read at (3) above has given its in Principle (Stage-I) approval for diversion of 4.18 ha. of forest land in Kagenari and Kanchanakumari RF in Sy.No.1 and 16 of Yadakumari Village, Sakleshpura Taluk, Hassan District for establishment of 18.90 MW Hongadahalla Mini Hydel Project in fravour of M/s Maruthi Power-Gen(India) Private Limited, Bangalore subject to fulfillment of certain conditions and the same was communicated to the Principal Chief Conservator of Forests, Bangalore for compliance.

The Principal Chief Conservator of Forests, Bangalore vide his letter dated 05.08.2008furnished the compliance report read at (4) above and the same has been sent to Government of India vide State Government letter dated: 11.03.2009 read at (5) above.

Government of India Ministry of Environment and Forests, Regional Office, South Zone, Bangalore vide their letter dated 26/03/2009 read at (6) above has conveyed its approval (Stage-II) under Section 2 of The Forest (Conservation) Act,1980 for diversion of 4.18 ha. of forest land in Kagenari and Kanchanakumari RF in Sy.No.1 and 16 of Yadakumari Village, Sakleshpura Taluk, Hassan District for establishment of 18.90 MW Hongadahalla Mini Hydel Project in favour of M/s Maruthi Power-Gen(India) Private Limited, Bangalore subject to certain conditions.

The proposal has been examined in detail and hence the order.

Government Order No. FEE 100 FLL 2008, Bangalore, Dated: 1st April 2009.

In the circumstances explained in the preamble above, Government are pleased to accord sanction under Section 2 of The Forest (Conservation) Act, 1980 for diversion 4.18 ha. of forest land in Kagenari and Kanchanakumari RF in Sy.No.1 and 16 of Yadakumari Village, Sakleshpura Taluk, Hassan District for establishment of 18.90 MW Hongadahalla Mini Hydel Project in fravour of M/s Maruthi Power-Gen(India) Private Limited, Bangalore subject to the following conditions.

1. The legal Status of the forest land shall remain unchanged.
2. Compensatory Afforestation shall be raised over of equivalent identified non-forest land at the cost of user agency. The State Government shall obtain prior permission of Central Government for change of location and schedule of CA if any.
3. Non-forest land for compensatory afforestation shall be notified by the State Government as RF/PF under Indian Forest Act,1927 or the State Forest Act within a period of 6 months and Nodal Officer(FCA) shall report the compliance with in 6 months.
4. The Catchment Area Treatment Plan shall be executed at the cost of user agency as per the plan under supervision of State Forest Department.
5. The funds received from the user agency towards Net Present Value, CAT Plan and Compensatory Afforestation under this project shall be transferred to Ad-hoc CAMPA in account number CA 1582 of Corporation Bank, Block-II, CGO Complex, Phase-I, Lodhi Road, New Delhi-110 003.
ಡಾ: ವೈ. ಮಂಜುನಾಥ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ (ಪ್ರಭಾರ) ಮಂಡ್ಯ ಜಿಲ್ಲೆ, ಮಂಡ್ಯ ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಎ) ಅಡಿಯಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಅಬಕಾರಿ ಉಪನಿರೀಕ್ಷಕರು (ಪ್ರಭಾರ), ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್‌ರವರ ಕಛೇರಿ, ಮಂಡ್ಯ ಜಿಲ್ಲೆ, ಮಂಡ್ಯ ಇವರ ಪ್ರ.ಮಾ.ವ. ಸಂಖ್ಯೆ: 01/2008-09, ದಿನಾಂಕ:05.07.2008ರ ಪ್ರಕರಣದಲ್ಲಿ ಜಪ್ತುಪಡಿಸಿರುವ ಬಜಾಜ್ ಚೇತಕ್ ಸ್ಕೂಟರ್ ಸಂಖ್ಯೆ: ಕೆಎ-05/ಎಸ್-9343 ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ಇಂದು ಅಂದರೆ ದಿನಾಂಕ:03.03.2009ರಂದು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಬೆರಳಚ್ಚು ಮಾಡಿದ ಪ್ರತಿಯಲ್ಲಿನ ತಪ್ಪುಗಳನ್ನು ತಿದ್ದಿ ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ ಮೂವತ್ತು (30) ದಿವಸಗಳ ನಂತರ ಜಾರಿಗೆ ಬರುವುದು.

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್
ಎಕ್ಸೈಜ್, ಮಂಡ್ಯ ಜಿಲ್ಲೆ, ಮಂಡ್ಯ.

ಪಿ.ಆರ್.273

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ಮಂಡ್ಯ ಜಿಲ್ಲೆ, ಮಂಡ್ಯ ಇವರ ನ್ಯಾಯಾಲಯದಲ್ಲಿ

ಡಿಟಿಸಿಆರ್/92/2007-08, ದಿನಾಂಕ:3ನೇ ಮಾರ್ಚ್, 2009

ಅಬಕಾರಿ ನಿರೀಕ್ಷಕರು (ಪ್ರ), ವಿಚಕ್ಷಣದಳ, ಮಂಡ್ಯ ಜಿಲ್ಲೆ, ಮಂಡ್ಯ ಇವರ ಪ್ರ.ಮಾ.ವ. ಸಂಖ್ಯೆ:04/2007-08, ದಿನಾಂಕ:28.12.2007

ಪಿರ್ಯಾದುದಾರರು

ಅಬಕಾರಿ ನಿರೀಕ್ಷಕರು, (ಪ್ರಭಾರ) ವಿಚಕ್ಷಣದಳ, ಮಂಡ್ಯ ಜಿಲೆ, ಮಂಡ..

ಆರೋಪಿ

1) ಪ್ರಕಾಶ್ ಬಿನ್ ಲೇಟ್ ಕೃಷ್ಣಶೆಟ್ಟಿ

2) ಜಗದೀಶ್ ಅಲಿಯಾಸ್ ಭೋಜ ಬಿನ್ ಲೇಟ್ ವೆಂಕಟಪ್ಪ,

3) [illegible]

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:28.12.2007ರಂದು ಮಧ್ಯಾಹ್ನ 12-30 ಗಂಟೆ ಸಮಯದಲ್ಲಿ ಮಂಡ್ಯ ತಾಲ್ಲೂಕು ಕೀಲಾರ ಗ್ರಾಮದ ಪ್ರಕಾಶ್ ಬಿನ್ ಲೇಟ್ ಕೃಷ್ಣಶೆಟ್ಟಿ ಇವರಿಗೆ ಸೇರಿದ ವಾಸದ ಮನೆಯಲ್ಲಿ ಅಕ್ರಮವಾಗಿ 69.120 ಲೀ ನಕಲಿ ಮದ್ಯ 15.000 ಲೀ ಬಲ್ಕ್ ಮದ್ಯ ಹಾಗೂ ಇತರೆ ಅಬಕಾರಿ ವಸ್ತುಗಳನ್ನು ಬಜಾಜ್ ಸ್ಕೂಟರ್ ಸಂಖ್ಯೆ: ಕೆಎ-01/ಕ್ಯೂ9924 ವಾಹನದಲ್ಲಿ ಸಾಗಾಣಿಕೆ ಮಾಡಲು ಬಳಸುತ್ತಿದ್ದುದನ್ನು ಪತ್ತೆ ಮಾಡಿದ ಪಿರ್ಯಾದುದಾರರು ಇದು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 11, 13(1)(ಎ) ಮತ್ತು 14ರ ರೀತ್ಯಾ ಅಪರಾಧವಾಗಿದ್ದು, ಇದೇ ಕಾಯ್ದೆಯ ಕಲಂ 32, 34, 38(ಎ), 43 ಮತ್ತು 43(ಎ) ರೀತ್ಯಾ ಶಿಕ್ಷಾರ್ಹವಾದ್ದರಿಂದ ವಾಹನ ಹಾಗೂ ಮದ್ಯವನ್ನು ಪಂಚನಾಮೆಯಡಿಯಲ್ಲಿ ಅಮಾನತ್ತುಪಡಿಸಿಕೊಂಡು ಈ ಬಗ್ಗೆ ಪ್ರ.ಮಾ.ವ. ಸಂಖ್ಯೆ: 04/2007-08 ರಂತೆ ಮೊಕದ್ದಮೆಯನ್ನು ದಾಖಲು ಮಾಡಿ ಈ ಪ್ರಾಧಿಕಾರಕ್ಕೆ ವರದಿ ಮಾಡಿರುತ್ತಾರೆ.

ಪ್ರಕರಣದ ತನಿಖೆಯನ್ನು ಮುಂದುವರೆಸಿದ ತನಿಖಾಧಿಕಾರಿಗಳು ಜಪ್ತುಪಡಿಸಿದ ಮದ್ಯದ ಮಾದರಿ ಸೀಸೆಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದ್ದು, ಅದರ ಪ್ರಕಾರ ಮಾದರಿ ಬಾಟಲುಗಳಲ್ಲಿ ಈಥೈಲ್ ಆಲ್ಕೋಹಾಲ್ ಕಂಡು ಬಂದಿದ್ದು ಅವು ಭಾರತದ ಮಾನಕ ಬ್ಯೂರೋಗೆ ಅನುಗುಣವಾಗಿರುವುದಿಲ್ಲ ಮತ್ತು ನಕಲಿ ಮದ್ಯವಾಗಿರುತ್ತವೆ ಎಂದು ರಸಾಯನ ತಜ್ಞರ ವರದಿಯಿಂದ ದೃಢಪಟ್ಟಿರುವುದರಿಂದ, ವಾಹನ ಹಾಗೂ ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ದಿನಾಂಕ:21.01.2009ರ ಪತ್ರದ ಮೂಲಕ ಕೋರಿರುತ್ತಾರೆ.

ವಾಹನಕ್ಕೆ ಸಂಬಂಧಪಟ್ಟಂತೆ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಬೆಂಗಳೂರು (ಸೆಂಟ್ರಲ್) ಇವರು ನೀಡಿರುವ "ಬಿ" ವಹಿಯಲ್ಲಿ ವಾಹನ ಸಂಖ್ಯೆ: ಕೆಎ-01/ಕ್ಯೂ9924 ಗೆ ಸಂಬಂಧಿಸಿದಂತೆ ಶ್ರೀ ಸಿ.ಎಲ್. ರಾಮ್‌ಕುಮಾರ್ ಬಿನ್ ಲಕ್ಷ್ಮೀನರಸಿಂಹಶೆಟ್ಟಿ, ನಂ.164/4, ಆರ್.ವಿ. ರಸ್ತೆ, ದೊಡ್ಡಮಾವಳ್ಳಿ, ಬೆಂಗಳೂರು-560004 ಇವರು ವಾಹನದ ಮಾಲೀಕರೆಂದು ತಿಳಿಸಿದ್ದು, ಸದರಿಯವರಿಗೆ ದಿನಾಂಕ:11.12.2008ರಂದು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಬಿ) ರನ್ವಯ ಕಾರಣ ಕೇಳುವ ನೋಟೀಸ್‌ನ್ನು ನೊಂದಣಿ ಅಂಚೆ ಮೂಲಕ ಕಳುಹಿಸಲಾಗಿತ್ತು.

ಕಾರಣ ಕೇಳುವ ನೋಟೀಸ್ ವಾಹನದ ಮಾಲೀಕರು ಮೇಲ್ಕಂಡ ವಿಳಾಸದಲ್ಲಿ ಲಭ್ಯವಿರದ ಕಾರಣ ಹಿಂತಿರುಗಿ ಬಂದಿರುತ್ತದೆ.

ದಾಖಲಾತಿಗಳನ್ನು ಪರಿಶೀಲಿಸಲಾಗಿ ಪ್ರಕರಣದಲ್ಲಿ ಜಪ್ತುಪಡಿಸಿರುವ ಬಜಾಜ್ ಸ್ಕೂಟರ್ ಸಂಖ್ಯೆ: ಕೆಎ-01/ಕ್ಯೂ-9924 ವಾಹನದಲ್ಲಿ ದಿನಾಂಕ:28.12.2007ರಂದು ಅಕ್ರಮವಾಗಿ ಮದ್ಯಸಾರಯುಕ್ತ ದ್ರವವನ್ನು ಹೊಂದಿ ಸಾಗಾಣಿಕೆ ಮಾಡಿರುವುದು ಸಾಬೀತಾಗಿರುತ್ತದೆ. ಅಲ್ಲದೇ ಜಪ್ತುಪಡಿಸಿರುವ ವಾಹನವನ್ನು ತನ್ನದೆಂದು ಕೋರಿ ಈವರೆವಿಗೂ ಪ್ರಾಧಿಕಾರದ ಮುಂದೆ ಯಾರು ಹಾಜರಾಗದೇ ಇರುವ ಹಿನ್ನೆಲೆಯಲ್ಲಿ, ವಾಹನವನ್ನು ಚಾಲನೆಯಿಲ್ಲದೆ ಹೆಚ್ಚು ಸಮಯ ಇಟ್ಟುಕೊಂಡಲ್ಲಿ ಹವಾಮಾನದ ವೈಪರೀತ್ಯಕ್ಕೆ ಹಾಳಾಗುವ ಮತ್ತು ಬಿಡಿ ಭಾಗಗಳು ತುಕ್ಕು ಹಿಡಿಯುವ ಸಂಭವವಿರುವುದರಿಂದ, ಸರ್ಕಾರದ ಆದಾಯದ ಹಿತದೃಷ್ಟಿಯಿಂದ ಹಾಗೂ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾದ ಅಧಿಕಾರ ಪ್ರಾಧಿಕಾರಕ್ಕೆ ದತ್ತವಾಗಿರುವುದರಿಂದ ಮೇಲ್ಕಂಡ ವಾಹನ ಮತ್ತು ನಕಲಿ ಮದ್ಯ ಮತ್ತು ಇತರೆ ಅಬಕಾರಿ ವಸ್ತುಗಳನ್ನು ವಾರಸುದಾರರಿಲ್ಲದ ಸ್ವತ್ತು ಎಂದು ಪರಿಗಣಿಸಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆ ಎಂದು ಅಭಿಪ್ರಾಯಪಟ್ಟು ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/92/2007-08, ದಿನಾಂಕ:3ನೇ ಮಾರ್ಚ್, 2009

ಡಾ: ವೈ. ಮಂಜುನಾಥ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ (ಪ್ರಭಾರ) ಮಂಡ್ಯ ಜಿಲ್ಲೆ, ಮಂಡ್ಯ ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಅಬಕಾರಿ ನಿರೀಕ್ಷಕರು (ಪ್ರಭಾರ), ವಿಚಕ್ಷಣದಳ, ಮಂಡ್ಯ ಜಿಲ್ಲೆ, ಮಂಡ್ಯ ಇವರ ಪ್ರ.ಮಾ.ವ. ಸಂಖ್ಯೆ: 04/2007-08, ದಿನಾಂಕ:28.12.2007ರ ಪ್ರಕರಣದಲ್ಲಿ ಜಪ್ತುಪಡಿಸಿರುವ ಬಜಾಜ್ ಸ್ಕೂಟರ್ ಸಂಖ್ಯೆ: ಕೆಎ-01/ಕ್ಯೂ-9924 ವಾಹನ, 69.120 ಲೀ ನಕಲಿ ಮದ್ಯ 15.000 ಲೀ ಬಲ್ಕ್ ಮದ್ಯ ಹಾಗೂ ಇತರೆ ಅಬಕಾರಿ ವಸ್ತುಗಳನ್ನು (ರಾಸಾಯನಿಕ ಪರೀಕ್ಷೆಗೆ ತೆಗೆದ ಮಾದರಿ ಹೊರತುಪಡಿಸಿ) ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ಇಂದು ಅಂದರೆ ದಿನಾಂಕ:03.03.2009ರಂದು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಬೆರಳಚ್ಚು ಮಾಡಿದ ಪ್ರತಿಯಲ್ಲಿನ ತಪ್ಪುಗಳನ್ನು ತಿದ್ದಿ ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ ಮೂವತ್ತು (30) ದಿವಸಗಳ ನಂತರ ಜಾರಿಗೆ ಬರುವುದು.

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್

ಎಕ್ಸೈಜ್ (ಪ್ರಭಾರ), ಮಂಡ್ಯ ಜಿಲ್ಲೆ, ಮಂಡ್ಯ

ಪಿ ಆರ್. 7

ಸಹಕಾರ ಇಲಾಖೆ

ಸಹಕಾರ ಸಂಘಗಳ ಸಂಯುಕ್ತ ನಿಬಂಧಕರ ಕಛೇರಿ, ಬೆಂಗಳೂರು ಪ್ರಾಂತ, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560 018

ಸಂಖ್ಯೆ: ಜೆಆರ್‌ಬಿ: ಎಲ್‌ಕ್ಯೂಡಿ:06:ಎಲ್‌ಹೆಚ್‌ಎಸ್:57:07-08, ದಿನಾಂಕ:28ನೇ ಫೆಬ್ರವರಿ, 2009

ವಿಷಯ: ಅಗರಬತ್ತಿ ವರ್ಕರ್ಸ್ ಅಂಡ್ ಅದರ್ಸ್ ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿ ಲಿ., ಬೆಂಗಳೂರು. ಇದರಲ್ಲಿ ನೈಜ ಸದಸ್ಯರು ಇಲ್ಲದೆ ಇರುವುದರಿಂದ ಹಾಗೂ ಸಂಘದಲ್ಲಿ ಹಲವಾರು ಅವ್ಯವಹಾರಗಳು ನಡೆದಿರುವುದರಿಂದ ಆಡಳಿತ ಮಂಡಳಿಯು ಸಮರ್ಪಕವಾಗಿ ಕಾರ್ಯನಿರ್ವಹಿಸದಿರುವುದರಿಂದ ಸಂಘವನ್ನು ಸಮಾಪನೆ ಮಾಡುವ ಬಗ್ಗೆ.

ಉಲ್ಲೇಖ:
1) ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ಇವರ ಆದೇಶ ಸಂಖ್ಯೆ: ಆರ್‌ಸಿಎಸ್/ಎಲ್‌ಕ್ಯೂಡಿ/36/03-04, ದಿನಾಂಕ:06.11.2004.
2) ಮಾನ್ಯ ಸರ್ಕಾರದ ಕಾರ್ಯದರ್ಶಿ, ಸಹಕಾರ ಇಲಾಖೆ, ಕರ್ನಾಟಕ ಸರ್ಕಾರ ಇವರ ಮೇಲ್ಮನವಿ ಆದೇಶ ಸಂಖ್ಯೆ: ಸಿಎಂಡಬ್ಲ್ಯೂ/24/ಸಿಎಪಿ/2007, ದಿನಾಂಕ:24.06.2007.
3) ಈ ಕಛೇರಿಯ ಆದೇಶದ ಸಂಖ್ಯೆ: ಜೆಆರ್‌ಬಿ/ ಎಲ್‌ಕ್ಯೂಡಿ/ಎಲ್‌ಹೆಚ್/5/57/07-08, ದಿನಾಂಕ:22.09.2007.
4) ಗೌರವ ಉಚ್ಚನ್ಯಾಯಾಲಯದ ಮೇಲ್ಮನವಿ ಆದೇಶ ಸಂಖ್ಯೆ:11642/2008 ದಿನಾಂಕ:02.12.2008.
5) ಸಹಕಾರ ಅಭಿವೃದ್ಧಿ ಅಧಿಕಾರಿ, ಬೆಂಗಳೂರು ಉತ್ತರ ತಾಲ್ಲೂಕು ಹಾಗೂ ಸಂಘದ ವಿಶೇಷಾಧಿಕಾರಿಗಳ ಪತ್ರದ ಸಂಖ್ಯೆ: ಸಅಅ/ಬೆಂಉತಾ/40/2008-09, ದಿನಾಂಕ:12.12.2008.
6) ಈ ಕಛೇರಿಯ ಆದೇಶದ ಕ್ರಮಸಂಖ್ಯೆ: ಜೆಆರ್‌ಬಿ/ಎಲ್‌ಕ್ಯೂಡಿ/05/ಎಲ್‌ಹೆಚ್‌ಎಸ್/57/2007-08, ದಿನಾಂಕ:03.01.2009.
7) ಸಹಕಾರ ಅಭಿವೃದ್ಧಿ ಅಧಿಕಾರಿ, ಬೆಂಗಳೂರು ಉತ್ತರ ತಾಲ್ಲೂಕು ಹಾಗೂ ಸಂಘದ ವಿಶೇಷಾಧಿಕಾರಿಗಳ ಪತ್ರದ ಸಂಖ್ಯೆ: ಸಅಅ/ಬೆಂಉತಾ/01/ವಿಅ/2007-08, ದಿನಾಂಕ:11.02.2009.

ಪ್ರಸ್ತಾವನೆ:

ಅಗರಬತ್ತಿ ವರ್ಕರ್ಸ್ ಅಂಡ್ ಅದರ್ಸ್ ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿ ಲಿ., ಬೆಂಗಳೂರು, ಈ ಸಂಘದಲ್ಲಿನ ಅವ್ಯವಹಾರಗಳನ್ನು ಪರಿಗಣಿಸಿ 1959ರ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 65 ರಡಿಯಲ್ಲಿ ಪರಿವೀಕ್ಷಣೆಯನ್ನು ನಡೆಸಿ ದಿನಾಂಕ:26.11.1997ರ ಸಹಕಾರ ಸಂಘಗಳ ಉಪನಿಬಂಧಕರು-1, ಬೆಂಗಳೂರು ನಗರ ಜಿಲ್ಲೆ ರವರ ಆದೇಶದಲ್ಲಿ ಸಮಾಪನೆಗೊಳಿಸಲಾಗಿತ್ತು. ಗೌರವ ಉಚ್ಚ ನ್ಯಾಯಾಲಯದ ಆದೇಶದನ್ವಯ ಹಿಂದಿನ ಆಡಳಿತ ಮಂಡಳಿಗೆ ಅವಕಾಶ ನೀಡಿದ್ದು, ಸಹಕಾರ ಸಂಘಗಳ ನಿಬಂಧಕರ ಆದೇಶ ದಿನಾಂಕ:06.11.2004ರಂತೆ ಸಂಘವನ್ನು ಮತ್ತೊಮ್ಮೆ ಸಮಾಪನೆ ಮಾಡಲಾಗಿತ್ತು.

ಆದರೆ, ಆಡಳಿತ ಮಂಡಳಿಯ ನಿರ್ದೇಶಕರುಗಳು ಗೌರವ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 1329/2005 ರನ್ವಯ ಸಮಾಪನಾ ಆದೇಶವನ್ನು ಪ್ರಶ್ನಿಸಿ ರಿಟ್ ಅರ್ಜಿ ಸಲ್ಲಿಸಿದ್ದರು. ಗೌರವ ಉಚ್ಚ ನ್ಯಾಯಾಲಯವು ರಿಟ್ ಅರ್ಜಿದಾರರ ಮನವಿಯನ್ನು ಪುರಸ್ಕರಿಸಿ ದಿನಾಂಕ:20.03.2006ರಂದು ಆದೇಶ ಹೊರಡಿಸಿ, 2ನೇ ಪ್ರತಿವಾದಿಗಳಾದ ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ಇವರಿಗೆ ನಿರ್ದೇಶನ ನೀಡಿ ಸಂಘದ ವಿರುದ್ಧ ನಡೆಸಲಾದ ವಿಚಾರಣಾ ವರದಿಯನ್ನು ಪರಿಗಣಿಸಿ ಉದ್ದೇಶಿಸಲಾದ ಕ್ರಮವನ್ನು ಪುನರ್ ಪ್ರಾರಂಭಿಸಲು ಆದೇಶಿಸಲಾಗಿತ್ತು. ನಂತರ ದಿನಾಂಕ:24.02.2007ರಂದು ನಿಬಂಧಕರ ಆದೇಶದನ್ವಯ ಈ ಸಂಘವನ್ನು ಸಮಾಪನೆಗೊಳಿಸಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಬೆಂಗಳೂರು 1ನೇ ವಲಯ, ಇವರನ್ನು ಸಮಾಪನಾಧಿಕಾರಿಯಾಗಿ ನೇಮಕ ಮಾಡಲಾಗಿತ್ತು.

ಈ ಸಂಘದ ಆಡಳಿತ ಮಂಡಳಿಯ ಸದಸ್ಯರು ಮೇಲ್ಕಂಡ ನಿಬಂಧಕರ ಆದೇಶವನ್ನು ಪ್ರಶ್ನಿಸಿ ಸಹಕಾರ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯನ್ನು ಪುರಸ್ಕರಿಸಿ, ಸಹಕಾರ ಸಂಘಗಳ ನಿಬಂಧಕರ ದಿನಾಂಕ:24.02.2007ರ ಆದೇಶವನ್ನು ವಜಾ ಮಾಡಿರುತ್ತಾರೆ. ಆದರೆ ಸಂಘದ ಆಡಳಿತ ಮಂಡಳಿಯ ಅವಧಿಯು ದಿನಾಂಕ:31.03.2005ಕ್ಕೆ ಅಂತ್ಯಗೊಂಡು ಸಂಘದಲ್ಲಿ ಶೂನ್ಯತೆ ಉಂಟಾದ ಕಾರಣ ದಿನಾಂಕ:22.09.2007ರ ಆದೇಶದಲ್ಲಿ ಈ ಕಛೇರಿಯಿಂದ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 31(1)ರಡಿಯಲ್ಲಿ ಸಂಘದ ಆಡಳಿತ ಮಂಡಳಿಯನ್ನು ರದ್ದುಗೊಳಿಸಿ, ಸಹಕಾರ ಅಭಿವೃದ್ಧಿ ಅಧಿಕಾರಿ, ಬೆಂಗಳೂರು ಉತ್ತರ ತಾಲ್ಲೂಕು ರವರನ್ನು ವಿಶೇಷಾಧಿಕಾರಿಯಾಗಿ ನೇಮಿಸಲಾಗಿರುತ್ತದೆ.

ಈ ಸಂಘದ ವಿಶೇಷಾಧಿಕಾರಿಗಳು ಉಲ್ಲೇಖ (7)ರ ಪತ್ರದಲ್ಲಿ, ಸಂಘದಲ್ಲಿ ಲಭ್ಯವಿರುವ ಪುಸ್ತಕಗಳನ್ನು ಹಾಗೂ ಲಾಧಿಕಾರಿಗಳು ಹೊರಡಿಸಿರುವ ಆದೇಶಗಳು ಹಾಗೂ ನ್ಯಾಯಾಲಯದ ಆದೇಶಗಳನ್ನು ಪರಿಶೀಲಿಸಿ ಆಡಳಿತ ಮಂಡಳಿ ತಿಸಬೇಕೆ? ಅಥವಾ ಸಂಘವನ್ನು ಸಮಾಪನೆ ಮಾಡಬೇಕೆ? ಎಂಬುದರ ಬಗ್ಗೆ ವರದಿಯನ್ನು ಸಲ್ಲಿಸಿರುತ್ತಾರೆ.

ವಿಶೇಷಾಧಿಕಾರಿಯವರ ಸದರಿ ವರದಿಯಂತೆ ಈ ಸಂಘದ ಸಮಾಪನಾಧಿಕಾರಿಯಾಗಿದ್ದ ಸಹಕಾರ ಸಂಘಗಳ ಹಾಯಕ ನಿಬಂಧಕರು, 1ನೇ ವಲಯ, ಬೆಂಗಳೂರು ಇವರಿಂದ ಪ್ರಭಾರ ಪಡೆದು ಉಳಿದ ಪುಸ್ತಕಗಳನ್ನು ವಹಿಸಿಕೊಳ್ಳುವಂತೆ ೇರಿದ್ದು, ಸಂಘದ ಕಾರ್ಯದರ್ಶಿಗಳು ಕೆಲವು ಪುಸ್ತಕಗಳ ಪ್ರಭಾರವನ್ನು ವಹಿಸಿಕೊಟ್ಟಿರುತ್ತಾರೆ. ಹಾಗೂ ಸಂಘದ ನೈಜ ದಸ್ಯರನ್ನು ಗುರುತಿಸಲು ಅನುವಾಗುವಂತೆ ಅವರು ಯಾವುದೇ ಪುಸ್ತಕಗಳನ್ನು ವಹಿಸಿಕೊಡಲು ವಿಫಲರಾದ ಕಾರಣ ಘದಲ್ಲಿರುವ 4 ಷೇರು ಲೆಡ್ಜರುಗಳನ್ನು ಪರಿಶೀಲಿಸಲಾಗಿ, ಪ್ರಥಮವಾಗಿ ಪ್ರಾರಂಭದಲ್ಲಿ ಸದಸ್ಯರಾಗಿದ್ದವರ ಹೆಸರುಗಳನ್ನು ಪು ಶಾಹಿಯಲ್ಲಿ ತಿದ್ದಿ ಬೇರೆಯವರ ಹೆಸರನ್ನು ಬರೆಯಲಾಗಿದೆ. ಅದರಂತೆ ಪುಟ ಸಂಖ್ಯೆ:1 ರಿಂದ 69 ರವರೆಗೆ ಮೂಲ ದಸ್ಯರ ಹೆಸರುಗಳನ್ನು ಶಾಹಿಯಲ್ಲಿ ಹೊಡೆದು ಹಾಕಿ ಬೇರೊಬ್ಬರ ಹೆಸರನ್ನು ಬರೆದಿರುತ್ತಾರೆ. ಅಂದರೆ, ಪ್ರಾರಂಭಿಕ ರುದಾರರನ್ನು ಯಾವುದೇ ಠರಾವುಗಳಿಲ್ಲದೆ ತೆಗೆದುಹಾಕಿರುವುದು ಕಂಡುಬರುತ್ತದೆ. ಅಂದರೆ ಸಂಘವು 1984 ರಲ್ಲಿ ದಸ್ಯರನ್ನಾಗಿ ಮಾಡಿಕೊಂಡವರನ್ನು ಕಿತ್ತುಹಾಕಿ 1984ರಲ್ಲಿ ಇತರರನ್ನು 69 ಜನರ ಬದಲಾಗಿ ಸೇರಿಸಿಕೊಂಡಿರುತ್ತಾರೆ. ಅಂದರೆ 69 ಜನ ಷೇರುಹಣ ಪಾವತಿಸಿ ಸದಸ್ಯರಾಗಿರುವರೇ ಇಲ್ಲವೇ ಎಂಬುದನ್ನು ಪರಿಶೀಲಿಸಲು ಸಂಘದಲ್ಲಿ ನಗದು ಪುಸ್ತಕಗಳು ಭ್ಯವಿರುವುದಿಲ್ಲ. ಆದ್ದರಿಂದ, ಇವರೆಲ್ಲಾ ನೈಜ ಸದಸ್ಯರೆಂದು ಹೇಳಲು ಸಾಧ್ಯವಿಲ್ಲ. ಸಂಘದಲ್ಲಿರುವ 4 ಷೇರು ಲೆಡ್ಜರ್‌ಗಳನ್ನು ರಿಶೀಲಿಸಿದಾಗ ಷೇರು ಲೆಡ್ಜರ್ 1, 3 ಮತ್ತು 4 ಕ್ರಮಬದ್ಧವಾಗಿ ವರ್ಷಾವಾರು ಮುಂದುವರೆದಿರುತ್ತದೆ. ಆದರೆ, ಷೇರು ಲೆಡ್ಜರ್ ಂಖ್ಯೆ: 2 ಕ್ರಮಬದ್ಧವಾಗಿ ಇರುವುದಿಲ್ಲ ಎಂದು ವರದಿ ಮಾಡಲಾಗಿದೆ.

ಈ ಸಂಘದ ವಿಶೇಷಾಧಿಕಾರಿಗಳು, ಈ ಸಂಘದ ನೊಂದಾಯಿತ ಕಛೇರಿ ವಿಳಾಸವನ್ನು ಪರಿಶೀಲಿಸಲಾಗಿ, ಈ ಘವು ಅನೇಕ ವರ್ಷಗಳಿಂದ ಸದರಿ ವಿಳಾಸದಲ್ಲಿ ಕಾರ್ಯನಿರ್ವಹಿಸದೆ ಇರುವುದನ್ನು ಮನಗಂಡು ಇಲಾಖೆಗೆ ವರದಿ ಾಡಿರುವುದು ಕಂಡುಬಂದಿರುತ್ತದೆ.

ಈ ಸಂಘವನ್ನು ದಿನಾಂಕ:06.11.2004 ರಂದು ಸಮಾಪನೆಗೊಳಿಸಿದ್ದು, ಈ ಆದೇಶವನ್ನು ಪ್ರಶ್ನಿಸಿ ಆಡಳಿತ ಂಡಳಿಯ ನಿರ್ದೇಶಕರುಗಳು ಮಾನ್ಯ ಸಹಕಾರ ಸಚಿವರ ಮುಂದೆ ಮೇಲ್ಮನವಿ ಸಲ್ಲಿಸಿದ್ದರು. ಅಂದರೆ ಇವರಿಗೆ ಸಂಘವು ಮಾಪನೆಯಾಗಿರುವ ಮಾಹಿತಿ ತಿಳಿದಿದ್ದರೂ ಸಹ ದಿನಾಂಕ:07.11.2004 ರಂದು 11 ಜನರನ್ನು ಸದಸ್ಯರನ್ನಾಗಿ ಾಡಿಕೊಂಡಿರುತ್ತಾರೆ. ಇದು ಕಾನೂನು ಬಾಹಿರ ನಿರ್ಣಯವಾಗಿರುತ್ತದೆ. ಆದ್ದರಿಂದ ಇವರನ್ನು ಸದಸ್ಯರಾಗಿ ಪರಿಗಣಿಸಲು ುವುದಿಲ್ಲ. ಇದೇ ರೀತಿ ದಿನಾಂಕ:12.12.2004 ರಲ್ಲಿ ಮತ್ತೆ 15 ಜನರನ್ನು ಹಾಗೂ ದಿನಾಂಕ:23.01.2005ರಲ್ಲಿ 09 ಜನರನ್ನು ಸ್ಯರನ್ನಾಗಿ ಮಾಡಿಕೊಂಡಿರುತ್ತಾರೆ. ತರಾತುರಿಯಾಗಿ ಹಳೆಯ ಸದಸ್ಯರನ್ನು ತೆಗೆದುಹಾಕಿ ನೂತನವಾಗಿ ಕೆಲವರನ್ನು ಸ್ಯರನ್ನಾಗಿ ನೋಂದಾಯಿಸಿರುವುದು ಕಾನೂನು ಬಾಹಿರ ಕ್ರಮವಾಗಿರುತ್ತದೆ. ಆದುದರಿಂದ ಇವರನ್ನೂ ಸಹ ಸದಸ್ಯರೆಂದು ಗಣಿಸಲು ಬರುವುದಿಲ್ಲ. ಸಂಘವು ಸಮಾಪನೆಯಾಗಿದೆ ಎಂಬ ಮಾಹಿತಿ ಗೊತ್ತಿದ್ದರೂ ಸದಸ್ಯರಿಂದ ಷೇರು ಸಂಗ್ರಹಣೆ ಾಡಿರುತ್ತಾರೆ ಹಾಗೂ ನಿವೇಶನ ಠೇವಣಿ ಸಂಗ್ರಹಿಸಿರುತ್ತಾರೆ. ಸಂಘದ ಹೆಸರಿನಲ್ಲಿ ಯಾವುದೇ ಜಮೀನು ಅಥವಾ ನಿವೇಶನ ಿದ್ದರೂ ನೂತನ ಸದಸ್ಯರಿಂದ ನಿವೇಶನ ಠೇವಣಿ ಸಂಗ್ರಹಿಸಿರುವುದು ಅನುಮಾನಾಸ್ಪದವಾಗಿದ್ದು, ಸಂಘವನ್ನು ಸಮಾಪನೆ ಾಡಿದ ಮೇಲೆ ಆಡಳಿತ ಮಂಡಳಿಯು ಕೈಗೊಂಡಿರುವ ಎಲ್ಲಾ ನಿರ್ಣಯಗಳು ಮತ್ತು ವಹಿವಾಟುಗಳು ಅಸಿಂಧುವಾಗುತ್ತವೆ. ಳಿತ ಮಂಡಳಿಗೆ ಅಧಿಕಾರವಿಲ್ಲದಿದ್ದರೂ ಸದಸ್ಯರನ್ನು ತೆಗೆದು ಹಾಕಿ ಅವರಿಗೆ ನಿವೇಶನ ಠೇವಣಿಯನ್ನು ವಾಪಸ್ಸು ಾಡಿರುತ್ತಾರೆ.

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಬೆಂಗಳೂರು 1ನೇ ವಲಯ ರವರು ಸಂಘದ ಬಗ್ಗೆ ಬಂದ ದೂರು ರ್ಯ ಬಗ್ಗೆ ವಿಚಾರಣೆ ಮಾಡಿ ವರದಿ ನೀಡಿದ್ದು, ಸಂಘದಲ್ಲಿ ನೈಜ ಸದಸ್ಯರೇ ಇಲ್ಲವೆಂದು ವರದಿ ಮಾಡಿರುತ್ತಾರೆ. ಘದಲ್ಲಿರುವ 84 ಜನ ಸದಸ್ಯರುಗಳಿಗೆ ನೋಟೀಸು ನೀಡಿ ವಿಚಾರಣೆಗೆ ಹಾಜರಾಗಲು ತಿಳಿಸಲಾಗಿ, 60 ಜನ ಸದಸ್ಯರುಗಳ ಗಳು ಸ್ವೀಕೃತಿಯಾಗದೆ ವಾಪಸ್ಸು ಬಂದಿರುವುದಾಗಿಯೂ, 11 ಜನ ಸದಸ್ಯರು ವಿಚಾರಣಾ ಸಮಯದಲ್ಲಿ ಹಾಜರಾಗಿ ತಾವು ಘದ ಸದಸ್ಯರಲ್ಲವೆಂದೂ ವಿಚಾರಣಾಧಿಕಾರಿಗಳಿಗೆ ತಿಳಿಸಿರುವುದು ಗಮನಾರ್ಹವಾಗಿರುತ್ತದೆ. 84 ಜನರ ಪೈಕಿ 71 ಜನರು ಸ್ಯರಲ್ಲವೆಂದೂ, 13 ಜನರೂ ನೋಟೀಸ್ ಜಾರಿಯಾಗಿದ್ದರೂ ವಿಚಾರಣೆಗೆ ಹಾಜರಾಗಿರುವುದಿಲ್ಲನೆಂದೂ ಹಾಗೂ ಂಕ:25.04.2003ರ ಅಂತ್ಯಕ್ಕೆ ಆಡಳಿತ ಮಂಡಳಿಯವರು ಬಿಟ್ಟು ಉಳಿದವರು ನೈಜ ಸದಸ್ಯರಲ್ಲವೆಂದು ಕಂಡುಬಂದಿರುತ್ತದೆ.

ಸಂಘವು ಸಮಾಪನೆಯಾದ ಸಮಯದಲ್ಲಿ ಸಂಘದ ಆಡಳಿತ ಮಂಡಳಿಯಲ್ಲಿ ಶ್ರೀ ವಿ.ಸಿ. ರೆಡ್ಡಪ್ಪಚೆಟ್ಟಿ, ಶ್ರೀ ಆರ್. ಜುನಾಥ್, ಶ್ರೀ ವಿ. ಶೋಭರಾಜ್, ಶ್ರೀ ಎನ್. ಸೋಮಶೇಖರ್, ಶ್ರೀ ರವಿಕುಮಾರ್, ಶ್ರೀ ಡಿ.ನಾಗರಾಜಶೆಟ್ಟಿ, ಶ್ರೀ ಳನಿಕುಮಾರ್ ಮತ್ತು ಶ್ರೀ ಜಿ. ಶ್ರೀನಿವಾಸಲು ರವರುಗಳು ಆಡಳಿತ ಮಂಡಳಿ ನಿರ್ದೇಶಕರುಗಳಾಗಿರುತ್ತಾರೆ.

ಮೇಲ್ಕಂಡ ನಿರ್ದೇಶಕರುಗಳ ಪೈಕಿ ಶ್ರೀ ವಿ. ರವಿಕುಮಾರ್, ಶ್ರೀ ಡಿ. ನಾಗರಾಜಶೆಟ್ಟಿ ಯವರ ಷೇರು ಲೆಡ್ಜರ್ ಹಿಯಲ್ಲಿ ಬೇರೆಯವರ ಹೆಸರನ್ನು ಹೊಡೆದುಹಾಕಿ ಇವರ ಹೆಸರನ್ನು ಸೇರಿಸಲಾಗಿದೆ. ಇವರು ನೈಜ ಸದಸ್ಯರೆ ಎಂಬುದಕ್ಕೆ

ದಾಖಲೆಗಳಿರುವುದಿಲ್ಲ. ಇದೇ ರೀತಿ ಶ್ರೀ ಪಳನಿಕುಮಾರ್ ಮತ್ತು ಶ್ರೀ ಶ್ರೀನಿವಾಸಲು ನೈಜ ಸದಸ್ಯರಲ್ಲವೆಂದು ಅಭಿಪ್ರಾಯಪಡಲಾಗಿದೆ. ದಿನಾಂಕ:15.06.2001ರ ಸಂಘದ ತಿದ್ದುಪಡಿಯಾದ ಉಪನಿಯಮದಂತೆ ಒಂದು ಷೇರಿನ ಬೆಲೆ ರೂ.1,000/-ಕ್ಕೆ ಹೆಚ್ಚಿಸಿಕೊಂಡಿರುತ್ತಾರೆ. ಆದರೆ ಈ ಮೇಲ್ಕಂಡ 04 ಜನರು ಕ್ರಮವಾಗಿ ರೂ.2/-, ರೂ.10/- ಮತ್ತು ರೂ.2/- ಗಳ ಷೇರು ಫೀ ಪಾವತಿಸಿ ರೂ.1,000/- ಬೆಲೆಯ ಷೇರನ್ನು ಪಡೆದಿರುವುದು ಅಕ್ರಮವಾಗಿದ್ದು, ಇವರು ಆ ದಿನ ಸಂಘದ ಸದಸ್ಯರಲ್ಲವೆಂಬುದು ದೃಢಪಡುತ್ತದೆ.

ಸಂಘದಲ್ಲಿ ಕೇವಲ ನಾಲ್ವರು ನೈಜ ಸದಸ್ಯರು ಮಾತ್ರ ಇರುವುದು ಮೇಲ್ಕಂಡ ಅಂಶಗಳಿಂದ ದೃಢಪಡುತ್ತದೆ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 6(2)(ಬಿ) ಪ್ರಕಾರ ಸಂಘವನ್ನು ನೋಂದಣಿ ಮಾಡಲು 10 ಸದಸ್ಯರು ಬೇಕಾಗಿರುತ್ತದೆ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 72(2)(ಎ) ರನ್ವಯ ಮೇಲ್ಕಂಡಂತೆ 10 ಸದಸ್ಯರಿಗಿಂತ ಕಡಿಮೆ ಇದ್ದಲ್ಲಿ ಅಂತಹ ಸಹಕಾರ ಸಂಘವನ್ನು ಸಮಾಪನೆ ಮಾಡಬೇಕಾಗಿರುತ್ತದೆ.

ಮೇಲ್ಕಂಡ ಅಂಶಗಳನ್ನು ಗಮನಿಸಿದಾಗ ಸಂಘವನ್ನು ಮುಂದುವರೆಸುವುದು ಸಮಂಜಸವಲ್ಲವೆಂಬ ಅಭಿಪ್ರಾಯದೊಂದಿಗೆ, ಹಾಲಿ ಆಡಳಿತ ಮಂಡಳಿ ಅಸ್ಥಿತ್ವದಲ್ಲಿ ಇಲ್ಲದೇ ಇರುವುದರಿಂದ ಹಾಗೂ ಅವರ ಅವಧಿಯು ದಿನಾಂಕ:31.03.2005ಕ್ಕೆ ಮುಕ್ತಾಯವಾಗಿರುವುದರಿಂದ ಹಿಂದಿನ ಆಡಳಿತ ಮಂಡಳಿ ಸದಸ್ಯರಿಗೆ ಕಾರಣ ಕೇಳಿ ನೋಟೀಸ್ ನೀಡುವ ಅವಶ್ಯಕತೆ ಇಲ್ಲದಿರುವುದರಿಂದ ಈ ಸಂಘವನ್ನು ನೇರವಾಗಿ ಸಮಾಪನೆ ಮಾಡುವುದು ಸೂಕ್ತವೆಂದು ಪರಿಗಣಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ಸರ್ಕಾರದ ಆದೇಶ ಸಂಖ್ಯೆ: ಸಿಎಂಡಬ್ಲ್ಯೂ:69:ಸಿಎಲ್ಎಂ 2001, ದಿನಾಂಕ:21.11.2001 ರನ್ವಯ ದತ್ತವಾಗಿರುವ ಅಧಿಕಾರವನ್ನು ಚಲಾಯಿಸುತ್ತಾ ಸಿ.ಎಸ್. ವೀರೇಶ್, ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು ಆದ ನಾನು ಅಗರಬತ್ತಿ ವರ್ಕರ್ಸ್ ಅಂಡ್ ಅದರ್ಸ್ ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿ ಲಿ., ಬೆಂಗಳೂರು ಈ ಸಂಘವನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 72(ಬಿ) ರನ್ವಯ ಸಮಾಪನೆಗೊಳಿಸಿ ಶ್ರೀ ಹೆಚ್.ಎಸ್. ಸೋಮಶೇಖರ್, ಸಹಕಾರ ಅಭಿವೃದ್ಧಿ ಅಧಿಕಾರಿ, ಬೆಂಗಳೂರು ಉತ್ತರ ತಾಲ್ಲೂಕು, ಇವರನ್ನು ಸಮಾಪನಾಧಿಕಾರಿಯಾಗಿ ನೇಮಿಸಿ ಆದೇಶಿಸಲಾಗಿದೆ.

ಸಮಾಪನಾಧಿಕಾರಿಯು ಸಂಘದ ಪ್ರಭಾರವನ್ನು ಕೂಡಲೇ ಪಡೆದು ಪ್ರಭಾರ ಪಟ್ಟಿಯ ಪ್ರತಿಯನ್ನು ಈ ಕಛೇರಿಗೆ ಸಲ್ಲಿಸತಕ್ಕದ್ದು. ಹಾಗೂ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 74 ಮತ್ತು ನಿಯಮ 33ರಂತೆ ಸಮಾಪನಾಧಿಕಾರಿಯ ಕರ್ತವ್ಯ ನಿರ್ವಹಿಸುವುದಲ್ಲದೆ ಸಂಘದ ಇತ್ತೀಚಿನ ಲೆಕ್ಕ ತಪಾಸಣಾ ವರದಿಯನ್ನು ಆಧರಿಸಿ ಆದ್ಯತಾ ಪಟ್ಟಿಯನ್ನು ತಯಾರಿಸಿ, ಈ ಕಛೇರಿಯ ಅನುಮೋದನೆ ಪಡೆದು ಆಸ್ತಿ-ಜವಾಬ್ದಾರಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡಿ ಸಂಘದ ನೋಂದಣಿ ಕ್ರಮಾಂಕವನ್ನು ರದ್ದುಗೊಳಿಸಲು ಸೂಕ್ತ ಕ್ರಮ ಜರುಗಿಸುವುದು.

ಈ ಆದೇಶವನ್ನು ನನ್ನ ಸಹಿ ಮತ್ತು ಕಛೇರಿಯ ಮುದ್ರೆಯೊಂದಿಗೆ ದಿನಾಂಕ:28.02.2009 ರಂದು ನೀಡಲಾಗಿದೆ.

ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು,
ಬೆಂಗಳೂರು ಪ್ರಾಂತ, ಬೆಂಗಳೂರು.

ಪಿ.ಆರ್.277

ಸದಾಶಿವನಗರ ಪೊಲೀಸ್ ಠಾಣೆಯಲ್ಲಿ ಅಮಾನತ್ತುಪಡಿಸಿರುವ ಮಾಲುಗಳ ವಿವರ

1981

ಕ್ರಮ ಸಂಖ್ಯೆ	ಅಪರಾಧ ಸಂಖ್ಯೆ	ಪಿ.ಎಫ್. ಸಂಖ್ಯೆ	ಮಾಲು
1.	247/81	95/81	ಒಂದು ಬ್ರೋಕನ್ ಚೈನ್ ಮತ್ತು ಡಾಲರ್

1986

ಕ್ರಮ ಸಂಖ್ಯೆ	ಅಪರಾಧ ಸಂಖ್ಯೆ	ಪಿ.ಎಫ್. ಸಂಖ್ಯೆ	ಮಾಲು
1.	216/86	99/86	ಒಂದು ಎಲೆಕ್ಟ್ರಿಕಲ್ ಕ್ಯಾಸೆಟ್ ರೆಕಾರ್ಡರ್

1987

ಕ್ರಮ ಸಂಖ್ಯೆ	ಅಪರಾಧ ಸಂಖ್ಯೆ	ಪಿ.ಎಫ್. ಸಂಖ್ಯೆ	ಮಾಲು
1.	146/87	30/87	ಒಂದು ಜೊತೆ ಕೆಂಪು ಕಲ್ಲಿನ ಹಿತ್ತಾಳೆಯ ಓಲೆ ಒಂದಕ್ಕೆ ತಿರುಪ ಇರುವುದಿಲ್ಲ.
2.	146/87	94/87	ಒಂದು ಜೊತೆ ಬಿಳಿ ಕಲ್ಲಿನ ಓಲೆ ತೂಕ ಸುಮಾರು 5 ಗ್ರಾಂ 350 ಮಿಲಿ ಹಾಗೂ ಮೂಗುತಿ 200 ಮಿಲಿ
3.	[illegible]/87	[illegible]	[illegible] ತೂಕ 5 [illegible]

2005

ಕ್ರಮ ಸಂಖ್ಯೆ	ಅಪರಾಧ ಸಂಖ್ಯೆ	ಪಿ.ಎಫ್. ಸಂಖ್ಯೆ	ಮಾಲು
1.	88/05	48/05	ಒಂದು ಹಿರೋ ಹೊಂಡಾ ಸ್ಪ್ಲೆಂಡರ್ ನಂ.ಎಪಿ-16-ಆರ್-3682
2.	102/05	59/05	ಒಂದು ಪಲ್ಸರ್ ಮೋಟಾರ್ ಸೈಕಲ್ ನಂ.ಕೆಎ-40 ಹೆಚ್-5295
3.	35/05	30/07	ಒಂದು ಹಿರೋ ಹೊಂಡಾ ಸ್ಪ್ಲೆಂಡರ್ ನಂ.ಕೆಎ-14-ಕೆ-3033, ನಂಬರ್ ಬದಲಾಗಿದೆ.

1986

ಕ್ರಮ ಸಂಖ್ಯೆ	ಅಪರಾಧ ಸಂಖ್ಯೆ	ಪಿ.ಎಫ್. ಸಂಖ್ಯೆ	ಮಾಲು
1.	149/86	46/86	ಒಂದು ಜೊತೆ ಬೆಳ್ಳಿಯಂತೆ ಇರುವ ಓಲೆಗಳು
2.	178/86	101/86	ಒಂದು ಸೀಕೋ ಕೈ ಗಡಿಯಾರ ಸುಸ್ಥಿತಿಯಲ್ಲಿಲ್ಲ

1989

ಕ್ರಮ ಸಂಖ್ಯೆ	ಅಪರಾಧ ಸಂಖ್ಯೆ	ಪಿ.ಎಫ್. ಸಂಖ್ಯೆ	ಮಾಲು
1.	109/89	36/89	1. ಒಂದು ಬೆಳ್ಳಿಯ ಸೊಂಟದ ಉಡುದಾರ ತೂಕ ಸುಮಾರು 13 ಗ್ರಾಂ. 2. ಒಂದು ಬೆಳ್ಳಿಯ ಉಡುದಾರ ತೂಕ 21 ಗ್ರಾಂ. 3. ಒಂದು ಬೆಳ್ಳಿಯ ಗೆಜ್ಜೆಯ ಉಡುದಾರ ತೂಕ ಸುಮಾರು 21 ಗ್ರಾಂ. 4. ಒಂದು ಜೊತೆ ಬೆಳ್ಳಿಯ ಕಾಲು ಚೈನ್ ತೂಕ ಸುಮಾರು 20 ಗ್ರಾಂ. 5. ಒಂದು ಜೊತೆ ಮಾವಿನಕಾಯಿ ಡಿಸೈನಿನ ಬೆಳ್ಳಿಯ ಕಾಲು ಚೈನ್.
2.	91/89	37/89	1. ಒಂದು ಜೊತೆ ಮಾವಿನ ಕಾಯಿ ಡಿಸೈನಿನ ಮಕ್ಕಳ ಕಾಲು ಚೈನು ತೂಕ ಸುಮಾರು 14 ಗ್ರಾಂ. 2. ಒಂದು ಬೆಳ್ಳಿಯ ಉಡುದಾರ ತೂಕ ಸುಮಾರು 16 ಗ್ರಾಂ.
3.	91/89	38/89	1. ಒಂದು ಜೊತೆ ಎಸ್. ಡಿಸೈನಿನ ಬೆಳ್ಳಿಯ ಕಾಲು ಚೈನು ತೂಕ ಸುಮಾರು 20 ಗ್ರಾಂ. 2. ಒಂದು ಜೊತೆ ಬೆಳ್ಳಿಯ ಕಂಬಿಯ ಸ್ಟಾರ್ ತೂಕ ಸುಮಾರು 200 ಮಿಲಿ ಗ್ರಾಂ.
4.	97/89	39/89	ಮಕ್ಕಳ ಒಂದು ಚಿಕ್ಕ ಚಿನ್ನದ ಉಂಗುರ ತೂಕ ಸುಮಾರು 700 ಮಿಲಿ ಗ್ರಾಂ.
5.	91/89	40/89	1. ಒಂದು ಜೊತೆ ಬೆಳ್ಳಿಯ ಉಡುದಾರ ತೂಕ ಸುಮಾರು 7.5 ಗ್ರಾಂ. 2. ಒಂದು ಜೊತೆ ಗೆಜ್ಜೆಯ ಬೆಳ್ಳಿಯ ಕಾಲು ಚೈನ್ ತೂಕ ಸುಮಾರು 27.5 ಗ್ರಾಂ.
6.	168/89	49/89	ಒಂದು ನ್ಯಾಷನಲ್ ಪ್ಯಾನಸೋನಿಕ್ 2 ಇನ್ 1 ಮಾಡಲ್ ನಂ.ಎಸ್.ಕ್ಯೂ.ಜೆ.ಇ.ಆರ್-40231 ಸುಸ್ಥಿತಿಯಲ್ಲಿಲ್ಲ.
7.	168/89	50/89	ಒಂದು ಯಾಶಿಕ್ ಕ್ಯಾಮರ
8.	208/89	59/89	1. ಒಂದು ಹೆಚ್.ಎಂ.ಟಿ. ಕಾರ್ತಿಕ್ ಕೈ ಗಡಿಯಾರ ಸುಸ್ಥಿತಿಯಲ್ಲಿಲ್ಲ. 2. ಒಂದು ಫೋನ್ ಡಿಸೈನ್ ಓಲೆ. 1.6 ಗ್ರಾಂ.
9.	208/89	62/89	1. ಒಂದು ಹೆಚ್.ಎಂ.ಟಿ. ಕೈ ಗಡಿಯಾರ ಸುಸ್ಥಿತಿಯಲ್ಲಿಲ್ಲ. 2. ಒಂದು ಸಿಟಿಜನ್ ಕೈ ಗಡಿಯಾರ ಸುಸ್ಥಿತಿಯಲ್ಲಿಲ್ಲ. 3. ಹೆಚ್.ಎಂ.ಟಿ. ವಿಜಯ್ ಕೈ ಗಡಿಯಾರ ಸುಸ್ಥಿತಿಯಲ್ಲಿಲ್ಲ. 4. ಒಂದು ಹೇಮಾ ಕಪ್ಪು ಬೆಲ್ಟ್ ಇರುವ ಕೈ ಗಡಿಯಾರ ಸುಸ್ಥಿತಿಯಲ್ಲಿಲ್ಲ. 5. ಒಂದು ಅಜಯ್ ಕೈ ಗಡಿಯಾರ ಸುಸ್ಥಿತಿಯಲ್ಲಿಲ್ಲ. 6. ಒಂದು ಕೈ ಗಡಿಯಾರ ಸುಸ್ಥಿತಿಯಲ್ಲಿಲ್ಲ. 7. ಒಂದು ಟೇಪ್ ರೆಕಾರ್ಡರ್ ಸುಸ್ಥಿತಿಯಲ್ಲಿಲ್ಲ.

ಕ್ರಮ ಸಂಖ್ಯೆ	ಅಪರಾಧ ಸಂಖ್ಯೆ	ಪಿ.ಎಫ್. ಸಂಖ್ಯೆ	ಮಾಲು
10.	208/89	68/89	ಒಂದು ಜೊತೆ ಬೆಳ್ಳಿಯ ಕಾಲು ಚೈನ್
11.	208/89	58/89	1. ಒಂದು ಹೆಚ್.ಎಂ.ಟಿ.ಯ ಹಳೆಯ ಕೈ ಗಡಿಯಾರ ಸುಸ್ಥಿತಿಯಲ್ಲಿಲ್ಲ. 2. ಒಂದು ಪವರ್ ಲೂಬಾ ಕೈ ಗಡಿಯಾರ ಸುಸ್ಥಿತಿಯಲ್ಲಿಲ್ಲ. 3. ಒಂದು ಸಿಟಿಜನ್ ಲೇಡಿಸ್ ಪಾಚಿ ಕಲರ್‌ನ ಕೈ ಗಡಿಯಾರ ಸುಸ್ಥಿತಿಯಲ್ಲಿಲ್ಲ.

1990

ಕ್ರಮ ಸಂಖ್ಯೆ	ಅಪರಾಧ ಸಂಖ್ಯೆ	ಪಿ.ಎಫ್. ಸಂಖ್ಯೆ	ಮಾಲು
1.	95/90	13/90	ಒಂದು ರೀಕೋ ಕೈ ಗಡಿಯಾರ ಸುಸ್ಥಿತಿಯಲ್ಲಿಲ್ಲ
2.	209/90	04/90	ಒಂದು ನ್ಯಾಷನಲ್ ಪೆನಾಸೋನಿಕ್ ಕಾರಿನ ಸ್ಟೀರಿಯೋ ಸುಸ್ಥಿತಿಯಲ್ಲಿಲ್ಲ
3.	209/90	06/90	ಒಂದು ನ್ಯಾಷನಲ್ ಪೆನಾಸೋನಿಕ್ ಕಾರಿನ ಸ್ಟೀರಿಯೋ ಸುಸ್ಥಿತಿಯಲ್ಲಿಲ್ಲ
4.	209/90	07/90	ಎರಡು ಕ್ಲಾರಿಯನ್ ಸ್ಪೀಕರ್‌ಗಳು

1991

ಕ್ರಮ ಸಂಖ್ಯೆ	ಅಪರಾಧ ಸಂಖ್ಯೆ	ಪಿ.ಎಫ್. ಸಂಖ್ಯೆ	ಮಾಲು
1.	85/91	13/91	ಒಂದು ಫಿಲಿಪ್ಸ್ ಟ್ರಾನ್ಸಿಸ್ಟರ್ ರೇಡಿಯೋ ಸುಸ್ಥಿತಿಯಲ್ಲಿಲ್ಲ
2.	87/91	15/91	1. ಒಂದು ಕ್ಲಾರಿನೋ ಸ್ಪೀಕರ್
3.	120/91	20/91	ಒಂದು ಹೆಚ್.ಎಂ.ಟಿ. ಸ್ಟೀಲ್ ಕೇಸಿನ ಕೈ ಗಡಿಯಾರ ಸುಸ್ಥಿತಿಯಲ್ಲಿಲ್ಲ
4.	155/91	45/91	5 ಕೆ.ಜಿ. ತಾಮ್ರದ ಗಟ್ಟಿ
5.	220/91	67/91	ಒಂದು ಗುಂಡಿನ ಮಾದರಿಯ ಡಿಸೈನಿನ ಸುಮಾರು 22 ಗ್ರಾಂ ತೂಕದ ಚಿನ್ನದ ಚೈನ್

1992

ಕ್ರಮ ಸಂಖ್ಯೆ	ಅಪರಾಧ ಸಂಖ್ಯೆ	ಪಿ.ಎಫ್. ಸಂಖ್ಯೆ	ಮಾಲು
1.	123/92	32/92	1. ಒಂದು ಪ್ಲಾಸ್ಟಿಕ್ ಕೈ ಗಡಿಯಾರ ಸುಸ್ಥಿತಿಯಲ್ಲಿಲ್ಲ. 2. ಒಂದು ಸೀಕೋ ಕ್ವಾರ್ಟ್ಜ್ ಕೈ ಗಡಿಯಾರ ಸುಸ್ಥಿತಿಯಲ್ಲಿಲ್ಲ
2.	123/92	33/92	ಒಂದು ಆಲ್ವೀನ್ ಕೈ ಗಡಿಯಾರ ಸುಸ್ಥಿತಿಯಲ್ಲಿಲ್ಲ
3.	123/92	73/92	ಒಂದು ಕಂಪ್ರೆಸರ್
4.	215/92	66/92	ಒಂದು ಹಸಿರು ಬಣ್ಣದ ಎ.ಕೆ.ಆರ್. ಎಂಬ ಹೆಸರಿನ ಸಾದಾ ಉಂಗುರ ತೂಕ ಸುಮಾರು 4.19 ಗ್ರಾಂ ಇರುತ್ತದೆ.

1993

ಕ್ರಮ ಸಂಖ್ಯೆ	ಅಪರಾಧ ಸಂಖ್ಯೆ	ಪಿ.ಎಫ್. ಸಂಖ್ಯೆ	ಮಾಲು
1.	24/93	06/93	4 ಅಡಿ ಎತ್ತರ 2.5 ಅಡಿ ಅಗಲದ ಕಬ್ಬಿಣದ ಅಲೆಮಾರ
2.	26/93	07/93	ಒಂದು ಜೊತೆ ಚಿನ್ನದ ಓಲೆ ತೂಕ ಸುಮಾರು 3.5 ಗ್ರಾಂ ಇರುತ್ತದೆ.
3.	107/93	48/93	1. ಒಂದು ಶಾರ್ಪ್ ಕ್ಯಾಲ್ಕುಲೇಟರ್ 2. ಒಂದು ಹೆಂಗಸರ ಕೈ ಗಡಿಯಾರ ಸುಸ್ಥಿತಿಯಲ್ಲಿಲ್ಲ
4.	249/93	109/93	ಒಂದು ಸ್ಟೀಲ್ ಕೇಸಿನ ಕೈ ಗಡಿಯಾರ ಸುಸ್ಥಿತಿಯಲ್ಲಿಲ್ಲ
5.	265/93	133/93	ಒಂದು ಡಕ್ ಸುಸ್ಥಿತಿಯಲ್ಲಿಲ್ಲ
6.	285/93	134/93	ಒಂದು 2 ಇನ್ 1 ಟೇಪ್ ರಿಕಾರ್ಡರ್ ಸುಸ್ಥಿತಿಯಲ್ಲಿಲ್ಲ
7.	285/93	136/93	1. ಒಂದು ಜೊತೆ ಹಿತ್ತಾಳೆ ಕಂಬಗಳು 2. ಒಂದು ಮುಚ್ಚಳ ಇರುವ ಹಿತ್ತಾಳೆ ಬಕೆಟ್ 3. ಒಂದು ಟಿಫಿನ್ ಕ್ಯಾರಿಯರ್
8.	285/93	137/93	1. ಒಂದು ಚಿನ್ನದ ಚಿಕ್ಕ ಸ್ಟಾರ್ 2. ಒಂದು ಚಿನ್ನದ ಚಿಕ್ಕ ಉಂಗುರ (ಎರಡು ಸೇರಿ 700 ಮಿ.ಗ್ರಾಂ. ಇರುತ್ತದೆ)
9.	297/93	147/93	ಒಂದು ಚಿನ್ನದ ಚೈನು ತೂಕ 9.4 ಗ್ರಾಂ.

1994

ಕ್ರಮ ಸಂಖ್ಯೆ	ಅಪರಾಧ ಸಂಖ್ಯೆ	ಪಿ.ಎಫ್. ಸಂಖ್ಯೆ	ಮಾಲು
1.	255/94	07/94	ಒಂದು ವಾಕ್ ಮನ್ ಸುಸ್ಥಿತಿಯಲ್ಲಿಲ್ಲ
2.	134/94	09/94	ಒಂದು ಕ್ಯಾಲ್ಕುಲೇಟರ್
3.	149/94	11/94	1. ಒಂದು ನೋಟು ಕೆನಡಾ ಡಾಲರ್ 2. ಒಂದು ಇಂಗ್ಲೆಂಡ್ ದೇಶದ 5 ಪೌಂಡ್ ನೋಟು 3. ಒಂದು ಯು.ಎಸ್.ಎ. ಡಾಲರ್ ನೋಟು 4. ಒಂದು ಸೌದಿ ಅರೇಬಿಯಾ ರಿಯಾನ್ ನೋಟು 5. ಒಂದು ಲಿಬರ್ಟಿಸ್ ಎಂಬು ಇರುವ ಕ್ವಾರ್ಟರ್ ಡಾಲರ್ ನ 10 ನಾಣ್ಯಗಳು 6. 5 ಸೆಂಟ್ ನ ಒಂದು ನಾಣ್ಯ. 7. 13 ಡಿ.ಐ.ಎಂ.ಇ. ನಾಣ್ಯಗಳು. 8. ಒಂದು ಕೆನರಾ ಬ್ಯಾಂಕ್‌ನ ಪಾಸ್ ಪುಸ್ತಕ ನಂ.12064 9. ಒಂದು ಚೆಕ್ ಪುಸ್ತಕ
4.	238/94	49/94	1. ಒಂದು ಕಪ್ಪು ಬಣ್ಣದ ಫಿಲಿಪ್ಸ್ ಟೇಪ್ ರಿಕಾರ್ಡರ್ ಸುಸ್ಥಿತಿಯಲ್ಲಿಲ್ಲ

1995

ಕ್ರಮ ಸಂಖ್ಯೆ	ಅಪರಾಧ ಸಂಖ್ಯೆ	ಪಿ.ಎಫ್. ಸಂಖ್ಯೆ	ಮಾಲು
1.	291/95	61/95	ಒಂದು ಬೆಳ್ಳಿಯ ತಟ್ಟೆ ತೂಕ ಸುಮಾರು 350 ಗ್ರಾಂ.

1996

ಕ್ರಮ ಸಂಖ್ಯೆ	ಅಪರಾಧ ಸಂಖ್ಯೆ	ಪಿ.ಎಫ್. ಸಂಖ್ಯೆ	ಮಾಲು
1.	07/96	79/96	ಒಂದು ಕಪ್ಪು ಬಣ್ಣದ ಒಲಂಪಸ್ ಕ್ಯಾಮರ

1997

ಕ್ರಮ ಸಂಖ್ಯೆ	ಅಪರಾಧ ಸಂಖ್ಯೆ	ಪಿ.ಎಫ್. ಸಂಖ್ಯೆ	ಮಾಲು
1.	185/97	35/97	100 ರೂಪಾಯಿನ 29 ನೋಟುಗಳು, ಒಟ್ಟು 2900/- ರೂ.ಗಳು
2.	152/97	38/97	ಒಂದು ಯಮಹಾ ಮೋಟರ್ ಸೈಕಲ್ ನಂ.ಕೆಎ-20 ಜೆ-9062 ಇದರಲ್ಲಿ ಕಾರ್ಬೋರೇಟರ್ ಇರುವುದಿಲ್ಲ. ಇಂಜಿನ್ ಕವರ್ ಹಾಗೂ ಮೋಟಾರ್ ಸೆಟ್ ಬಿಡಿ ಭಾಗಗಳು ಇರುವುದಿಲ್ಲ.
3.	203/97	60/97	ಒಂದು ಲೂನಾ ಪ್ಲಸ್ ನಂ.ಸಿ.ಕೆ.ಎಲ್.6263 ಸುಸ್ಥಿತಿಯಲ್ಲಿಲ್ಲ
4.	317/97	69/97	ಒಂದು ಶಿವಾಸ್ ಗೋಲ್ಡ್ ಕೇಸ್ ಕೈಗಡಿಯಾರ ಸುಸ್ಥಿತಿಯಲ್ಲಿಲ್ಲ

1998

ಕ್ರಮ ಸಂಖ್ಯೆ	ಅಪರಾಧ ಸಂಖ್ಯೆ	ಪಿ.ಎಫ್. ಸಂಖ್ಯೆ	ಮಾಲು
1.	156/98	33/98	ಎರಡು ಚಿನ್ನದ ಗಟ್ಟಿಗಳು ತೂಕ ಸುಮಾರು 14.950 ಮಿಲಿ ಗ್ರಾಂ.
2.	105/98	62/98	ಒಂದು ಬಜಾಜ್ ಚೇತಕ್ ಸ್ಕೂಟರ್ ನಂ.ಕೆಎ-03/ಆರ್-8846 ಸುಸ್ಥಿತಿಯಲ್ಲಿಲ್ಲ

1999

ಕ್ರಮ ಸಂಖ್ಯೆ	ಅಪರಾಧ ಸಂಖ್ಯೆ	ಪಿ.ಎಫ್. ಸಂಖ್ಯೆ	ಮಾಲು
1.	98/99	07/99	ಒಂದು ಗ್ಯಾಸ್ ಸಿಲಿಂಡರ್

2000

ಕ್ರಮ ಸಂಖ್ಯೆ	ಅಪರಾಧ ಸಂಖ್ಯೆ	ಪಿ.ಎಫ್. ಸಂಖ್ಯೆ	ಮಾಲು
1.	264/00	02/00	ಒಂದು ಕೈನೆಟಿಕ್ ಪ್ರೈಡ್ ಮೊಪೆಡ್ ನಂಬರ್ ಇರುವುದಿಲ್ಲ ಸುಸ್ಥಿತಿಯಲ್ಲಿರುವುದಿಲ್ಲ.
2.	34/00	06/00	50 ರೂ.ನ ಎರಡು ನೋಟುಗಳು ಮತ್ತು 10 ರೂ.ನ ಎರಡು ನೋಟುಗಳು ಒಟ್ಟು 120/- ರೂ.ಗಳು

2001

ಕ್ರಮ ಸಂಖ್ಯೆ	ಅಪರಾಧ ಸಂಖ್ಯೆ	ಪಿ.ಎಫ್. ಸಂಖ್ಯೆ	ಮಾಲು
1.	253/01	62/01	1. ಒಂದು ಕಪ್ಪು ಬಣ್ಣದ ಪರ್ಸ್ 2. 100 ರೂ.ನ 5 ನೋಟುಗಳು. 3. ಒಂದು ಲಾಯರ್ ಲಾ ಅಸೋಸಿಯೇಷನ್ ಮೆಂಬರ್‌ಷಿಪ್ ಕಾರ್ಡ್

2002

ಕ್ರಮ ಸಂಖ್ಯೆ	ಅಪರಾಧ ಸಂಖ್ಯೆ	ಪಿ.ಎಫ್. ಸಂಖ್ಯೆ	ಮಾಲು
1.	177/02	32/02	1. ಒಂದು ಹಳದಿ ಬಣ್ಣದ ಪರ್ಸ್ 2. 50 ರೂ.ಗಳ 5 ನೋಟುಗಳು ಒಟ್ಟು 250/- ರೂ.ಗಳು

2003

ಕ್ರಮ ಸಂಖ್ಯೆ	ಅಪರಾಧ ಸಂಖ್ಯೆ	ಪಿ.ಎಫ್. ಸಂಖ್ಯೆ	ಮಾಲು
1.	72/03	39/03	ಒಂದು ಚಿನ್ನದ ಬಟಾಣಿ ಡಿಸೈನಿನ ಚೈನ್ 12.200 ಗ್ರಾಂ ಇರುತ್ತದೆ.
2.	117/03	49/03	1. ಒಂದು ಚಿನ್ನದ ಚೈನು ತೂಕ ಸುಮಾರು 11.22 ಗ್ರಾಂ ಇರುತ್ತದೆ. 2. ಎರಡು ಜೊತೆ ಕಿವಿಯ ಓಲೆಗಳು ಹಾಗೂ ಒಂದು ಕಿವಿಯ ಚೈನು ತೂಕ ಸುಮಾರು 8 ಗ್ರಾಂ ಇರುತ್ತದೆ. 3. ಒಂದು ಕೈ ಬೆರಳಿನ ಚಿಕ್ಕ ಉಂಗುರ ತೂಕ ಸುಮಾರು 1.5 ಗ್ರಾಂ.
3.	203/03	68/03	1. ಬಿ.ಎಂ.ಟಿ.ಸಿ. 2 ಬಸ್ ಟಿಕೆಟ್ 2. 100/- ರೂ.ನ ಒಂದು ನೋಟು
4.	17/03	77/03	ಒಂದು ಕಾರ್ ಸ್ಟೀರಿಯೋ ಸುಸ್ಥಿತಿಯಲ್ಲಿಲ್ಲ

2005

ಕ್ರಮ ಸಂಖ್ಯೆ	ಅಪರಾಧ ಸಂಖ್ಯೆ	ಪಿ.ಎಫ್. ಸಂಖ್ಯೆ	ಮಾಲು
1.	370/05	63/05	ಕೈನೆಟಿಕ್ ಹೊಂಡಾ ನಂ.ಕೆಎ-02/ಯು-8674
2.	372/05	64/05	ಬಜಾಜ್ ಚೇತಕ್ ನಂ.ಸಿಕೆಎಂ-7936

2006

ಕ್ರಮ ಸಂಖ್ಯೆ	ಅಪರಾಧ ಸಂಖ್ಯೆ	ಪಿ.ಎಫ್. ಸಂಖ್ಯೆ	ಮಾಲು
1.	26/06	82/06	ಸಿಬಿಜೆಡ್ ಮೋಟಾರ್ ವಾಹನ ನಂ.ಕೆಎ-04/ಇಎ-6973

ಕ್ರಮ ಸಂಖ್ಯೆ	ಅಪರಾಧ ಸಂಖ್ಯೆ	ಪಿ.ಎಫ್. ಸಂಖ್ಯೆ	ಮಾಲು
1.	209/90	01/04	ಒಂದು ಕಾರು ಸ್ಟೀರಿಯೋ ಸುಸ್ಥಿತಿಯಲ್ಲಿಲ್ಲ
2.	259/99	62/99	ಒಂದು ಗೋದ್ರೇಜ್ ಬೀಗ

ಕ್ರಮ ಸಂಖ್ಯೆ	ಅಪರಾಧ ಸಂಖ್ಯೆ	ಪಿ.ಎಫ್. ಸಂಖ್ಯೆ	ಮಾಲು
3.	17/03	77/03	ಒಂದು ಕಾರ್‌ಸ್ಟೀರಿಯೋ ಸುಸ್ಥಿತಿಯಲ್ಲಿಲ್ಲ
4.	182/94	49/94	ಒಂದು ಕಾರ್ ಸ್ಟೀರಿಯೋ ಸುಸ್ಥಿತಿಯಲ್ಲಿಲ್ಲ
5.	209/90	05/90	ಒಂದು ಕಾರ್ ಸ್ಟೀರಿಯೋ ಸುಸ್ಥಿತಿಯಲ್ಲಿಲ್ಲ
6.	134/93	09/94	ಒಂದು ಟೇಪ್ ರೆಕಾರ್ಡರ್ ಸುಸ್ಥಿತಿಯಲ್ಲಿಲ್ಲ

VII, Addl. Chief
Metropolitan Magistrate, Bangalore City.

ಪಿ.ಆರ್.640

ಡೆಪ್ಯುಟಿ ಕಮಿಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್:105/07-08

ಉಪಸ್ಥಿತರು: ಡಾ|| ವೈ. ಮಂಜುನಾಥ್,
ಡೆಪ್ಯುಟಿ ಕಮಿಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಫಿರ್ಯಾದುದಾರರು
ಎ.ಸಿ. ಲತಾ,
ಅಬಕಾರಿ ಉಪ ನಿರೀಕ್ಷಕರು-2
(ಜಾರಿ ಮತ್ತು ತನಿಖೆ), ಮೈಸೂರು ಉತ್ತರ ವಲಯ.

ಪ್ರತಿವಾದಿ
1) ನಾರಾಯಣ ಬಿನ್ ತಿಮ್ಮಯ್ಯ
ಸಂ. 993, ಸಾತಗಳ್ಳಿ ಲೇ-ಔಟ್, ಮೈಸೂರು.
2) ಬಿ.ಸಿ. ಸ್ವಾಮಿ ಬಿನ್ ಚಿನ್ನಸ್ವಾಮಿಗೌಡ,
ಸಂ.586, ಬೋಳನಹಳ್ಳಿ, ಬಿಳಿಕೆರೆ ಹೋಬಳಿ,
ಹುಣಸೂರು ತಾಲ್ಲೂಕು.

ಪ್ರಕರಣದ ಮುಖ್ಯಾಂಶಗಳು :

ದಿನಾಂಕ : 13-08-07ರಂದು ಸಂಜೆ 5-00 ಗಂಟೆಯ ಸಮಯದಲ್ಲಿ ಅಬಕಾರಿ ಉಪ ನಿರೀಕ್ಷಕರು-2, (ಜಾರಿ ಮತ್ತು ತನಿಖೆ), ಮೈಸೂರು ಉತ್ತರ ವಲಯ ಇವರು ಮೈಸೂರು ತಾಲ್ಲೂಕು, ಸಾತಗಳ್ಳಿ ಲೇಔಟ್, ಮನೆ ನಂ. 993 ರಲ್ಲಿ ಅಕ್ರಮವಾಗಿ ನಕಲಿ ಮದ್ಯ, ಬ್ಲೆಂಡ್ ಮದ್ಯ, ಮದ್ಯಸಾರ ಇತರೆ ಮದ್ಯಗಳನ್ನು ಹೊಂದಿದ್ದ ಅಪರಾಧಕ್ಕಾಗಿ ಮತ್ತು TN-38/Y-2500 ನೋಂದಣಿ ಸಂಖ್ಯೆಯ ಸಿಯೆಲ್ಲೋ ಕಾರ್ ವಾಹನವನ್ನು ಮದ್ಯ ಸರಬರಾಜು ಮಾಡಲು ಉಪಯೋಗಿಸುತ್ತಿದ್ದುದ್ದಕ್ಕಾಗಿ ವಾಹನ ಮತ್ತು ಅಬಕಾರಿ ವಸ್ತುಗಳನ್ನು ವಶಪಡಿಸಿಕೊಂಡು, ಪ್ರ.ಮಾ.ವ ಸಂಖ್ಯೆ 02/07-08ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 13ರ ಪ್ರಕಾರ ಅಪರಾಧವಾಗಿದ್ದು, ಕಲಂ 32, 38(A) ಪ್ರಕಾರ ಶಿಕ್ಷಾರ್ಹವಾದ್ದರಿಂದ 1 ಮತ್ತು 2ನೇ ಆರೋಪಿಯನ್ನು ದಸ್ತಗಿರಿಮಾಡಿ, ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಾಗಿ ಮೊಕದ್ದಮೆಯನ್ನು ದಾಖಲಿಸಿ, ಸಂಬಂಧಪಟ್ಟ ದಾಖಲಾತಿಗಳನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ಪ್ರಕರಣದ ಆರೋಪಿಗಳಾದ ನಾರಾಯಣ ಬಿನ್ ತಿಮ್ಮಯ್ಯ ಮತ್ತು ಬಿ.ಸಿ. ಸ್ವಾಮಿ ಬಿನ್ ಚಿನ್ನಸ್ವಾಮಿಗೌಡ ಇವರಿಗೆ ಈ ಪ್ರಾಧಿಕಾರದಿಂದ ದಿನಾಂಕ:18-09-07ರಂದು ಕಾರಣ ಕೇಳುವ ನೋಟೀಸನ್ನು ನೋಂದಣಿ ಅಂಚೆ ಮೂಲಕ ಜಾರಿಗೊಳಿಸಲಾಗಿದ್ದು, ಸದರಿ ನೋಟೀಸ್ ಜಾರಿಯಾಗಿ, ಸ್ವೀಕೃತಿಯು ಈ ಪ್ರಾಧಿಕಾರಕ್ಕೆ ಕ್ರಮವಾಗಿ ದಿನಾಂಕ: 03-10-07 ಮತ್ತು 25-10-07ರಂದು ಸ್ವೀಕೃತವಾಗಿರುತ್ತದೆ. ಹಾಗೆಯೇ ವಾಹನದ ಮಾಲೀಕತ್ವದ ವಿವರವನ್ನು ಕೋರಿ, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಕೊಯಮತ್ತೂರು ಜಿಲ್ಲೆ, ತಮಿಳುನಾಡು ರಾಜ್ಯ ಇವರಿಗೆ ದಿನಾಂಕ : 29-08-07 ರಂದು ಪತ್ರ ವ್ಯವಹಾರ ನಡೆಸಲಾಗಿದ್ದು, ಇದಕ್ಕೆ ಯಾವುದೇ ಪ್ರತಿಕ್ರಿಯೆ ಇಲ್ಲದ ಕಾರಣ ದಿನಾಂಕ: 17-10-07 ಮತ್ತು 17-11-07 ರಂದು ಚೆನ್ನೈನ ಟ್ರಾನ್ಸ್‌ಪೋರ್ಟ್ ಆಯುಕ್ತರಿಗೆ ಪತ್ರ ವ್ಯವಹಾರ ನಡೆಸಿ, ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ "ಬಿ" ವಹಿಯನ್ನು ನೀಡುವಂತೆ ನಿರ್ದೇಶನವನ್ನು ನೀಡಲು ಕೋರಿ ಪತ್ರ ಬರೆಯಲಾಗಿರುತ್ತದೆ. ಈ ಪ್ರಕರಣದಲ್ಲಿ ಜಫ್ತುಗೊಳಿಸಲಾದ 60.480 ಲೀ. ಮದ್ಯ, 5 ಲೀ. ಮದ್ಯಸಾರ, 135 ಲೀ. ಬ್ಲೆಂಡ್ ಮದ್ಯ, ಮುಚ್ಚಳಗಳು, ಅಡ್ಹೆಸಿವ್ ಲೇಬಲ್‌ಗಳು, ಖಾಲಿ ಸೀಸೆಗಳು ಮತ್ತು ಇತರೆ ವಸ್ತುಗಳನ್ನು ದಿನಾಂಕ : 21-11-07 ರಂದು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ಹೊರಡಿಸಲಾಗಿರುತ್ತದೆ. ಮೈಸೂರು ಉತ್ತರ ತಾಲ್ಲೂಕಿನ ಜಾರಿ ಮತ್ತು ತನಿಖೆಯ ಅಬಕಾರಿ ಉಪ ನಿರೀಕ್ಷಕರು-2 ತಮ್ಮ ಪತ್ರ ದಿನಾಂಕ : 06-12-07ರಲ್ಲಿ ಜಫ್ತುಗೊಳಿಸಲಾದ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ವರದಿ ಮಾಡಿರುತ್ತಾರೆ.

ಈ ಪ್ರಕರಣದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ದಿನಾಂಕ:13-08-07ರಂದು ಮೈಸೂರು ತಾಲ್ಲೂಕು, ಸಾತಗಳ್ಳಿ ಲೇಔಟ್, ಮನೆ ನಂ. 993 ರಲ್ಲಿ ಅಕ್ರಮವಾಗಿ ನಕಲಿ ಮದ್ಯ, ಬ್ಲೆಂಡ್ ಮದ್ಯ, ಮದ್ಯಸಾರ ಮತ್ತು ಇತರೆ ಮದ್ಯಗಳನ್ನು ಹೊಂದಿದ್ದ ಅಪರಾಧಕ್ಕಾಗಿ ಮತ್ತು TN-38/Y-2500 ನೋಂದಣಿ ಸಂಖ್ಯೆಯ ಸಿಯೆಲ್ಲೋ ಕಾರ್ ವಾಹನದಲ್ಲಿ ಅಕ್ರಮವಾಗಿ ನಕಲಿ

ಮದ್ಯ ಮತ್ತು ನಕಲಿ ಮದ್ಯ ತಯಾರಿಕಾ ವಸ್ತುಗಳನ್ನು ಹೊಂದುವುದು / ಸಾಗಾಣಿಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ. ಈ ಸಂದರ್ಭದಲ್ಲಿ ಆರೋಪಿ (1) ನಾರಾಯಣ ಮತ್ತು (2) ಬಿ.ಸಿ.ಸ್ವಾಮಿ ಇವರುಗಳನ್ನು ದಸ್ತಗಿರಿ ಮಾಡಲಾಗಿರುತ್ತದೆ. ಸದರಿ ಆರೋಪಿಗಳು ಈ ಪ್ರಾಧಿಕಾರದ ಮುಂದೆ ಹಾಜರಾಗಿ, ತಮ್ಮ ನಿಲುವು ಏನೆಂಬುದನ್ನು ತಿಳಿಸಿರುವುದಿಲ್ಲ. ವಾಹನ ಮಾಲೀಕತ್ವದ ವಿವರವನ್ನು ಕೋರಿ, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಮತ್ತು ಸಾರಿಗೆ ಆಯುಕ್ತರಿಗೆ ಪತ್ರ ವ್ಯವಹಾರ ನಡೆಸಿದ್ದರೂ ಸಹ ಇದೂವರೆವಿಗೂ ಅವರಿಂದ ಯಾವುದೇ ಪ್ರತಿಕ್ರಿಯೆ ಇರುವುದಿಲ್ಲ. ಅಲ್ಲದೇ ವಾಹನ ಬಿಡುಗಡೆಗಾಗಿ ಆರೋಪಿ / ಪ್ರತಿವಾದಿಗಳ ಕಡೆಯಿಂದ ಯಾವುದೇ ಪ್ರಯತ್ನ ನಡೆದಿರುವುದಿಲ್ಲ ಹಾಗೂ ಅಬಕಾರಿ ಕಾಯ್ದೆ ಕಲಂ 43ರ ಅಡಿಯಲ್ಲಿ ಪ್ರಸ್ತಾವನೆ ಮತ್ತು 43(ಬಿ)(1)(2) ಪ್ರತಿವಾದಿಗಳ ಮೇಲೆ ಇರತಕ್ಕಂತಹ ಜವಾಬ್ದಾರಿಯನ್ನು ಅವರು ಪ್ರಾಧಿಕಾರದ ಮುಂದೆ ಸ್ಪಷ್ಟವಾಗಿ ನಿರೂಪಿಸಿರುವುದಿಲ್ಲ. ಜಪ್ತು ಪಡಿಸಲಾದ ಮಾದಕ ದ್ರವ್ಯಗಳಲ್ಲಿ ಆಲ್ಕೋಹಾಲ್ ಅಂಶದ ಪ್ರಮಾಣ ಪತ್ತೆಯಾಗಿರುವುದು ರಾಸಾಯನಿಕ ತಜ್ಞರ ವರದಿಯಿಂದ ದೃಢಪಟ್ಟಿರುತ್ತದೆ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು 17 ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ ಈ ಬಗ್ಗೆ ತಾನು ವಿಚಾರಣೆಯನ್ನು ನಡೆಸುತ್ತೇನೆಂದಾಗಲೀ ಯಾರೂ ಇಂದಿನವರೆಗೂ ಖುದ್ದಾಗಿ ಆಗಲಿ ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನದ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ / ವಾಹನದ ಮಾಲೀಕರಿಗೆ ಅಥವಾ ಏಜೆಂಟರ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮೀಲಾಗದೇ ಹಾಗೂ ಅವರೆಲ್ಲರಿಗೂ ಅರಿವಿಲ್ಲದಂತೆ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿರುವುದಿಲ್ಲವಾದುದರಿಂದ ಸದರಿ ವಾಹನವನ್ನು ಇನ್ನೂ ಹಾಗೆಯೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/105/07–08, ದಿನಾಂಕ:26ನೇ ಫೆಬ್ರವರಿ, 2009

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಬಿ) ರ ಪ್ರಕಾರ ಅನುಸರಿಸಬೇಕಾದ ಕ್ರಮಗಳನ್ನೆಲ್ಲಾ ಅನುಸರಿಸಿದ ನಂತರ ಕಲಂ 43(ಎ)(1)ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಅಬಕಾರಿ ಉಪ ನಿರೀಕ್ಷಕರು–2, (ಜಾರಿ ಮತ್ತು ತನಿಖೆ), ಮೈಸೂರು ಉತ್ತರ ತಾಲ್ಲೂಕು ಇವರ ಪ್ರಮಾವ ಸಂಖ್ಯೆ : 02/07-08, ದಿನಾಂಕ : 13-08-07ರಂದು ವಶಪಡಿಸಿಕೊಂಡ TN-38/Y-2500 ನೋಂದಣಿ ಸಂಖ್ಯೆಯ ಸಿಯೆಲ್ಲೋ ಕಾರ್ ವಾಹನವನ್ನು (60.480 ಲೀ. ಮದ್ಯ, 5 ಲೀ. ಮದ್ಯಸಾರ, 135 ಲೀ. ಬ್ಲೆಂಡ್ ಮದ್ಯ, ಮುಚ್ಚಳಗಳು, ಅಡ್ಹೆಸಿವ್ ಲೇಬಲ್‌ಗಳು, ಖಾಲಿ ಸೀಸೆಗಳು ಮತ್ತು ಇತರೆ ವಸ್ತುಗಳನ್ನು ಈಗಾಗಲೇ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿರುತ್ತದೆ) ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಲಾಗಿದೆ.

(ಈ ಆದೇಶವನ್ನು ಇಂದು ಅಂದರೆ 2009ನೇ ಇಸವಿಯ ಫೆಬ್ರವರಿ ತಿಂಗಳ 26ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಪ್ರಾಧಿಕಾರದ ಮೊಹರಿನೊಂದಿಗೆ ಹೊರಡಿಸಲಾಗಿದೆ.)

ಈ ಆದೇಶವು ಇಂದಿನಿಂದ 30 ದಿನಗಳ ನಂತರ ಜಾರಿಗೆ ಬರುವುದು.

ಡಾ|| ವೈ. ಮಂಜುನಾಥ್

ಪಿ.ಆರ್.324

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ಹಾಗೂ
ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಡೆಪ್ಯುಟಿ ಕಮಿಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ : ಡಿಟಿಸಿಆರ್ : 177/07-08

ಉಪಸ್ಥಿತರು: ಡಾ|| ವೈ. ಮಂಜುನಾಥ್,
ಡೆಪ್ಯುಟಿ ಕಮಿಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಫಿರ್ಯಾದುದಾರರು

ಪಿ. ರಮೇಶ್, ಅಬಕಾರಿ ಉಪ ನಿರೀಕ್ಷಕರು–2,
(ಜಾರಿ ಮತ್ತು ತನಿಖೆ), ಟಿ.ನರಸೀಪುರ.

ಪ್ರತಿವಾದಿ/ ಆರೋಪಿ

1) ಎಂ. ವಿಜಯ ಬಿನ್ ಮಹದೇವ
ಬೋರೇಗೌಡ, ಅಂಕನಹಳ್ಳಿ, ಬನ್ನೂರು ಹೋಬಳಿ, ಟಿ.ನರಸೀಪುರ ತಾ:
2) ನಾಗರಾಜು ಬಿನ್ ಮಹದೇವ @ ತಲೆಬುರುಡೆ,
ಅಂಕನಹಳ್ಳಿ, ಬನ್ನೂರು ಹೋಬಳಿ,
ಟಿ.ನರಸೀಪುರ ತಾ:

ಪ್ರಕರಣದ ಮುಖ್ಯಾಂಶಗಳು:

ದಿನಾಂಕ : 22-09-07ರಂದು ಬೆಳಿಗ್ಗೆ 4-15 ಗಂಟೆಯ ಸಮಯದಲ್ಲಿ ಅಬಕಾರಿ ಉಪ ನಿರೀಕ್ಷಕರು-2, (ಜಾರಿ ಮತ್ತು ತನಿಖೆ), ಟಿ.ನರಸೀಪುರ ಇವರು ಟಿ.ನರಸೀಪುರ ತಾಲ್ಲೂಕು, ಬನ್ನೂರು ಹೋಬಳಿ, ಗುಡ್ಡದ ಕೊಪ್ಪಲು ಸರ್ಕಲ್‌ನಿಂದ ಅಂಕನಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಅಂಬಾಸಿಡರ್ ಕಾರ್ ಸಂ: KA-19/M-2345 ರಲ್ಲಿ ಅಕ್ರಮವಾಗಿ 112.320 ಲೀ. ನಕಲಿ ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದುದ್ದಕ್ಕಾಗಿ ವಾಹನ ಮತ್ತು ನಕಲಿ ಮದ್ಯವನ್ನು ವಶಪಡಿಸಿಕೊಂಡು, ಪ್ರ.ಮಾ.ವ ಸಂಖ್ಯೆ 05/07-08ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 11 ಮತ್ತು 14ರ ಪ್ರಕಾರ ಅಪರಾಧವಾಗಿದ್ದು, ಕಲಂ 32 ಪ್ರಕಾರ ಶಿಕ್ಷಾರ್ಹವಾದ್ದರಿಂದ 1ನೇ ಆರೋಪಿಯನ್ನು ದಸ್ತಗಿರಿ ಮಾಡಿರುವುದಾಗಿ ಮೊಕದ್ದಮೆಯನ್ನು ದಾಖಲಿಸಿ, ಸಂಬಂಧಪಟ್ಟ ದಾಖಲಾತಿಗಳನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ಪ್ರಕರಣದ ಆರೋಪಿಗಳಾದ ಎಂ.ವಿಜಯ್, ನಾಗರಾಜು, ಪುಟ್ಟರಾಜು ಇವರಿಗೆ ಈ ಪ್ರಾಧಿಕಾರದಿಂದ ದಿನಾಂಕ:14-11-07 ರಂದು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 43(ಬಿ)ರ ಅಡಿಯಲ್ಲಿ ಕಾರಣ ಕೇಳುವ ನೋಟೀಸನ್ನು ನೋಂದಣಿ ಅಂಚೆ ಮೂಲಕ ಜಾರಿಗೊಳಿಸಲಾಗಿದ್ದು, ಸ್ವೀಕೃತಿಯು ಈ ಪ್ರಾಧಿಕಾರಕ್ಕೆ ದಿನಾಂಕ : 20-11-07ರಂದು ಸ್ವೀಕೃತವಾಗಿರುತ್ತದೆ. ಹಾಗೆಯೇ ವಾಹನದ ಮಾಲೀಕತ್ವದ ವಿವರವನ್ನು ಕೋರಿ, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರಿಗೆ ದಿನಾಂಕ:14-11-07, 17-01-08 ಮತ್ತು 15-07-08ರಂದು ಪತ್ರ ವ್ಯವಹಾರ ನಡೆಸಲಾಗಿರುತ್ತದೆ. ಈ ಪ್ರಕರಣದಲ್ಲಿ ಜಪ್ತುಗೊಳಿಸಲಾದ 112.320 ಲೀ. (ನಕಲಿ ಒರಿಜಿನಲ್ ಛಾಯ್ಸ್ ಎಂದು ಲೇಬಲ್ ಇರುವ) ನಕಲಿ ಮದ್ಯವನ್ನು ಕರ್ನಾಟಕ ಅಬಕಾರಿ ಕಾಯ್ದೆ ರೀತ್ಯಾ ದಿ: 28-01-2008ರಂದು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ಹೊರಡಿಸಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನೀಡಿರುವ ಬಿ ವಹಿರನ್ವಯ ನಜೂರ್ ಅಹಮದ್ ಬಿನ್ ಎ.ಎಂ. ಅಹಮದ್, ಹಂಜಾ, ಬಿ.ಎಂ. ರಸ್ತೆ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ ಇವರಿಗೆ ಈ ಪ್ರಾಧಿಕಾರದಿಂದ ದಿ : 23-09-2008ರಂದು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 43(ಬಿ)ರ ಅಡಿಯಲ್ಲಿ ಕಾರಣ ಕೇಳುವ ನೋಟೀಸನ್ನು ನೋಂದಣಿ ಅಂಚೆ ಮೂಲಕ ಜಾರಿಗೊಳಿಸಲಾಗಿದ್ದು, ಅಂಚೆ ಇಲಾಖೆಯವರು ವಿಳಾಸದಲ್ಲಿಲ್ಲವೆಂಬ ಷರಾದೊಂದಿಗೆ ಈ ಪ್ರಾಧಿಕಾರಕ್ಕೆ ಹಿಂದಿರುಗಿಸಿರುತ್ತಾರೆ.

ಕಡತ ಪರಿಶೀಲಿಸಲಾಯಿತು. ಕೆಳಕಂಡ ದಾಖಲಾತಿಗಳು ಕಂಡುಬಂದಿರುತ್ತವೆ.

1. ಶೋಧನಾ ಸಮುಚಿತ ಆಧಾರ
2. ಮಹಜರ್ ಕ್ರಮ
3. ಮಾದರಿ ಮೊಹರಿನ ನಕಲು
4. ಪ್ರಥಮ ಮಾಹಿತಿ ವರದಿ.
5. ಮಾಲುಪಟ್ಟಿ
6. ರಾಸಾಯನಿಕ ತಜ್ಞರ ವರದಿ.

ಮೇಲ್ಕಂಡ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ದಿನಾಂಕ : 22-09-07ರಂದು ಟಿ.ನರಸೀಪುರ ತಾಲ್ಲೂಕು, ಬನ್ನೂರು ಹೋಬಳಿ, ಗುಡ್ಡದ ಕೊಪ್ಪಲು ಸರ್ಕಲ್‌ನಿಂದ ಅಂಕನಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಅಂಬಾಸಿಡರ್ ಕಾರ್ ಸಂ: KA-19/M-2345 ರಲ್ಲಿ ಅಕ್ರಮವಾಗಿ 112.320 ಲೀ. ನಕಲಿ ಮದ್ಯವನ್ನು ಯಾವುದೇ ರಹದಾರಿಯಿಲ್ಲದೆ ಹೊಂದಿ, ಸಾಗಾಣಿಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ. ಈ ಸಂದರ್ಭದಲ್ಲಿ ಆರೋಪಿ (1) ಎಂ. ವಿಜಯ್ ಇವರನ್ನು ದಸ್ತಗಿರಿ ಮಾಡಲಾಗಿರುತ್ತದೆ. ಸದರಿ ಆರೋಪಿಯು ಈ ಪ್ರಾಧಿಕಾರದ ಮುಂದೆ ಹಾಜರಾಗಿ, ತಮ್ಮ ನಿಲುವು ಏನೆಂಬುದನ್ನು ತಿಳಿಸಿರುವುದಿಲ್ಲ. ಅಲ್ಲದೇ ಬಿ ವಹಿರನ್ವಯ ವಾಹನ ಮಾಲೀಕರಾದ ನಜೂರ್ ಅಹಮದ್ ಬಿನ್ ಎ.ಎಂ. ಅಹಮದ್, ಹಂಜಾ, ಬಿ.ಎಂ. ರಸ್ತೆ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ ಇವರ ಒಡೆತನದಲ್ಲಿದ್ದು, ವಾಹನ ಬಿಡುಗಡೆಗಾಗಿ ಆರೋಪಿ/ಪ್ರತಿವಾದಿಗಳ ಕಡೆಯಿಂದ ಯಾವುದೇ ಪ್ರಯತ್ನ ನಡೆದಿರುವುದಿಲ್ಲ ಹಾಗೂ ಅಬಕಾರಿ ಕಾಯ್ದೆ ಕಲಂ 43ರ ಅಡಿಯಲ್ಲಿ ಪ್ರಸ್ತಾವನೆ ಮತ್ತು 43(ಬಿ)(1)(2) ಮಾಲೀಕರ ಮೇಲೆ ಇರತಕ್ಕಂತಹ ಜವಾಬ್ದಾರಿಯನ್ನು ಅವರು ಪ್ರಾಧಿಕಾರದ ಮುಂದೆ ಸ್ಪಷ್ಟವಾಗಿ ನಿರೂಪಿಸಿರುವುದಿಲ್ಲ. ಜಪ್ತು ಪಡಿಸಲಾದ ಮಾದಕ ದ್ರವ್ಯಗಳಲ್ಲಿ ಆಲ್ಕೋಹಾಲ್ ಅಂಶದ ಪ್ರಮಾಣ ಪತ್ತೆಯಾಗಿರುವುದು ರಾಸಾಯನಿಕ ತಜ್ಞರ ವರದಿಯಿಂದ ದೃಢಪಟ್ಟಿರುತ್ತದೆ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು 17 ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ ಈ ಬಗ್ಗೆ ತಾನು ವಿಚಾರಣೆಯನ್ನು ನಡೆಸುತ್ತೇನೆಂದಾಗಲೀ ಯಾರೂ ಇಂದಿನವರೆಗೂ ಖುದ್ದಾಗಿ ಆಗಲಿ ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನದ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನದ ಮಾಲೀಕರಿಗೆ ಅಥವಾ ಏಜೆಂಟರ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮೀಲಾಗದೇ ಹಾಗೂ ಅವರೆಲ್ಲರಿಗೂ ಅರಿವಿಲ್ಲದಂತೆ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿರುವುದಿಲ್ಲವಾದುದರಿಂದ ಸದರಿ ವಾಹನವನ್ನು ಇನ್ನೂ ಹಾಗೆಯೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/177/07-08, ದಿನಾಂಕ:26ನೇ ಫೆಬ್ರವರಿ, 2009

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಬಿ) ರ ಪ್ರಕಾರ ಅನುಸರಿಸಬೇಕಾದ ಕ್ರಮಗಳನ್ನೆಲ್ಲಾ ಅನುಸರಿಸಿದ ನಂತರ ಕಲಂ 43(ಎ)(1)ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಅಬಕಾರಿ ಉಪ ನಿರೀಕ್ಷಕರು-2, (ಜಾರಿ ಮತ್ತು ತನಿಖೆ), ಟಿ.ನರಸೀಪುರ ಇವರ ಪ್ರಮಾವ ಸಂಖ್ಯೆ : 05/07-08, ದಿನಾಂಕ:22-09-07ರಂದು ವಶಪಡಿಸಿಕೊಂಡ KA-19/M-2345 ನೋಂದಣಿ ಸಂಖ್ಯೆಯ ಅಂಬಾಸಿಡರ್ ವಾಹನವನ್ನು (112.320 ಲೀ. ನಕಲಿ ಮದ್ಯವನ್ನು ಈಗಾಗಲೇ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿರುತ್ತದೆ) ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಲಾಗಿದೆ.

(ಈ ಆದೇಶವನ್ನು ಇಂದು ಅಂದರೆ 2009ನೇ ಇಸವಿಯ ಫೆಬ್ರವರಿ ತಿಂಗಳ 26ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಪ್ರಾಧಿಕಾರದ ಮೊಹರಿನೊಂದಿಗೆ ಹೊರಡಿಸಲಾಗಿದೆ.)

ಈ ಆದೇಶವು ಇಂದಿನಿಂದ 30 ದಿನಗಳ ನಂತರ ಜಾರಿಗೆ ಬರುವುದು.

ಡಾ॥ ವೈ. ಮಂಜುನಾಥ್

ಪಿ.ಆರ್.325 ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಡೆಪ್ಯುಟಿ ಕಮಿಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ : ಡಿಟಿಸಿಆರ್ : 143/07-08

ಉಪಸ್ಥಿತರು: ಡಾ॥ ವೈ. ಮಂಜುನಾಥ್

ಡೆಪ್ಯುಟಿ ಕಮಿಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಫಿರ್ಯಾದುದಾರರು **ಪ್ರತಿವಾದಿ**

ಎಂ.ಎನ್.ಸುಸನ್ನ ಆರೋಪಿ ಪರಾರಿಯಾಗಿರುತ್ತಾನೆ

ಅಬಕಾರಿ ನಿರೀಕ್ಷಕರು, ನಂಜನಗೂಡು ವಲಯ.

ಪ್ರಕರಣದ ಮುಖ್ಯಾಂಶಗಳು :

ದಿನಾಂಕ : 01-09-07ರಂದು ರಾತ್ರಿ 7-30 ಗಂಟೆಯ ಸಮಯದಲ್ಲಿ ಅಬಕಾರಿ ನಿರೀಕ್ಷಕರು, ನಂಜನಗೂಡು ವಲಯ ಇವರು ನಂಜನಗೂಡು ತಾಲ್ಲೂಕು, ನಂಜನಗೂಡು- ಟಿ.ನರಸೀಪುರ ಮುಖ್ಯ ರಸ್ತೆಯಲ್ಲಿ ಬರುವ ಆಲಂಬೂರು ಗ್ರಾಮದ ಬಸ್ ನಿಲ್ದಾಣದ ಬಳಿ ಹಿರೋಪುಕ್ ಮೊಪೆಡ್ ಸಂ: KA-09/L-2748 ರಲ್ಲಿ ಅಕ್ರಮವಾಗಿ 8.640 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಆಪಾದನೆಗಾಗಿ ವಾಹನ ಮತ್ತು ಮದ್ಯವನ್ನು ವಶಪಡಿಸಿಕೊಂಡು, ಪ್ರ.ಮಾ.ವ ಸಂಖ್ಯೆ 02/07-08 ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 11 ರ ಪ್ರಕಾರ ಅಪರಾಧವಾಗಿದ್ದು ಕಲಂ 32 ಪ್ರಕಾರ ಶಿಕ್ಷಾರ್ಹವಾದ್ದರಿಂದ ಮೊಕದ್ದಮೆಯನ್ನು ದಾಖಲಿಸಿ, ಸಂಬಂಧಪಟ್ಟ ದಾಖಲಾತಿಗಳನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ವಾಹನದ ಮಾಲೀಕತ್ವದ ವಿವರವನ್ನು ಕೋರಿ, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರಿಗೆ ದಿನಾಂಕ : 14-11-07 ಮತ್ತು 17-01-08 ರಂದು ಪತ್ರ ವ್ಯವಹಾರ ನಡೆಸಲಾಗಿರುತ್ತದೆ. ಈ ಪ್ರಕರಣದಲ್ಲಿ ಜಪ್ತುಗೊಳಿಸಲಾದ 8.640 ಲೀ. ಮದ್ಯವನ್ನು ಕರ್ನಾಟಕ ಅಬಕಾರಿ ಕಾಯ್ದೆ ರೀತ್ಯಾ ದಿ: 14-11-07 ರಂದು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಲಾಗಿರುತ್ತದೆ. ನಂಜನಗೂಡು ವಲಯದ ಅಬಕಾರಿ ನಿರೀಕ್ಷಕರು ಸದರಿ ವಾಹನದ ಬಿ.ವಹಿಯ ಪ್ರತಿಯನ್ನು ಸಂಬಂಧಪಟ್ಟ ಸಾರಿಗೆ ಪ್ರಾಧಿಕಾರದಿಂದ ಪಡೆದು ತಮ್ಮ ಪತ್ರ ದಿನಾಂಕ :19-11-2008 ರಲ್ಲಿ ಸಲ್ಲಿಸಿರುತ್ತಾರೆ. ಬಿ ವಹಿಯಲ್ಲಿ ನಮೂದಿಸಿರುವಂತೆ ಡಾ. ಎ. ಸದಾನಂದ ಶೆಟ್ಟಿ ಬಿನ್ ಟಿ. ಗೋವಿಂದ ಶೆಟ್ಟಿ, ನಂ.79/1, 2ನೇ ಮೈನ್, ಜಯಲಕ್ಷ್ಮಿಪುರಂ, ಮೈಸೂರು ಇವರ ವಾಹನ ಮಾಲೀಕರರಾಗಿರುತ್ತಾರೆ. ಸದರಿ ಮಾಲೀಕರಿಗೆ ವಾಹನವನ್ನು ಸರ್ಕಾರಕ್ಕೆ ಏಕೆ ಮುಟ್ಟುಗೋಲು ಹಾಕಿಕೊಳ್ಳಬಾರದೆಂದು ಕರ್ನಾಟಕ ಅಬಕಾರಿ ಕಾಯ್ದೆ 1965 ರ 43(ಬಿ) ರ ಅಡಿಯಲ್ಲಿ ಕಾರಣ ಕೇಳಿ ನೋಟೀಸನ್ನು ನೋಂದಣಿ ಅಂಚೆ ಮೂಲಕ ಜಾರಿಗೊಳಿಸಲಾಗಿದ್ದು, ವಿಳಾಸದಲ್ಲಿ ಇಲ್ಲವೆಂಬ ಷರಾದೊಂದಿಗೆ ಅಂಚೆ ಇಲಾಖೆಯವರು ಪ್ರಾಧಿಕಾರಕ್ಕೆ ಹಿಂದಿರುಗಿಸಿರುತ್ತಾರೆ.

ಕಡತ ಪರಿಶೀಲಿಸಲಾಯಿತು. ಕೆಳಕಂಡ ದಾಖಲಾತಿಗಳು ಕಂಡುಬಂದಿರುತ್ತವೆ.

1. ಪ್ರಥಮ ಮಾಹಿತಿ ವರದಿ.
2. ಮಹಜರ್ ಕ್ರಮ.
3. ಜಡ್ತಿ ಪತ್ರ.
4. 457 – ಮಾಲು ಪಟ್ಟಿ.
5. ರಾಸಾಯನಿಕ ತಜ್ಞರ ವರದಿ.
6. ಮಹಜರ್ ಕ್ರಮ.

ಮೇಲ್ಕಂಡ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ದಿನಾಂಕ : 01-09-07ರಂದು, ನಂಜನಗೂಡು- ಟಿ.ನರಸೀಪುರ ಮುಖ್ಯ ರಸ್ತೆಯಲ್ಲಿ ಬರುವ ಆಲಂಬೂರು ಗ್ರಾಮದ ಬಸ್ ನಿಲ್ದಾಣದ ಬಳಿ ಹಿರೋಪುಕ್ ಮೊಪೆಡ್ ಸಂ: KA-09/ L-2748 ರಲ್ಲಿ ಅಕ್ರಮವಾಗಿ 8.640 ಲೀ. ಮದ್ಯವನ್ನು ಯಾವುದೇ ರಹದಾರಿಯಿಲ್ಲದೆ ಹೊಂದಿ, ಸಾಗಾಣಿಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ. ಈ ಸಂದರ್ಭದಲ್ಲಿ ಆರೋಪಿಯು ಪರಾರಿಯಾಗಿದ್ದು ಸದರಿ ಆರೋಪಿಯಾಗಲೀ ಈ ಪ್ರಾಧಿಕಾರದ ಮುಂದೆ ಹಾಜರಾಗಿ, ತಮ್ಮ ನಿಲುವು ಏನೆಂಬುದನ್ನು ತಿಳಿಸಿರುವುದಿಲ್ಲ. ಅಲ್ಲದೇ ಬಿ ವಹಿರನ್ವಯ ವಾಹನ ಮಾಲೀಕರಾದ ಡಾ. ಎ. ಸದಾನಂದ ಶೆಟ್ಟಿ ಬಿನ್ ಟಿ. ಗೋವಿಂದ ಶೆಟ್ಟಿ, ನಂ.79/1, 2ನೇ ಮೈನ್, ಜಯಲಕ್ಷ್ಮಿಪುರಂ, ಮೈಸೂರು ಇವರ ಒಡೆತನದಲ್ಲಿದ್ದು, ವಾಹನ ಬಿಡುಗಡೆಗಾಗಿ ಆರೋಪಿ / ಪ್ರತಿವಾದಿಗಳ ಕಡೆಯಿಂದ ಯಾವುದೇ ಪ್ರಯತ್ನ ನಡೆದಿರುವುದಿಲ್ಲ ಹಾಗೂ ಅಬಕಾರಿ ಕಾಯ್ದೆ ಕಲಂ 43ರ ಅಡಿಯಲ್ಲಿ ಪ್ರಸ್ತಾವನೆ ಮತ್ತು 43 (ಬಿ) (1) (2) ಮಾಲೀಕರ ಮೇಲೆ ಇರತಕ್ಕಂತಹ ಜವಾಬ್ದಾರಿಯನ್ನು ಅವರು ಪ್ರಾಧಿಕಾರದ ಮುಂದೆ ಸ್ಪಷ್ಟವಾಗಿ ನಿರೂಪಿಸಿರುವುದಿಲ್ಲ. ಜಪ್ತು ಪಡಿಸಲಾದ ಮಾದಕ ದ್ರವ್ಯಗಳಲ್ಲಿ ಆಲ್ಕೋಹಾಲ್ ಅಂಶದ ಪ್ರಮಾಣ ಪತ್ತೆಯಾಗಿರುವುದು ರಾಸಾಯನಿಕ ತಜ್ಞರ ವರದಿಯಿಂದ ದೃಢಪಟ್ಟಿರುತ್ತದೆ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು 16 ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ ಈ ಬಗ್ಗೆ ತಾನು ವಿಚಾರಣೆಯನ್ನು ನಡೆಸುತ್ತೇನೆಂದಾಗಲೀ ಯಾರೂ ಇಂದಿನವರೆಗೂ ಖುದ್ದಾಗಿ ಆಗಲಿ ಅಥವಾ ತನ್ನ ವಕೀಲರ ಮೂಲಕವಾಗಲೀ ತನ್ನ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನದ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನದ ಮಾಲೀಕರಿಗೆ ಅಥವಾ ಏಜೆಂಟರ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮೀಲಾಗದೇ ಹಾಗೂ ಅವರೆಲ್ಲರಿಗೂ ಅರಿವಿಲ್ಲದಂತೆ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿರುವುದಿಲ್ಲವಾದುದರಿಂದ ಸದರಿ ವಾಹನವನ್ನು ಇನ್ನೂ ಹಾಗೆಯೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/143/07-08, ದಿನಾಂಕ:26ನೇ ಫೆಬ್ರವರಿ, 2009

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಬಿ) ರ ಪ್ರಕಾರ ಅನುಸರಿಸಬೇಕಾದ ಕ್ರಮಗಳನ್ನೆಲ್ಲಾ ಅನುಸರಿಸಿದ ನಂತರ ಕಲಂ 43(ಎ)(1)ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಅಬಕಾರಿ ನಿರೀಕ್ಷಕರು, ನಂಜನಗೂಡು ವಲಯ ಇವರ ಪ್ರಮಾವ ಸಂಖ್ಯೆ:02/07-08, ದಿನಾಂಕ:01-09-07ರಂದು ವಶಪಡಿಸಿಕೊಂಡ ಹಿರೋಪುಕ್ ಮೊಪೆಡ್ ಸಂ: KA-09/ L-2748 ವಾಹನವನ್ನು (8.640 ಲೀ. ನಕಲಿ ಮದ್ಯವನ್ನು ಈಗಾಗಲೇ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿರುತ್ತದೆ) ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಲಾಗಿದೆ.

(ಈ ಆದೇಶವನ್ನು ಇಂದು ಅಂದರೆ 2009ನೇ ಇಸವಿಯ ಫೆಬ್ರವರಿ ತಿಂಗಳ 26ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ಪ್ರಾಧಿಕಾರದ ಮೊಹರಿನೊಂದಿಗೆ ಹೊರಡಿಸಲಾಗಿದೆ.)

ಈ ಆದೇಶವು ಇಂದಿನಿಂದ 30 ದಿನಗಳ ನಂತರ ಜಾರಿಗೆ ಬರುವುದು.

ಡಾ॥ ವೈ. ಮಂಜುನಾಥ್

ಪಿ.ಆರ್.326

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ಹಾಗೂ
ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಡೆಪ್ಯುಟಿ ಕಮಿಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ : ಡಿಟಿಸಿಆರ್ : 117/07-08

ಉಪಸ್ಥಿತರು: ಡಾ॥ ವೈ. ಮಂಜುನಾಥ್

ಡೆಪ್ಯುಟಿ ಕಮಿಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಫಿರ್ಯಾದುದಾರರು

ಪಿ. ಪ್ರೇಮಾ,
ಅಬಕಾರಿ ಉಪ ನಿರೀಕ್ಷಕರು-2,
(ಜಾರಿ ಮತ್ತು ತನಿಖೆ), ನಂಜನಗೂಡು ವಲಯ.

ಪ್ರತಿವಾದಿ/ ಆರೋಪಿ

1) ರವಿ ಬಿನ್ ಲೇ ಶಿವಣ್ಣ
ಹಿರಿಕಾಟಿ ಗ್ರಾಮ, ಗುಂಡ್ಲುಪೇಟೆ ತಾ:
2) ಚಂದ್ರು ಬಿನ್ ಮರಿಸ್ವಾಮಿ
ಬಾಳ್ಳಾರು ಗ್ರಾಮ, ನಂ.ಗೂಡು ತಾ:

ಪ್ರಕರಣದ ಮುಖ್ಯಾಂಶಗಳು :

ದಿನಾಂಕ : 25-08-07ರಂದು ಸಂಜೆ 6-30 ಗಂಟೆಯ ಸಮಯದಲ್ಲಿ ಅಬಕಾರಿ ಉಪ ನಿರೀಕ್ಷಕರು-2, (ಜಾರಿ ಮತ್ತು ತನಿಖೆ), ನಂಜನಗೂಡು ವಲಯ ಇವರು ನಂಜನಗೂಡು ತಾಲ್ಲೂಕು, ನಂಜನಗೂಡು-ಗುಂಡ್ಲುಪೇಟೆಗೆ ಮುಖ್ಯ ರಸ್ತೆ, ಸುರುಚಿ ಉಪ್ಪಿನಕಾಯಿ ಫ್ಯಾಕ್ಟರಿ ಮುಂಭಾಗದಲ್ಲಿ ಅಕ್ರಮವಾಗಿ 17.280 ಲೀ. ಮದ್ಯವನ್ನು KL-11/E-9184 ನೋಂದಣಿ ಸಂಖ್ಯೆಯ ಆಟೋ ರಿಕ್ಷಾ ವಾಹನದಲ್ಲಿ ಹೊಂದಿ ಸಾಗಾಣಿಕೆ ಮಾಡುತ್ತಿದ್ದ ಅಪರಾಧಕ್ಕಾರಿ ವಾಹನ ಮತ್ತು ಮದ್ಯವನ್ನು ಜಪ್ತುಗೊಳಿಸಿ, ಪ್ರ.ಮಾ.ವ ಸಂಖ್ಯೆ 03/07-08ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 13ರ ಪ್ರಕಾರ ಅಪರಾಧವಾಗಿದ್ದು, ಕಲಂ 32, 38(A) ಪ್ರಕಾರ ಶಿಕ್ಷಾರ್ಹವಾದ್ದರಿಂದ ಪ್ರಕರಣ ದಾಖಲಿಸಿ, ಸಂಬಂಧಪಟ್ಟ ದಾಖಲಾತಿಗಳನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ಈ ಪ್ರಕರಣದ ಆರೋಪಿಗಳಾದ ರವಿ ಮತ್ತು ಚಂದ್ರು ಇವರಿಗೆ ಈ ಪ್ರಾಧಿಕಾರದಿಂದ ದಿನಾಂಕ:18-9-07 ರಂದು ಕಲಂ 43(ಬಿ)ರ ಅಡಿಯಲ್ಲಿ ಕಾರಣ ಕೇಳುವ ನೋಟೀಸನ್ನು ನೋಂದಣಿ ಅಂಚೆ ಮೂಲಕ ಜಾರಿಗೊಳಿಸಲಾಗಿದ್ದು, ಸದರಿ ನೋಟೀಸ್ ಜಾರಿಯಾಗಿ, ಸ್ವೀಕೃತಿಯು ಈ ಪ್ರಾಧಿಕಾರಕ್ಕೆ ದಿನಾಂಕ:22-09-07 ಮತ್ತು 25-09-07ರಂದು ಸ್ವೀಕೃತವಾಗಿರುತ್ತದೆ. ಹಾಗೆಯೇ ವಾಹನದ ಮಾಲೀಕತ್ವದ ವಿವರವನ್ನು ಕೋರಿ, ಪ್ರಾದೇಶಿಕ ಸಾರಿಗೆ ಆಯುಕ್ತರು, ತ್ರಿವೆಂಡ್ರಮ್ ಜಿಲ್ಲೆ, ಕೇರಳಾ ರಾಜ್ಯ ಇವರಿಗೆ ದಿನಾಂಕ:18-09-07 ರಂದು ಪತ್ರ ವ್ಯವಹಾರ ನಡೆಸಲಾಗಿರುತ್ತದೆ. ನಂಜನಗೂಡು ತಾಲ್ಲೂಕಿನ ಜಾರಿ ಮತ್ತು ತನಿಖೆಯ ಅಬಕಾರಿ ಉಪ ನಿರೀಕ್ಷಕರು-2 ತಮ್ಮ ಪತ್ರ ದಿನಾಂಕ:15-11-07 ರಲ್ಲಿ ಜಪ್ತುಗೊಳಿಸಲಾದ ವಾಹನ ಮತ್ತು ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿರುತ್ತಾರೆ. ಅಂತೆಯೇ ಈ ಪ್ರಕರಣದಲ್ಲಿ ಜಪ್ತುಗೊಳಿಸಲಾದ 17.280 ಲೀ. ಮದ್ಯವನ್ನು (ಮಾದರಿ ಹೊರತುಪಡಿಸಿ) ದಿನಾಂಕ :19-11-07 ರಂದು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ಹೊರಡಿಸಲಾಗಿದೆ.

ಕೋಜಿಕ್ಕೋಡ್ ಜಿಲ್ಲೆಯ ಸಾರಿಗೆ ಪ್ರಾಧಿಕಾರವು ವಾಹನದ ಮಾಲಿಕತ್ವವುಳ್ಳ ಬಿ ವಹಿಯ ಪ್ರತಿಯನ್ನು ಈ ಪ್ರಾಧಿಕಾರಕ್ಕೆ ಕಳುಹಿಸಿರುತ್ತಾರೆ. ಅದರಂತೆ ವಾಹನ ಮಾಲೀಕರಾದ ಜನೇಶ್ ಬಿನ್ ಸದೀಶನ್ ಇವರಿಗೆ ವಾಹನ ಮತ್ತು ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಾರದೆಂದು ಈ ಪ್ರಾಧಿಕಾರದಿಂದ ದಿನಾಂಕ:07-02-08ರಂದು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 43(ಬಿ)ರಡಿಯಲ್ಲಿ ಕಾರಣ ಕೇಳುವ ನೋಟೀಸನ್ನು ನೀಡಲಾಗಿದ್ದು, ಸದರಿ ನೋಟಿಸ್ ಜಾರಿಯಾಗಿ, ಸ್ವೀಕೃತಿಯು ದಿನಾಂಕ:15-02-08 ರಂದು ಅಂಚೆ ಇಲಾಖೆಯವರು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ಸದರಿ ನೋಟೀಸಿಗೆ ಪ್ರತಿಕ್ರಿಯಿಸಿ, ಯಾವುದೇ ಅಪರಾಧದಲ್ಲಿ ತೊಡಗಿರುವುದಿಲ್ಲವೆಂದು ಆರೋಪವನ್ನು ಅಲ್ಲಗೆಳೆದು, ಮುಂದಿನ ನಡವಳಿಯನ್ನು ಕೈಬಿಡಬೇಕೆಂದು ತಿಳಿಸಿರುತ್ತಾರೆ. ಪ್ರಕರಣದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ದಿನಾಂಕ: 25-08-07 ರಂದು ನಂಜನಗೂಡು ತಾಲ್ಲೂಕು, ನಂಜನಗೂಡು-ಗುಂಡ್ಲುಪೇಟೆ ಮುಖ್ಯ ರಸ್ತೆ, ಸುರುಚಿ ಉಪ್ಪಿನಕಾಯಿ ಫ್ಯಾಕ್ಟರಿ ಮುಂಭಾಗದಲ್ಲಿ ಅಕ್ರಮವಾಗಿ 17.280 ಲೀ. ಮದ್ಯವನ್ನು KL-11/E-9184 ನೋಂದಣಿ ಸಂಖ್ಯೆಯ ಆಟೋ ರಿಕ್ಷಾ ವಾಹನದಲ್ಲಿ ಹೊಂದಿ ಸಾಗಾಣಿಕೆ ಮಾಡುತ್ತಿದ್ದದು ಕಂಡುಬಂದಿರುತ್ತದೆ. ಈ ಸಂದರ್ಭದಲ್ಲಿ ಆರೋಪಿ (1) ರವಿ ಮತ್ತು (2) ಚಂದ್ರು ಇವರುಗಳನ್ನು ದಸ್ತಗಿರಿ ಮಾಡಲಾಗಿರುತ್ತದೆ. ಸದರಿ ಆರೋಪಿಗಳು ಈ ಪ್ರಾಧಿಕಾರದ ಮುಂದೆ ಹಾಜರಾಗಿ, ತಮ್ಮ ನಿಲುವು ಏನೆಂಬುದನ್ನು ತಿಳಿಸಿರುವುದಿಲ್ಲ. ಅಲ್ಲದೇ ಬಿ ವಹಿರನ್ವಯ ವಾಹನ ಮಾಲೀಕರಾದ ಜನೇಶ್ ಬಿನ್ ಸದೀಶನ್, ಕೋಜಿಕ್ಕೋಡ್ ಜಿಲ್ಲೆ, ಕೇರಳಾ ರಾಜ್ಯ ಇವರ ಒಡೆತನದಲ್ಲಿದ್ದು, ವಾಹನ ಬಿಡುಗಡೆಗಾಗಿ ಆರೋಪಿ/ಪ್ರತಿವಾದಿಗಳ ಕಡೆಯಿಂದ ಯಾವುದೇ ಪ್ರಯತ್ನ ನಡೆದಿರುವುದಿಲ್ಲ ಹಾಗೂ ಅಬಕಾರಿ ಕಾಯ್ದೆ ಕಲಂ 43ರ ಅಡಿಯಲ್ಲಿ ಪ್ರಸ್ತಾವನೆ ಮತ್ತು 43(ಬಿ)(1)(2) ಮಾಲೀಕರ ಮೇಲೆ ಇರತಕ್ಕಂತಹ ಜವಾಬ್ದಾರಿಯನ್ನು ಅವರು ಪ್ರಾಧಿಕಾರದ ಮುಂದೆ ಸ್ಪಷ್ಟವಾಗಿ ನಿರೂಪಿಸಿರುವುದಿಲ್ಲ. ಹಾಗೂ ಜಪ್ತು ಪಡಿಸಲಾದ ಮಾದಕ ದ್ರವ್ಯಗಳಲ್ಲಿ ಆಲ್ಕೋಹಾಲ್ ಅಂಶದ ಪ್ರಮಾಣ ಪತ್ತೆಯಾಗಿರುವುದು ರಾಸಾಯನಿಕ ತಜ್ಞರ ವರದಿಯಿಂದ ದೃಢಪಟ್ಟಿರುತ್ತದೆ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು 17 ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ ಈ ಬಗ್ಗೆ ತಾನು ವಿಚಾರಣೆಯನ್ನು ನಡೆಸುತ್ತೇನೆಂದಾಗಲೀ ಯಾರೂ ಇಂದಿನವರೆಗೂ ಖುದ್ದಾಗಿ ಆಗಲಿ ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನದ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನದ ಮಾಲೀಕರಿಗೆ ಅಥವಾ ಏಜೆಂಟರ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮೀಲಾಗದೇ ಹಾಗೂ ಅವರೆಲ್ಲರಿಗೂ ಅರಿವಿಲ್ಲದಂತೆ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿರುವುದಿಲ್ಲವಾದುದರಿಂದ ಸದರಿ ವಾಹನವನ್ನು ಇನ್ನೂ ಹಾಗೆಯೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/117/07-08, ದಿನಾಂಕ:26ನೇ ಫೆಬ್ರವರಿ, 2009

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಬಿ) ರ ಪ್ರಕಾರ ಅನುಸರಿಸಬೇಕಾದ ಕ್ರಮಗಳನ್ನೆಲ್ಲಾ ಅನುಸರಿಸಿದ ನಂತರ ಕಲಂ 43(ಎ)(2)ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಅಬಕಾರಿ ಉಪ ನಿರೀಕ್ಷಕರು-2, (ಜಾರಿ ಮತ್ತು ತನಿಖೆ),

ನಂಜನಗೂಡು ತಾಲ್ಲೂಕು ಇವರ ಪ್ರಮಾವ ಸಂಖ್ಯೆ : 03/07-08, ದಿನಾಂಕ : 25-08-07ರಂದು ವಶಪಡಿಸಿಕೊಂಡ KL-11/E-0184 ನೋಂದಣಿ ಸಂಖ್ಯೆಯ ಆಟೋ ರಿಕ್ಷಾ ವಾಹನವನ್ನು (17.280 ಲೀ. ಮದ್ಯವನ್ನು ಈಗಾಗಲೇ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿರುತ್ತದೆ) ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಲಾಗಿದೆ.

(ಈ ಆದೇಶವನ್ನು ಇಂದು ಅಂದರೆ 2009ನೇ ಇಸವಿಯ ಫೆಬ್ರವರಿ ತಿಂಗಳ 26ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಪ್ರಾಧಿಕಾರದ ಮೊಹರಿನೊಂದಿಗೆ ಹೊರಡಿಸಲಾಗಿದೆ.)

ಈ ಆದೇಶವು ಇಂದಿನಿಂದ 30 ದಿನಗಳ ನಂತರ ಜಾರಿಗೆ ಬರುವುದು.

ಡಾ॥ ವೈ. ಮಂಜುನಾಥ್

ಪಿ.ಆರ್.327

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ಹಾಗೂ
ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಡೆಪ್ಯುಟಿ ಕಮಿಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ : ಡಿಟಿಸಿಆರ್ : 106/07-08

ಉಪಸ್ಥಿತರು: ಡಾ॥ ವೈ. ಮಂಜುನಾಥ್

ಡೆಪ್ಯುಟಿ ಕಮಿಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಫಿರ್ಯಾದುದಾರರು

ಪಿ. ರಮೇಶ್,
ಅಬಕಾರಿ ಉಪ ನಿರೀಕ್ಷಕರು-2, (ಜಾರಿ ಮತ್ತು ತನಿಖೆ),
ಟಿ.ನರಸೀಪುರ.

ಪ್ರತಿವಾದಿ/ ಆರೋಪಿ

1) ರಾಘವ ಬಿನ್ ರಂಗಸ್ವಾಮಿ,
ಸಂ. 393, ಅತ್ತಹಳ್ಳಿ ಗ್ರಾಮ, ಬನ್ನೂರು ಹೋಬಳಿ,
ಟಿ.ನರಸೀಪುರ ತಾ:

2) ರಂಗಸ್ವಾಮಿ ಬಿನ್ ಹೊನ್ನಗಿರಿಗೌಡ,
ಅತ್ತಹಳ್ಳಿ, ಬನ್ನೂರು ಹೋಬಳಿ, ಟಿ.ನರಸೀಪುರ ತಾ:

3) ಗಿರೀಶ್ ಬಿನ್ ಸಿದ್ದೇಗೌಡ,
ಅತ್ತಹಳ್ಳಿ, ಬನ್ನೂರು ಹೋಬಳಿ, ಟಿ.ನರಸೀಪುರ ತಾ:

4) ರಾಜು ಬಿನ್ ಚಿಕ್ಕೇಗೌಡ,
ಅತ್ತಹಳ್ಳಿ, ಬನ್ನೂರು ಹೋಬಳಿ, ಟಿ.ನರಸೀಪುರ ತಾ:

ಪ್ರಕರಣದ ಮುಖ್ಯಾಂಶಗಳು:

ದಿನಾಂಕ : 14-08-07ರಂದು ಬೆಳಿಗ್ಗೆ 7-00 ಗಂಟೆಯ ಸಮಯದಲ್ಲಿ ಅಬಕಾರಿ ಉಪ ನಿರೀಕ್ಷಕರು-2, (ಜಾರಿ ಮತ್ತು ತನಿಖೆ), ಟಿ.ನರಸೀಪುರ ಇವರು ಟಿ.ನರಸೀಪುರ ತಾಲ್ಲೂಕು, ಬನ್ನೂರು ಹೋಬಳಿ, ಅತ್ತಳ್ಳಿ ಗ್ರಾಮ ಮನೆ ನಂ. 393 ಮತ್ತು 393/1 ರಲ್ಲಿ ಅಕ್ರಮವಾಗಿ 45 ಲೀ. ನಕಲಿ ಮದ್ಯ, 180 ಮಿ. ಯ 150 ಖಾಲಿ ಸೀಸೆಗಳು, 10 ರೋಲ್ ಭದ್ರತಾ ಚೀಟಿಗಳು, 1200 ಒರಿಜಿನಲ್ ಛಾಯ್ಸ್ ಬಾಟಲಿ ಮುಚ್ಚಳಗಳು, ಒರಿಜಿನಲ್ ಛಾಯ್ಸ್ ಲೇಬಲ್‌ಗಳು, 10 ಲೀ. (ಬ್ಲೆಂಡ್) ಶೋಧಿಕೃತ ಮದ್ಯ ಮತ್ತು ಇವುಗಳ ಸಾಗಾಣಿಕೆಗಾಗಿ KA-04/K-8144 ನೋಂದಣಿ ಸಂಖ್ಯೆಯ ಬಜಾಜ್ ಸ್ಕೂಟರ್ ವಾಹನವನ್ನು ಉಪಯೋಗಿಸುತ್ತಿದ್ದ ಅಪರಾಧಕ್ಕಾಗಿ ವಾಹನ, ನಕಲಿ ಮದ್ಯ ಮತ್ತು ನಕಲಿ ಮದ್ಯ ತಯಾರಿಕೆಗೆ ಅಗತ್ಯವಾದ ವಸ್ತುಗಳನ್ನು ವಶಪಡಿಸಿಕೊಂಡು, ಪ್ರ.ಮಾ.ವ ಸಂ: 02/07-08 ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 14ರ ಪ್ರಕಾರ ಅಪರಾಧವಾಗಿದ್ದು, ಕಲಂ 32ರ ಪ್ರಕಾರ ಶಿಕ್ಷಾರ್ಹವಾದ್ದರಿಂದ ಮೊಕದ್ದಮೆಯನ್ನು ದಾಖಲಿಸಿ, ಒಂದನೇ ಆರೋಪಿಯನ್ನು ದಸ್ತಗಿರಿ ಮಾಡಿ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಾಗಿ ಸಂಬಂಧಪಟ್ಟ ದಾಖಲಾತಿಗಳನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ಪ್ರಕರಣದ ಆರೋಪಿಗಳಾದ ಆರ್.ರಾಘವ, ರಂಗಸ್ವಾಮಿ, ಗಿರೀಶ್, ಪುಟ್ಟರಾಜು ಇವರಿಗೆ ಈ ಪ್ರಾಧಿಕಾರದಿಂದ ದಿ:18-09-07 ರಂದು ವಾಹನ ಮತ್ತು ಮಾದಕ ದ್ರವ್ಯಗಳನ್ನು ಸರ್ಕಾರಕ್ಕೆ ಏಕೆ ಮುಟ್ಟುಗೋಲು ಹಾಕಿಕೊಳ್ಳಬಾರದೆಂದು ಕರ್ನಾಟಕ ಅಬಕಾರಿ ಕಾಯಿದೆ ಕಲಂ 43(ಬಿ)ರ ಅಡಿಯಲ್ಲಿ ಕಾರಣ ಕೇಳುವ ನೋಟೀಸನ್ನು ನೋಂದಣಿ ಅಂಚೆ ಮೂಲಕ ಜಾರಿಗೊಳಿಸಲಾಗಿದ್ದು, ಅಂಚೆ ಇಲಾಖೆಯವರು ವಿಳಾಸದಲ್ಲಿ ಇಲ್ಲವೆಂಬ ಷರಾದೊಂದಿಗೆ ಸದರಿ ನೋಟೀಸ್‌ಗಳನ್ನು ಈ ಪ್ರಾಧಿಕಾರಕ್ಕೆ ಹಿಂತಿರುಗಿಸಿರುತ್ತಾರೆ. ಟಿ.ನರಸೀಪುರ (ಜಾ ಮತ್ತು ತ) ಅಬಕಾರಿ ಉಪ ನಿರೀಕ್ಷಕರು ಸದರಿ ವಾಹನದ ಬಿ ವಹಿಯ ಪ್ರತಿಯನ್ನು ಸಂಬಂಧಪಟ್ಟ ಸಾರಿಗೆ ಪ್ರಾಧಿಕಾರದಿಂದ ಪಡೆದು ಸಲ್ಲಿಸಿರುತ್ತಾರೆ. ಬಿ ವಹಿಯನ್ವಯ ಎಸ್.ಸಂತೋಷ್ ಬಿನ್ ನಾಯರ್, ಜಿ.ಎಸ್.ನಂ.119, 5ನೇ ಮೈನ್, ಸುತ್ತಿಕೆರೆ ಬಡಾವಣೆ, ಬೆಂಗಳೂರು ಇವರ ಒಡೆತನದಲ್ಲಿದ್ದು, ವಾಹನ ಮತ್ತು ಮದ್ಯವನ್ನು ಸರ್ಕಾರಕ್ಕೆ ಏಕೆ ಮುಟ್ಟುಗೋಲು ಹಾಕಿಕೊಳ್ಳಬಾರದೆಂದು ಈ ಪ್ರಾಧಿಕಾರದಿಂದ ದಿ:29-01-08ರಂದು ಕಲಂ 43(ಬಿ)ರ ಅಡಿಯಲ್ಲಿ ಕಾರಣ ಕೇಳಿ ನೋಟೀಸನ್ನು

ನೋಂದಣಿ ಅಂಚೆಯ ಮೂಲಕ ಜಾರಿಗೊಳಿಸಲಾಗಿದ್ದು ಸದರಿ ನೋಟೀಸ್ ಸಹ ವಿಳಾಸದಲ್ಲಿ ಇಲ್ಲವೆಂಬ ಷರಾದೊಂದಿಗೆ ಅಂಚೆ ಇಲಾಖೆಯವರು ಈ ಪ್ರಾಧಿಕಾರಕ್ಕೆ ಹಿಂತಿರುಗಿಸಿರುತ್ತಾರೆ.

ಕಡತ ಪರಿಶೀಲಿಸಲಾಯಿತು. ಕೆಳಕಂಡ ದಾಖಲಾತಿಗಳು ಕಂಡುಬಂದಿರುತ್ತವೆ.

1. ಮಹಜರ್ ಕ್ರಮ
2. ಜಪ್ತಿ ಪತ್ರ
3. ಮಾದರಿ ಮೊಹರಿನ ನಕಲು
4. ಪ್ರಥಮ ಮಾಹಿತಿ ವರದಿ.
5. ಮಾಲು ಪಟ್ಟಿ
6. ರಾಸಾಯನಿಕ ತಜ್ಞರ ವರದಿ.

ಮೇಲ್ಕಂಡ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ದಿನಾಂಕ:14-08-07ರಂದು ಟಿ.ನರಸೀಪುರ ತಾಲ್ಲೂಕು, ಬನ್ನೂರು ಹೋಬಳಿ, ಅತ್ತಳ್ಳಿ ಗ್ರಾಮ ಮನೆ ನಂ. 393 ಮತ್ತು 393/1 ರಲ್ಲಿ ಅಕ್ರಮವಾಗಿ 45 ಲೀ. ನಕಲಿ ಮದ್ಯ, 180 ಮಿ. ಯ 150 ಖಾಲಿ ಸೀಸೆಗಳು, 10 ರೋಲ್ ಭದ್ರತಾ ಚೀಟಿಗಳು, 1200 ಒರಿಜಿನಲ್ ಛಾಯ್ಸ್ ಬಾಟಲಿ ಮುಚ್ಚಳಗಳು, 1600 ಒರಿಜಿನಲ್ ಛಾಯ್ಸ್ ಲೇಬಲ್‌ಗಳು, 10 ಲೀ. ಬ್ಲೆಂಡ್ ಮದ್ಯ ಇವುಗಳ ಸಾಗಾಣಿಕೆಗಾಗಿ KA-04/K-8144 ನೋಂದಣಿ ಸಂಖ್ಯೆಯ ಬಜಾಜ್ ಸ್ಕೂಟರ್ ವಾಹನವನ್ನು ಸಾಗಾಣಿಕೆಯಲ್ಲಿ ಉಪಯೋಗಿಸಿರುವುದು ಕಂಡುಬಂದಿರುತ್ತದೆ. ಈ ಸಂದರ್ಭದಲ್ಲಿ ಆರೋಪಿ (1) ಆರ್.ರಾಘವ ಬಿನ್ ರಂಗಸ್ವಾಮಿ ಇವರನ್ನು ದಸ್ತಗಿರಿ ಮಾಡಲಾಗಿರುತ್ತದೆ. ಸದರಿ ಆರೋಪಿಯಾಗಲೀ ಈ ಪ್ರಾಧಿಕಾರದ ಮುಂದೆ ಹಾಜರಾಗಿ, ತಮ್ಮ ನಿಲುವು ಏನೆಂಬುದನ್ನು ಇದುವರೆವಿಗೂ ತಿಳಿಸಿರುವುದಿಲ್ಲ. ಅಲ್ಲದೇ "ಬಿ" ವಹಿರನ್ವಯ ವಾಹನ ಮಾಲೀಕರಾದ ಎಸ್. ಸಂತೋಷ್ ಬಿನ್ ನಾಯರ್, ಜಿ.ಎಸ್.ನಂ.119, 5ನೇ ಮೈನ್, ಮತ್ತಿಕೆರೆ ಬಡಾವಣೆ, ಬೆಂಗಳೂರು ಇವರ ಒಡೆತನದಲ್ಲಿದ್ದು ವಾಹನ ಬಿಡುಗಡೆಗಾಗಿ ಆರೋಪಿ/ಪ್ರತಿವಾದಿಗಳ ಕಡೆಯಿಂದ ಯಾವುದೇ ಪ್ರಯತ್ನ ನಡೆದಿರುವುದಿಲ್ಲ ಹಾಗೂ ಅಬಕಾರಿ ಕಾಯ್ದೆ ಕಲಂ 43ರ ಅಡಿಯಲ್ಲಿ ಪ್ರಸ್ತಾವನೆ ಮತ್ತು 43 (ಬಿ) (1) (2) ಮಾಲೀಕರ ಮೇಲೆ ಇರತಕ್ಕಂತಹ ಜವಾಬ್ದಾರಿಯನ್ನು ಅವರು ಪ್ರಾಧಿಕಾರದ ಮುಂದೆ ಸ್ಪಷ್ಟವಾಗಿ ನಿರೂಪಿಸಿರುವುದಿಲ್ಲ. ಜಪ್ತು ಪಡಿಸಲಾದ ಮಾದಕ ದ್ರವ್ಯಗಳಲ್ಲಿ ಆಲ್ಕೋಹಾಲ್ ಅಂಶದ ಪ್ರಮಾಣ ಪತ್ತೆಯಾಗಿರುವುದು ರಾಸಾಯನಿಕ ತಜ್ಞರ ವರದಿಯಿಂದ ದೃಢಪಟ್ಟಿರುತ್ತದೆ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು 18 ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ ಈ ಬಗ್ಗೆ ತಾನು ವಿಚಾರಣೆಯನ್ನು ನಡೆಸುತ್ತೇನೆಂದಾಗಲೀ ಯಾರೂ ಇಂದಿನವರೆಗೂ ಖುದ್ದಾಗಿ ಆಗಲಿ ಅಥವಾ ತನ್ನ ವಕೀಲರ ಮೂಲಕವಾಗಲೀ ತನ್ನ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನದ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನದ ಮಾಲೀಕರಿಗೆ ಅಥವಾ ಏಜೆಂಟರ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮೀಲಾಗದೇ ಹಾಗೂ ಅವರೆಲ್ಲರಿಗೂ ಅರಿವಿಲ್ಲದಂತೆ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿರುವುದಿಲ್ಲವಾದುದರಿಂದ ಸದರಿ ವಾಹನವನ್ನು ಇನ್ನೂ ಹಾಗೆಯೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಸಿಆರ್/106/07–08, ದಿನಾಂಕ:26ನೇ ಫೆಬ್ರವರಿ, 2009

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಬಿ) ರ ಪ್ರಕಾರ ಅನುಸರಿಸಬೇಕಾದ ಕ್ರಮಗಳನ್ನೆಲ್ಲಾ ಅನುಸರಿಸಿದ ನಂತರ ಕಲಂ 43(ಎ)(2)ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಅಬಕಾರಿ ಉಪ ನಿರೀಕ್ಷಕರು–2, (ಜಾರಿ ಮತ್ತು ತನಿಖೆ), ಟಿ.ನರಸೀಪುರ ಇವರ ಪ್ರಮಾವ ಸಂಖ್ಯೆ :02/07-08, ದಿನಾಂಕ:14-08-07ರಂದು ವಶಪಡಿಸಿಕೊಂಡ KA-04/K-8144 ನೋಂದಣಿ ಸಂಖ್ಯೆಯ ಬಜಾಜ್ ಸ್ಕೂಟರ್ ವಾಹನವನ್ನು, 45 ಲೀ., 10 ಲೀ. ಬ್ಲೆಂಡ್ ಮದ್ಯ (ಮಾದರಿಯನ್ನು ಹೊರತು ಪಡಿಸಿ) ಮತ್ತು ಇತರೆ ನಕಲಿ ಮದ್ಯ ತಯಾರಿಕಾ ವಸ್ತುಗಳನ್ನು, ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಲಾಗಿದೆ.

(ಈ ಆದೇಶವನ್ನು ಇಂದು ಅಂದರೆ 2009ನೇ ಇಸವಿಯ ಫೆಬ್ರವರಿ ತಿಂಗಳ 26ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ಪ್ರಾಧಿಕಾರದ ಮೊಹರಿನೊಂದಿಗೆ ಹೊರಡಿಸಲಾಗಿದೆ.)

ಈ ಆದೇಶವು ಇಂದಿನಿಂದ 30 ದಿನಗಳ ನಂತರ ಜಾರಿಗೆ ಬರುವುದು.

ಪಿ.ಆರ್.328

ಡಾ॥ ವೈ. ಮಂಜುನಾಥ್
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ಹಾಗೂ
ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಡೆಪ್ಯುಟಿ ಕಮಿಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್/127/08-09, ದಿನಾಂಕ:28ನೇ ಏಪ್ರಿಲ್, 2009

ಉಪಸ್ಥಿತರು: ಎ.ಎಸ್.ವಿಶ್ವರೂಪ

ಡೆಪ್ಯುಟಿ ಕಮಿಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಫಿರ್ಯಾದುದಾರರು	**ಪ್ರತಿವಾದಿ/ ಆರೋಪಿ**
ಅಬಕಾರಿ ಉಪ ನಿರೀಕ್ಷಕರು, ಹುಣಸೂರು ವಲಯ, ಹುಣಸೂರು.	ಚಂದ್ರಶೇಖರ್ ಬಿನ್ ಶಿವಣ್ಣೇಗೌಡ,

ದಿನಾಂಕ :12-09-2008ರಂದು ರಾತ್ರಿ 10-15 ಗಂಟೆಯ ಸಮಯದಲ್ಲಿ ಹುಣಸೂರು ವಲಯದ ಅಬಕಾರಿ ನಿರೀಕ್ಷಕರು ಇವರು ಹುಣಸೂರು ತಾಲ್ಲೂಕು, ಬಿಳಿಕೆರೆ ಹೋಬಳಿ, ಹುಂಡಿಮಾಳ ಗ್ರಾಮದ ಬಿಲ್ಡರ್ಸ್ ಬಡಾವಣೆ, ಮನೆ ನಂ.73, ಚಂದ್ರಶೇಖರ್ ಬಿನ್ ಶಿವಣ್ಣೇಗೌಡ ಇವರಿಗೆ ಸೇರಿದ ವಾಸದ ಮನೆಯಲ್ಲಿ ಅಕ್ರಮವಾಗಿ 40 ಲೀ. ಸಂಸ್ಕರಿಸಿದ ಮದ್ಯಸಾರ ಹಾಗೂ 0.720 ಲೀ. ಒರಿಜಿನಲ್ ಡಿಲಕ್ಸ್ ವಿಸ್ಕಿ ಹೆಸರಿನ ನಕಲಿ ಮದ್ಯವನ್ನು ಬಜಾಜ್ ಸಿಟಿ-100 ಸಂಖ್ಯೆ : KA-45/E-5063 ವಾಹನದಲ್ಲಿ ಸದರಿ ಮಾದಕ ದ್ರವ್ಯಗಳನ್ನು ಸಿದ್ದಮಾಡುತ್ತಿದ್ದ ಅಪರಾಧಕ್ಕಾಗಿ ವಾಹನ ಮತ್ತು ಮಾದಕ ದ್ರವ್ಯಗಳನ್ನು ವಶಪಡಿಸಿಕೊಂಡು, ಪ್ರ.ಮಾ.ವ ಸಂ. 03/08-09 ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 13(1), (A)(F) ರ ರೀತ್ಯಾ ಅಪರಾಧವಾಗಿದ್ದು, ಕಲಂ 32, 38(A)ರ ಪ್ರಕಾರ ಶಿಕ್ಷಾರ್ಹವಾದ್ದರಿಂದ ಆರೋಪಿ ಚಂದ್ರಶೇಖರ್ ಬಿನ್ ಶಿವಣ್ಣೇಗೌಡ ಇವರು ಪರಾರಿಯಾಗಿರುವುದಾಗಿ ಮೊಕದ್ದಮೆಯನ್ನು ದಾಖಲಿಸಿ, ಸಂಬಂಧಪಟ್ಟ ದಾಖಲಾತಿಗಳನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ವಾಹನದ ಮಾಲೀಕತ್ವದ ವಿವರವನ್ನು ಕೋರಿ, ಹುಣಸೂರಿನ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ದಿನಾಂಕ:03-3-09 ರಂದು ಈ ಪ್ರಾಧಿಕಾರದಿಂದ ಪತ್ರ ವ್ಯವಹಾರ ನಡೆಸಲಾಗಿರುತ್ತದೆ. ಸದರಿ ಬಿ ವಹಿಯಂತೆ ಸಂ. KA-45/E-5063 ವಾಹನದ ಮಾಲೀಕರಾದ ಶೇಖರ್ ಹೆಚ್.ಆರ್. ಬಿನ್ ರಾಜಣ್ಣ, ಸಂ. 248, ಹುಂಡಿಮಾಳ, ಹುಣಸೂರು ತಾಲ್ಲೂಕು- ಇವರಿಗೆ ವಾಹನ ಮತ್ತು ಅಬಕಾರಿ ವಸ್ತುಗಳನ್ನು ಸರ್ಕಾರಕ್ಕೆ ಏಕೆ ಮುಟ್ಟುಗೋಲು ಹಾಕಿಕೊಳ್ಳಬಾರದೆಂದು ಕಲಂ 43(ಬಿ)ರಡಿಯಲ್ಲಿ ಕಾರಣ ಕೇಳುವ ನೋಟೀಸನ್ನು ನೋಂದಣಿ ಅಂಚೆ ಮೂಲಕ ಕಳುಹಿಸಲಾಗಿದ್ದು, ನೋಟೀಸ್ ದಿನಾಂಕ:02.04.09 ರಂದು ಮಾಲೀಕರಿಗೆ ಜಾರಿಯಾಗಿ ಸ್ವೀಕೃತಿಯು ಈ ಪ್ರಾಧಿಕಾರಕ್ಕೆ ದಿ :16.04.09ರಂದು ಸ್ವೀಕೃತಿಯಾಗಿರುತ್ತದೆ.

ಲಭ್ಯವಿರುವ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ದಿನಾಂಕ:12-09-2008ರಂದು ಹುಣಸೂರು ತಾಲ್ಲೂಕು ಬಿಳಿಕೆರೆ ಹೋಬಳಿ, ಹುಂಡಿಮಾಳ ಗ್ರಾಮದ ಬಿಲ್ಡರ್ಸ್ ಬಡಾವಣೆ, ಮನೆ ನಂ. 73, ಚಂದ್ರಶೇಖರ್ ಬಿನ್ ಶಿವಣ್ಣೇಗೌಡ ಇವರಿಗೆ ಸೇರಿದ ವಾಸದ ಮನೆಯಲ್ಲಿ ಅಕ್ರಮವಾಗಿ 40 ಲೀ. ಸಂಸ್ಕರಿಸಿದ ಮದ್ಯಸಾರ ಹಾಗೂ 0.720 ಲೀ. ಒರಿಜಿನಲ್ ಡಿಲಕ್ಸ್ ವಿಸ್ಕಿ ಹೆಸರಿನ ನಕಲಿ ಮದ್ಯವನ್ನು ಹೊಂದಿದ್ದುದು ಕಂಡುಬಂದಿರುತ್ತದೆ. ಈ ಪ್ರಾಧಿಕಾರದಿಂದ ದಿನಾಂಕ : 23.03.09ರಂದು ನೀಡಲಾದ ಕಾರಣ ಕೇಳುವ ನೋಟೀಸಿಗೆ ಯಾವುದೇ ಪ್ರತಿಕ್ರಿಯೆಯನ್ನು ನೀಡಿರುವುದಿಲ್ಲ. ಅಲ್ಲದೇ ವಾಹನ ಬಿಡುಗಡೆಗಾಗಿ ಪ್ರತಿವಾದಿಗಳ ಕಡೆಯಿಂದ ಇದೂವರೆವಿಗೂ ಯಾವುದೇ ಪ್ರಯತ್ನ ನಡೆದಿರುವುದಿಲ್ಲ. ಇದನ್ನು ಸೂಕ್ಷ್ಮವಾಗಿ ಗಮನಿಸಿದಾಗ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32, 34ರ ಅಡಿಯಲ್ಲಿ ತನಿಖಾಧಿಕಾರಿಗಳು ಆರೋಪ ಮಾಡಿದ್ದು, ಈ ಬಗ್ಗೆ ಪ್ರತಿವಾದಿಗಳು ತನ್ನ ಮೇಲೆ ಇರತಕ್ಕಂತಹ ಜವಾಬ್ದಾರಿ / ಹೊಣೆಗಾರಿಕೆಯನ್ನು ಇದೂವರೆವಿಗೆ ಪ್ರಾಧಿಕಾರದ ಮುಂದೆ ನಿರೂಪಿಸಿರುವುದಿಲ್ಲ. ಆದ ಕಾರಣ ಈ ಕೃತ್ಯ ತನ್ನ ತಿಳುವಳಿಕೆಯಲ್ಲಿಯೇ. ನಡೆದಿದೆ ಎಂಬುದು ಈ ಪ್ರಾಧಿಕಾರಕ್ಕೆ ಮನವರಿಕೆಯಾಗಿರುತ್ತದೆ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು 7 ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನ ತನ್ನದೆಂದಾಗಲೀ ಈ ಬಗ್ಗೆ ತಾನು ವಿಚಾರಣೆಯನ್ನು ನಡೆಸುತ್ತೇನೆಂದಾಗಲೀ ಯಾರೂ ಇಂದಿನವರೆಗೂ ಖುದ್ದಾಗಿ ಆಗಲಿ ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನದ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನ ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನದ ಮಾಲೀಕರಿಗೆ ಅಥವಾ ಏಜೆಂಟರ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮೀಲಾಗದೇ ಹಾಗೂ ಅವರೆಲ್ಲರಿಗೂ ಅರಿವಿಲ್ಲದಂತೆ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿರುವುದಿಲ್ಲವಾದುದರಿಂದ ಸದರಿ ವಾಹನವನ್ನು ಇನ್ನೂ ಹಾಗೆಯೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/127/2008-09, ದಿನಾಂಕ:28ನೇ ಏಪ್ರಿಲ್, 2009

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಬಿ) ರ ಪ್ರಕಾರ ಅನುಸರಿಸಬೇಕಾದ ಕ್ರಮಗಳನ್ನೆಲ್ಲಾ ಅನುಸರಿಸಿದ ನಂತರ ಕಲಂ 43 (A)(2) ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಅಬಕಾರಿ ಉಪ ನಿರೀಕ್ಷಕರು, ಹುಣಸೂರು ವಲಯ ಇವರ

ಪ್ರಮಾವ ಸಂಖ್ಯೆ : 03/08-09, ದಿನಾಂಕ:12-09-2008ರಂದು ವಶಪಡಿಸಿಕೊಂಡ ಸಂ: KA-45/ E-5063 ನೋಂದಣಿ ಬಜಾಜ್ ಸಿ.ಟಿ-100 ವಾಹನವನ್ನು ಹಾಗೂ 40 ಲೀ. ಸಂಸ್ಕರಿಸಿದ ಮದ್ಯಸಾರ ಮತ್ತು 0.720 ಲೀ. ನಕಲಿ ಮದ್ಯವನ್ನು (ಮಾದರಿಯನ್ನು ಹೊರತುಪಡಿಸಿ) ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಲಾಗಿದೆ.

(ಈ ಆದೇಶವನ್ನು ಇಂದು ಅಂದರೆ 2009ನೇ ಇಸವಿಯ ಏಪ್ರಿಲ್ ತಿಂಗಳ 23ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಪ್ರಾಧಿಕಾರದ ಮೊಹರಿನೊಂದಿಗೆ ಹೊರಡಿಸಲಾಗಿದೆ.)

ಈ ಆದೇಶವು ಇಂದಿನಿಂದ 30 ದಿನಗಳ ನಂತರ ಜಾರಿಗೆ ಬರುವುದು.

ಎ.ಎಸ್.ವಿಶ್ವರೂಪ್

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ಹಾಗೂ

ಪಿ.ಆರ್.486

ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಡೆಪ್ಯುಟಿ ಕಮಿಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್/541/07–08, ದಿನಾಂಕ:28ನೇ ಏಪ್ರಿಲ್, 2009

ಉಪಸ್ಥಿತರು: ಎ.ಎಸ್.ವಿಶ್ವರೂಪ

ಡೆಪ್ಯುಟಿ ಕಮಿಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಫಿರ್ಯಾದುದಾರರು	**ಪ್ರತಿವಾದಿ/ ಆರೋಪಿ**
ಆರಕ್ಷಕ ಉಪ ನಿರೀಕ್ಷಕರು, ಬನ್ನೂರು ಠಾಣೆ,	ಕುಮಾರ ಬಿನ್ ದೊಳ್ಳಯ್ಯ,
ಟಿ. ನರಸೀಪುರ ತಾ||	ಮಲಿಯೂರು ಗ್ರಾಮ, ತಿ. ನರಸೀಪುರ ತಾ||

ಪ್ರಕರಣದ ಮುಖ್ಯಾಂಶಗಳು :

ದಿನಾಂಕ:16-06-2008ರಂದು ಬೆಳಿಗ್ಗೆ 7-30 ಗಂಟೆಯ ಸಮಯದಲ್ಲಿ ಆರಕ್ಷಕ ಉಪ ನಿರೀಕ್ಷಕರು, ಬನ್ನೂರು ಪೋಲೀಸ್ ಠಾಣೆ, ಟಿ.ನರಸೀಪುರ ತಾಲ್ಲೂಕು – ಇವರು ಟಿ.ನರಸೀಪುರ ತಾಲ್ಲೂಕು, ಬನ್ನೂರು ಕಡೆಯಿಂದ ಸೋಮನಾಥಪುರಕ್ಕೆ ಹೀರೋ ಹೋಂಡಾ ಸಂಖ್ಯೆ : KA-29/E-3196 ವಾಹನದಲ್ಲಿ ಅಕ್ರಮವಾಗಿ 8.280 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಅಪರಾಧಕ್ಕಾಗಿ ವಾಹನ ಮತ್ತು ಮಾದಕ ದ್ರವ್ಯಗಳನ್ನು ವಶಪಡಿಸಿಕೊಂಡು, ಪ್ರ.ಮಾ.ವ ಸಂ. 86/2008 ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 32, 34ರನ್ವಯ ಮೊಕದ್ದಮೆ ದಾಖಲಿಸಿ, ಸಂಬಂಧಪಟ್ಟ ದಾಖಲಾತಿಗಳನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿ, ಜಪ್ತುಗೊಳಿಸಲಾದ ವಾಹನ ಮತ್ತು ಮಾದಕ ದ್ರವ್ಯಗಳನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ಪ್ರಾಧಿಕಾರದ ಅನುಮತಿಯನ್ನು ಕೋರಿರುತ್ತಾರೆ. ಅಂತೆಯೇ ದಿನಾಂಕ:18.06.2008ರಂದು ಟಿ.ನರಸೀಪುರ ವಲಯದ ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಲು ಅನುಮತಿ ನೀಡಲಾಗಿದೆ.

ವಾಹನದ ಮಾಲೀಕತ್ವದ ವಿವರವನ್ನು ಕೋರಿ, ಬಾಗಲಕೋಟೆ ಜಿಲ್ಲೆಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ದಿನಾಂಕ : 14-07-08ರಂದು ಈ ಪ್ರಾಧಿಕಾರದಿಂದ ಪತ್ರ ವ್ಯವಹಾರ ನಡೆಸಲಾಗಿದ್ದು, ಇದಕ್ಕೆ ಯಾವುದೇ ಪ್ರತಿಕ್ರಿಯೆ ದೊರೆಯದ ಕಾರಣ ದಿನಾಂಕ : 05.11.2008 ರಂದು ನೆನಪೋಲೆ ಪತ್ರವನ್ನು ಬರೆಯಲಾಗಿರುತ್ತದೆ. ಸದರಿ ವಾಹನದ ಬಿ ವಹಿಯ ಪ್ರತಿಯನ್ನು ಈ ಪ್ರಾಧಿಕಾರಕ್ಕೆ ಕಳುಹಿಸಿರುತ್ತಾರೆ. ಇದನ್ನು ಪರಿಶೀಲಿಸಲಾಗಿ, ಫಕೀರುಸಾ ಟಿ.ಉಗ್ಲಿ ಬಿನ್ ತಿಪ್ಪನ್ನಸಾ, ಸಂ. 05, ಇಟ್ಕಲ್ ಪೋಸ್ಟ್, ಹುನಗುಂದ ತಾಲ್ಲೂಕು ಇವರ ಒಡೆತನದಲ್ಲಿರುವುದು ದೃಢಪಟ್ಟಿರುತ್ತದೆ. ಸದರಿಯವರಿಗೆ ವಾಹನ ಮತ್ತು ಅಬಕಾರಿ ವಸ್ತುಗಳನ್ನು ಸರ್ಕಾರಕ್ಕೆ ಏಕೆ ಮುಟ್ಟುಗೋಲು ಹಾಕಿಕೊಳ್ಳಬಾರದೆಂದು ದಿನಾಂಕ:12.12.2008ರಂದು ಕಲಂ 43(ಬಿ)ರಡಿಯಲ್ಲಿ ಕಾರಣ ಕೇಳುವ ನೋಟೀಸನ್ನು ನೋಂದಣಿ ಅಂಚೆ ಮೂಲಕ ಕಳುಹಿಸಲಾಗಿದ್ದು, ನೋಟೀಸ್ ಮಾಲೀಕರಿಗೆ ಜಾರಿಯಾಗಿ ಸ್ವೀಕೃತಿಯು ಈ ಪ್ರಾಧಿಕಾರಕ್ಕೆ ದಿನಾಂಕ:15.01.2009ರಂದು ಸ್ವೀಕೃತಿಯಾಗಿರುತ್ತದೆ.

ಲಭ್ಯವಿರುವ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ದಿನಾಂಕ:16-06-2008ರಂದು ಟಿ.ನರಸೀಪುರ ತಾಲ್ಲೂಕು, ಬನ್ನೂರು ಕಡೆಯಿಂದ ಸೋಮನಾಥಪುರಕ್ಕೆ ಅಕ್ರಮವಾಗಿ 8.280 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ. ಈ ಪ್ರಾಧಿಕಾರದಿಂದ ದಿನಾಂಕ:12.12.2008ರಂದು ನೀಡಲಾದ ಕಾರಣ ಕೇಳುವ ನೋಟೀಸಿಗೆ ಇದೂವರೆವಿಗೂ ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ. ಅಲ್ಲದೇ ವಾಹನ ಬಿಡುಗಡೆಗಾಗಿ ಪ್ರತಿವಾದಿಗಳ ಕಡೆಯಿಂದ ಇದೂವರೆವಿಗೂ ಯಾವುದೇ ಪ್ರಯತ್ನ ನಡೆದಿರುವುದಿಲ್ಲ ಇದನ್ನು ಸೂಕ್ಷ್ಮವಾಗಿ ಗಮನಿಸಿದಾಗ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32, 34ರ ಅಡಿಯಲ್ಲಿ ತನಿಖಾಧಿಕಾರಿಗಳು ಆರೋಪ ಮಾಡಿದ್ದು, ಈ ಬಗ್ಗೆ ಪ್ರತಿವಾದಿಗಳು ತನ್ನ ಮೇಲೆ ಇರತಕ್ಕಂತಹ ಜವಾಬ್ದಾರಿ / ಹೊಣೆಗಾರಿಕೆಯನ್ನು ಇದೂವರೆವಿಗೆ ಪ್ರಾಧಿಕಾರದ ಮುಂದೆ ನಿರೂಪಿಸಿರುವುದಿಲ್ಲ. ಆದ ಕಾರಣ ಈ ಕೃತ್ಯ ತನ್ನ ತಿಳುವಳಿಕೆಯಲ್ಲಿಯೇ ನಡೆದಿದೆ ಎಂಬುದು ಈ ಪ್ರಾಧಿಕಾರಕ್ಕೆ ಮನವರಿಕೆಯಾಗಿರುತ್ತದೆ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು 9 ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನ ತನ್ನದೆಂದಾಗಲೀ ಈ ಬಗ್ಗೆ ತಾನು ವಿಚಾರಣೆಯನ್ನು ನಡೆಸುತ್ತೇನೆಂದಾಗಲೀ ಯಾರೂ ಇಂದಿನವರೆಗೂ ಖುದ್ದಾಗಿ ಆಗಲಿ ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನದ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನ ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನದ ಮಾಲೀಕರಿಗೆ ಅಥವಾ ಏಜೆಂಟರ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮೀಲಾಗದೇ ಹಾಗೂ ಅವರೆಲ್ಲರಿಗೂ ಅರಿವಿಲ್ಲದಂತೆ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿರುವುದಿಲ್ಲವಾದುದರಿಂದ ಸದರಿ ವಾಹನವನ್ನು ಇನ್ನೂ ಹಾಗೆಯೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/541/2008-09, ದಿನಾಂಕ:28ನೇ ಏಪ್ರಿಲ್, 2009

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಬಿ) ರ ಪ್ರಕಾರ ಅನುಸರಿಸಬೇಕಾದ ಕ್ರಮಗಳನ್ನೆಲ್ಲಾ ಅನುಸರಿಸಿದ ನಂತರ ಕಲಂ 43 (A)(2) ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಆರಕ್ಷಕ ಉಪ ನಿರೀಕ್ಷಕರು, ಬನ್ನೂರು ಪೋಲೀಸ್ ಠಾಣೆ, ಟಿ.ನರಸೀಪುರ ತಾ।। ಇವರ ಪ್ರಮಾವ ಸಂ: 86/08, ದಿನಾಂಕ:16-06-08ರಂದು ವಶಪಡಿಸಿಕೊಂಡ ಸಂ: KA-29/E-3196 ನೋಂದಣಿ ಹೀರೋ ಹೋಂಡಾ ವಾಹನ ಮತ್ತು 8.280 ಲೀ. ಮದ್ಯವನ್ನು (ಮಾದರಿಯನ್ನು ಹೊರತುಪಡಿಸಿ), ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಲಾಗಿದೆ.

(ಈ ಆದೇಶವನ್ನು ಇಂದು ಅಂದರೆ 2009ನೇ ಇಸವಿಯ ಏಪ್ರಿಲ್ ತಿಂಗಳ 28ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಪ್ರಾಧಿಕಾರದ ಮೊಹರಿನೊಂದಿಗೆ ಹೊರಡಿಸಲಾಗಿದೆ.)

ಈ ಆದೇಶವು ಇಂದಿನಿಂದ 30 ದಿನಗಳ ನಂತರ ಜಾರಿಗೆ ಬರುವುದು.

ಎ.ಎಸ್.ವಿಶ್ವರೂಪ್

ಪಿ.ಆರ್.487

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ಹಾಗೂ
ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಡೆಪ್ಯುಟಿ ಕಮಿಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್/257/07-08, ದಿನಾಂಕ:28ನೇ ಏಪ್ರಿಲ್, 2009

ಉಪಸ್ಥಿತರು: ಎ.ಎಸ್.ವಿಶ್ವರೂಪ

ಡೆಪ್ಯುಟಿ ಕಮಿಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಫಿರ್ಯಾದುದಾರರು	**ಪ್ರತಿವಾದಿ/ ಆರೋಪಿ**
ಅಬಕಾರಿ ಉಪ ನಿರೀಕ್ಷಕರು-2, (ಜಾರಿ ಮತ್ತು ತನಿಖೆ), ನಂಜನಗೂಡು ತಾ।।	ಸುಬೇರ್ ಬಿನ್ ಮಹಮದ್, ಮತ್ತು ಇತರರು.

ಪ್ರಕರಣದ ಮುಖ್ಯಾಂಶಗಳು :

ದಿನಾಂಕ:05-12-2007ರಂದು ರಾತ್ರಿ 7-30 ಗಂಟೆಯ ಸಮಯದಲ್ಲಿ ನಂಜನಗೂಡು ತಾಲ್ಲೂಕು, ಜಾರಿ ಮತ್ತು ತನಿಖೆಯ ಅಬಕಾರಿ ಉಪ ನಿರೀಕ್ಷಕರು-2 ಇವರು ನಂಜನಗೂಡು ತಾಲ್ಲೂಕು, ಗುಂಡ್ಲುಪೇಟೆ ಮುಖ್ಯ ರಸ್ತೆಯಲ್ಲಿರುವ ಕಳಲೆ ಗೇಟ್ ಬಳಿ ಅಕ್ರಮವಾಗಿ 35 ಲೀ. ನಕಲಿ ಮದ್ಯದ ಮಿಶ್ರಣವನ್ನು ಹೀರೋ ಹೋಂಡಾ ಪ್ಯಾಷನ್ ಸಂಖ್ಯೆ : KA-04/ED-1465 ವಾಹನದಲ್ಲಿ ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಅಪರಾಧಕ್ಕಾಗಿ ವಾಹನ ಮತ್ತು ಮಾದಕ ದ್ರವ್ಯಗಳನ್ನು ವಶಪಡಿಸಿಕೊಂಡು, ಪ್ರ.ಮಾ.ವ ಸಂ. 8/07-08ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 11, 13, 14ರ ರೀತ್ಯಾ ಅಪರಾಧವಾಗಿದ್ದು, ಕಲಂ 32, 33, 34, 38(A) ಮತ್ತು 43ರ ಪ್ರಕಾರ ಶಿಕ್ಷಾರ್ಹವಾದ್ದರಿಂದ ಆರೋಪಿಗಳಾದ ಸುಬೇರ್ ಬಿನ್ ಮಹಮದ್, ಟಿ.ಎಂ.ಅಷ್ರಫ್ ಬಿನ್ ಟಿ.ಎನ್. ಮೂಸೇ ಇವರನ್ನು ದಸ್ತಗಿರಿ ಮಾಡಿರುವುದಾಗಿ, ಮೊಕದ್ದಮೆ ದಾಖಲಿಸಿ, ಸಂಬಂಧಪಟ್ಟ ದಾಖಲಾತಿಗಳನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ಯಾರಿಂದ ವಾಹನವನ್ನು ವಶಪಡಿಸಿಕೊಳ್ಳಲಾಗಿದೆಯೇ ಅವರಿಗೆ ಈ ಪ್ರಾಧಿಕಾರದಿಂದ ದಿನಾಂಕ : 31.11.2007ರಂದು ಕಲಂ 43(ಬಿ)ರ ಅಡಿಯಲ್ಲಿ ಕಾರಣ ಕೇಳುವ ನೋಟೀಸನ್ನು ನೋಂದಣಿ ಅಂಚೆ ಮೂಲಕ ಕಳುಹಿಸಲಾಗಿದ್ದು, ಟಿ.ಎಂ.ಅಷ್ರಫ್

ಇವರಿಗೆ ಜಾರಿಯಾಗಿ, ಸ್ವೀಕೃತಿ ಈ ಪ್ರಾಧಿಕಾರಕ್ಕೆ ಸ್ವೀಕೃತಿಯಾಗಿರುತ್ತದೆ. ಮತ್ತೊಬ್ಬ ಆರೋಪಿಯಾದ ಸುಬೇರ್ ಬಿನ್ ಮಹಮದ್ ಇವರ ವಿಳಾಸ ಪತ್ತೆಯಾಗಿರುವುದಿಲ್ಲವೆಂದು ಈ ಪ್ರಾಧಿಕಾರಕ್ಕೆ ಹಿಂತಿರುಗಿಸಿರುತ್ತಾರೆ.

ವಾಹನದ ಮಾಲೀಕತ್ವದ ವಿವರವನ್ನು ಕೋರಿ, ಬೆಂಗಳೂರಿನ ಯಶ್ವಂತಪುರ ಉತ್ತರ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ದಿನಾಂಕ : 31-11-07ರಂದು ಈ ಪ್ರಾಧಿಕಾರದಿಂದ ಪತ್ರ ವ್ಯವಹಾರ ನಡೆಸಲಾಗಿದ್ದು, ಇದಕ್ಕೆ ಯಾವುದೇ ಪ್ರತಿಕ್ರಿಯೆ ದೊರೆಯದ ಕಾರಣ ದಿನಾಂಕ : 23.09.2008ರಂದು ನೆನಪೋಲೆ ಪತ್ರವನ್ನು ಬರೆಯಲಾಗಿರುತ್ತದೆ. ಈ ಪ್ರಕರಣದಲ್ಲಿ ಜಪ್ತುಗೊಳಿಸಲಾದ 35 ಲೀ. ಸಂಸ್ಕರಿಸಿದ ಮದ್ಯವನ್ನು ದಿನಾಂಕ : 28.01.2008ರಂದು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ನಂಜನಗೂಡು ತಾಲ್ಲೂಕು ಜಾರಿ ಮತ್ತು ತನಿಖೆಯ ಅಬಕಾರಿ ಉಪ ನಿರೀಕ್ಷಕರು ಜಪ್ತುಗೊಳಿಸಲಾದ ವಾಹನ ಸಂ. KA-04/ED-1465 ನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಶಿಫಾರಸ್ಸು ಮಾಡಿರುತ್ತಾರೆ. ಈ ಪ್ರಕರಣದಲ್ಲಿ ಮಾದರಿ ತೆಗೆಯಲಾದ ಮಾದಕ ದ್ರವ್ಯವನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿ ವರದಿ ಪಡೆಯಲಾಗಿ, ತಮ್ಮ ವರದಿ ದಿನಾಂಕ 11.02.2008ರಲ್ಲಿ ಆಲ್ಕೋಹಾಲ್ ಅಂಶ ಪತ್ತೆಯಾಗಿದ್ದು, ಜೋರು ಶೇಕಡಾ 35.72 V/v ಇರುವುದಾಗಿ ರಾಸಾಯನಿಕ ತಜ್ಞರ ವರದಿಯಿಂದ ದೃಢಪಟ್ಟಿರುತ್ತದೆ.

ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಬೆಂಗಳೂರು ಉತ್ತರ ಇವರು ವಾಹನ ಮಾಲೀಕತ್ವವುಳ್ಳ ಬಿ ವಹಿಯ ಪ್ರತಿಯನ್ನು ಕಳುಹಿಸಿರುತ್ತಾರೆ. ಸದರಿ ಬಿ ವಹಿಯಂತೆ ಪಿ.ಪಿ. ನವೀನ್ ಕುಮಾರ್ ಬಿನ್ ಡಾ|| ಪುರುಷೋತ್ತಮ ರೆಡ್ಡಿ, ಸಂ. 5, ತಿರುಮೇನಹಳ್ಳಿ, ಜಕ್ಕೂರು ಅಂಚೆ, ಬೆಂಗಳೂರು ಉತ್ತರ ಇವರ ಒಡೆತನದಲ್ಲಿದ್ದು, ವಾಹನ ಮತ್ತು ಅಬಕಾರಿ ವಸ್ತುಗಳನ್ನು ಸರ್ಕಾರಕ್ಕೆ ಏಕೆ ಮುಟ್ಟುಗೋಲು ಹಾಕಿಕೊಳ್ಳಬಾರದೆಂದು ಕಲಂ 43(ಬಿ)ರಡಿಯಲ್ಲಿ ಕಾರಣ ಕೇಳುವ ನೋಟೀಸನ್ನು ನೋಂದಣಿ ಅಂಚೆ ಮೂಲಕ ಕಳುಹಿಸಲಾಗಿದ್ದು, ನೋಟೀಸ್ ಮಾಲೀಕರಿಗೆ ಜಾರಿಯಾಗಿ ಸ್ವೀಕೃತಿಯು ಈ ಪ್ರಾಧಿಕಾರಕ್ಕೆ ದಿನಾಂಕ : 14.11.2008ರಂದು ಸ್ವೀಕೃತಿಯಾಗಿರುತ್ತದೆ.

ಲಭ್ಯವಿರುವ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ದಿನಾಂಕ:05-12-2007ರಂದು ನಂಜನಗೂಡು ತಾಲ್ಲೂಕು, ಗುಂಡ್ಲುಪೇಟೆ ಮುಖ್ಯ ರಸ್ತೆಯಲ್ಲಿರುವ ಕಳಲೆ ಗೇಟ್ ಬಳಿ ಅಕ್ರಮವಾಗಿ 35 ಲೀ. ನಕಲಿ ಮದ್ಯದ ಮಿಶ್ರಣವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ. ಈ ಪ್ರಾಧಿಕಾರದಿಂದ ದಿನಾಂಕ:21.10.08ರಂದು ನೀಡಲಾದ ಕಾರಣ ಕೇಳುವ ನೋಟೀಸಿಗೆ ಇದೂವರೆವಿಗೂ ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ. ಅಲ್ಲದೇ ವಾಹನ ಬಿಡುಗಡೆಗಾಗಿ ಪ್ರತಿವಾದಿಗಳ ಕಡೆಯಿಂದ ಇದೂವರೆವಿಗೂ ಯಾವುದೇ ಪ್ರಯತ್ನ ನಡೆದಿರುವುದಿಲ್ಲ. ಇದನ್ನು ಸೂಕ್ಷ್ಮವಾಗಿ ಗಮನಿಸಿದಾಗ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32, 34ರ ಅಡಿಯಲ್ಲಿ ತನಿಖಾಧಿಕಾರಿಗಳು ಆರೋಪ ಮಾಡಿದ್ದು, ಈ ಬಗ್ಗೆ ಪ್ರತಿವಾದಿಗಳು ತನ್ನ ಮೇಲೆ ಇರತಕ್ಕಂತಹ ಜವಾಬ್ದಾರಿ / ಹೊಣೆಗಾರಿಕೆಯನ್ನು ಇದೂವರೆವಿಗೆ ಪ್ರಾಧಿಕಾರದ ಮುಂದೆ ನಿರೂಪಿಸಿರುವುದಿಲ್ಲ. ಆದ ಕಾರಣ ಈ ಕೃತ್ಯ ತನ್ನ ತಿಳುವಳಿಕೆಯಲ್ಲಿಯೇ ನಡೆದಿದೆ ಎಂಬುದು ಈ ಪ್ರಾಧಿಕಾರಕ್ಕೆ ಮನವರಿಕೆಯಾಗಿರುತ್ತದೆ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು 15 ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನ ತನ್ನದೆಂದಾಗಲೀ ಈ ಬಗ್ಗೆ ತಾನು ವಿಚಾರಣೆಯನ್ನು ನಡೆಸುತ್ತೇನೆಂದಾಗಲೀ ಯಾರೂ ಇಂದಿನವರೆಗೂ ಖುದ್ದಾಗಿ ಆಗಲಿ ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನದ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನ ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನದ ಮಾಲೀಕರಿಗೆ ಅಥವಾ ಏಜೆಂಟರ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮೀಲಾಗದೇ ಹಾಗೂ ಅವರೆಲ್ಲರಿಗೂ ಅರಿವಿಲ್ಲದಂತೆ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿರುವುದಿಲ್ಲವಾದುದರಿಂದ ಸದರಿ ವಾಹನವನ್ನು ಇನ್ನೂ ಹಾಗೆಯೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/257/2008-09, ದಿನಾಂಕ:28ನೇ ಏಪ್ರಿಲ್, 2009

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಬಿ) ರ ಪ್ರಕಾರ ಅನುಸರಿಸಬೇಕಾದ ಕ್ರಮಗಳನ್ನೆಲ್ಲಾ ಅನುಸರಿಸಿದ ನಂತರ ಕಲಂ 43 (A)(2) ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಅಬಕಾರಿ ಉಪ ನಿರೀಕ್ಷಕರು-2, (ಜಾರಿ ಮತ್ತು ತನಿಖೆ), ನಂಜನಗೂಡು ತಾಲ್ಲೂಕು ಇವರ ಪ್ರಮಾವ ಸಂಖ್ಯೆ : 08/07-08, ದಿನಾಂಕ : 05-12-2007ರಂದು ವಶಪಡಿಸಿಕೊಂಡ ಸಂ: KA-04/ED-1465 ನೋಂದಣಿ ಹೀರೋ ಹೋಂಡಾ ಪ್ಯಾಷನ್ ವಾಹನವನ್ನು (35 ಲೀ. ಬ್ಲೆಂಡ್ ಮದ್ಯವನ್ನು ಮಾದರಿಯನ್ನು ಹೊರತುಪಡಿಸಿ ಈಗಾಗಲೇ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ) ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಲಾಗಿದೆ.

(ಈ ಆದೇಶವನ್ನು ಇಂದು ಅಂದರೆ 2009ನೇ ಇಸವಿಯ ಏಪ್ರಿಲ್ ತಿಂಗಳ 28ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಪ್ರಾಧಿಕಾರದ ಮೊಹರಿನೊಂದಿಗೆ ಹೊರಡಿಸಲಾಗಿದೆ.)

ಈ ಆದೇಶವು ಇಂದಿನಿಂದ 30 ದಿನಗಳ ನಂತರ ಜಾರಿಗೆ ಬರುವುದು.

ಎ.ಎಸ್.ವಿಶ್ವರೂಪ್
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ಹಾಗೂ
ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿ.ಆರ್.488

ಡೆಪ್ಯುಟಿ ಕಮಿಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್/55/08-09, ದಿನಾಂಕ:28ನೇ ಏಪ್ರಿಲ್, 2009

ಉಪಸ್ಥಿತರು: ಎ.ಎಸ್.ವಿಶ್ವರೂಪ

ಡೆಪ್ಯುಟಿ ಕಮಿಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಫಿರ್ಯಾದುದಾರರು	**ಪ್ರತಿವಾದಿ/ ಆರೋಪಿ**
ಅಬಕಾರಿ ಉಪ ನಿರೀಕ್ಷಕರು-2, ನಂಜನಗೂಡು ವಲಯ.	ಬಿ.ಎಂ.ಕುಮಾರ್ ಬಿನ್ ಮಾದೇಗೌಡ, ಹುಲ್ಲಳ್ಳಿ, ನಂಜನಗೂಡು ತಾಲ್ಲೂಕು.

ಪ್ರಕರಣದ ಮುಖ್ಯಾಂಶಗಳು :

ದಿನಾಂಕ : 23-08-2008ರಂದು ಮಧ್ಯಾಹ್ನ 3-00 ಗಂಟೆಯ ಸಮಯದಲ್ಲಿ ನಂಜನಗೂಡು ವಲಯದ ಅಬಕಾರಿ ಉಪ ನಿರೀಕ್ಷಕರು-2 ಇವರು ನಂಜನಗೂಡು ತಾಲ್ಲೂಕು, ಹುಲ್ಲಹಳ್ಳಿ ಹೋಬಳಿ, ಹರದನಹಳ್ಳಿ ಬಸಾಪುರ ಮಾರ್ಗ ಮಧ್ಯದಲ್ಲಿ ಬರುವ ಹುಚ್ಚಗಣಿ ಗ್ರಾಮದ ಮಹದೇವಮ್ಮನ ದೇವಸ್ಥಾನದ ಹತ್ತಿರ, ಅಕ್ರಮವಾಗಿ 8.640 ಲೀ. ಮದ್ಯವನ್ನು ಟಿವಿಎಸ್ ಎಕ್ಸೆಲ್ ಸೂಪರ್ ಸಂಖ್ಯೆ : KA-09/Y-8568 ವಾಹನದಲ್ಲಿ ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಅಪರಾಧಕ್ಕಾಗಿ ವಾಹನ ಮತ್ತು ಮಾದಕ ದ್ರವ್ಯಗಳನ್ನು ವಶಪಡಿಸಿಕೊಂಡು, ಪ್ರ.ಮಾ.ವ ಸಂ. 04/08-09 ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 11, 13(1), (A), 14 ರ ರೀತ್ಯಾ ಅಪರಾಧವಾಗಿದ್ದು, ಕಲಂ 32, 38(A), 43ರ ಪ್ರಕಾರ ಶಿಕ್ಷಾರ್ಹವಾದ್ದರಿಂದ ಆರೋಪಿ ಬಿ.ಎಂ.ಕುಮಾರ್ ಬಿನ್ ಮಾದೇಗೌಡ ಇವರನ್ನು ದಸ್ತಗಿರಿ ಮಾಡಿರುವುದಾಗಿ, ಮೊಕದ್ದಮೆಯನ್ನು ದಾಖಲಿಸಿ, ಸಂಬಂಧಪಟ್ಟ ದಾಖಲಾತಿಗಳನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ವಾಹನದ ಮಾಲೀಕತ್ವದ ವಿವರವನ್ನು ಕೋರಿ, ಮೈಸೂರಿನ ಪೂರ್ವ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ದಿನಾಂಕ : 27-11-08ರಂದು ಈ ಪ್ರಾಧಿಕಾರದಿಂದ ಪತ್ರ ವ್ಯವಹಾರ ನಡೆಸಲಾಗಿರುತ್ತದೆ. ಸದರಿ ಬಿ ವಹಿಯಂತೆ ಸಂ. KA-09/Y-8568 ವಾಹನದ ಮಾಲೀಕರಾದ ಕೆ.ಎಸ್. ವೆಂಕಟೇಶ್ ಬಿನ್ ಸಣ್ಣಯ್ಯ, ಸಂ. 25/1, ಮುತ್ತಿನ ಮಾಲಸೋಗೆ, ಪಿರಿಯಾಪಟ್ಟಣ ತಾಲ್ಲೂಕು ಇವರಿಗೆ ವಾಹನ ಮತ್ತು ಅಬಕಾರಿ ವಸ್ತುಗಳನ್ನು ಸರ್ಕಾರಕ್ಕೆ ಏಕೆ ಮುಟ್ಟುಗೋಲು ಹಾಕಿಕೊಳ್ಳಬಾರದೆಂದು ಕಲಂ 43(ಬಿ)ರಡಿಯಲ್ಲಿ ಕಾರಣ ಕೇಳುವ ನೋಟೀಸನ್ನು ನೋಂದಣಿ ಅಂಚೆ ಮೂಲಕ ಕಳುಹಿಸಲಾಗಿದ್ದು, ನೋಟೀಸ್ ದಿನಾಂಕ:09.01.2009ರಂದು ಮಾಲೀಕರಿಗೆ ಜಾರಿಯಾಗಿ ಸ್ವೀಕೃತಿಯು ಈ ಪ್ರಾಧಿಕಾರಕ್ಕೆ ದಿನಾಂಕ:19.01.2009ರಂದು ಸ್ವೀಕೃತಿಯಾಗಿರುತ್ತದೆ.

ಲಭ್ಯವಿರುವ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ದಿನಾಂಕ:23-08-2008ರಂದು ನಂಜನಗೂಡು ತಾಲ್ಲೂಕು, ಹುಲ್ಲಹಳ್ಳಿ ಹೋಬಳಿ, ಹರದನಹಳ್ಳಿ ಬಸಾಪುರ ಮಾರ್ಗ ಮಧ್ಯದಲ್ಲಿ ಬರುವ ಹುಚ್ಚಗಣಿ ಗ್ರಾಮದ ಮಹದೇವಮ್ಮನ ದೇವಸ್ಥಾನದ ಹತ್ತಿರ, ಅಕ್ರಮವಾಗಿ 8.640 ಲೀ. ಮದ್ಯವನ್ನು ಹೊಂದಿದ್ದುದು ಕಂಡುಬಂದಿರುತ್ತದೆ. ಈ ಪ್ರಾಧಿಕಾರದಿಂದ ದಿನಾಂಕ: 22.12.08 ರಂದು ನೀಡಲಾದ ಕಾರಣ ಕೇಳುವ ನೋಟೀಸಿಗೆ ಪ್ರತಿಕ್ರಿಯಿಸಿ, ಸದರಿ ವಾಹನವನ್ನು 2004ರಲ್ಲಿ ಶುದ್ಧ ಕ್ರಯಕ್ಕೆ ಮಾರಾಟ ಮಾಡಿರುತ್ತೇನೆ. ಪ್ರಸ್ತುತ ಆ ವಾಹನಕ್ಕು ನನಗೂ ಯಾವುದೇ ಸಂಬಂಧವಿರುವುದಿಲ್ಲವೆಂದು ಹಾಗೂ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ನನ್ನ ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ಲಿಖಿತ ಮೂಲಕ ತಿಳಿಸಿರುತ್ತಾರೆ. ಅಲ್ಲದೇ ವಾಹನ ಬಿಡುಗಡೆಗಾಗಿ ಪ್ರತಿವಾದಿಗಳ ಕಡೆಯಿಂದ ಇದೂವರೆವಿಗೂ ಯಾವುದೇ ಪ್ರಯತ್ನ ನಡೆದಿರುವುದಿಲ್ಲ ಇದನ್ನು ಸೂಕ್ಷ್ಮವಾಗಿ ಗಮನಿಸಿದಾಗ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32, 34ರ ಅಡಿಯಲ್ಲಿ ತನಿಖಾಧಿಕಾರಿಗಳು ಆರೋಪ ಮಾಡಿದ್ದು, ಈ ಬಗ್ಗೆ ಪ್ರತಿವಾದಿಗಳು ತನ್ನ ಮೇಲೆ ಇರತಕ್ಕಂತಹ ಜವಾಬ್ದಾರಿ/ಹೊಣೆಗಾರಿಕೆಯನ್ನು ಇದೂವರೆವಿಗೆ ಪ್ರಾಧಿಕಾರದ ಮುಂದೆ ನಿರೂಪಿಸಿರುವುದಿಲ್ಲ. ಆದ ಕಾರಣ ಈ ಕೃತ್ಯ ತನ್ನ ತಿಳುವಳಿಕೆಯಲ್ಲಿಯೇ ನಡೆದಿದೆ ಎಂಬುದು ಈ ಪ್ರಾಧಿಕಾರಕ್ಕೆ ಮನವರಿಕೆಯಾಗಿರುತ್ತದೆ.

ಈ ಪ್ರಕರಣದಲ್ಲಿ ಮಾದರಿ ತೆಗೆಯಲಾದ ಮಾದಕ ದ್ರವ್ಯಗಳನ್ನು ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ರಾಸಾಯನಿಕ ಪರೀಕ್ಷೆಗೆ ಒಳಪಡಿಸಿ, ವರದಿ ಪಡೆಯಲಾಗಿ, ತಮ್ಮ ವರದಿ ದಿನಾಂಕ:23.09.2008ರಲ್ಲಿ "ಈಥೈಲ್ ಆಲ್ಕೋಹಾಲ್" ಕಂಡುಬಂದಿದ್ದು, ಅವು ಭಾರತ ಬ್ಯೂರೋದ ಮಾನಕಕ್ಕೆ ಅನುಗುಣವಾಗಿಲ್ಲದಿರುವುದರಿಂದ ಇವು ನಕಲಿ ಮದ್ಯವಾಗಿರುತ್ತವೆಂದು ರಾಸಾಯನಿಕ ತಜ್ಞರ ವರದಿಯಿಂದ ದೃಢಪಟ್ಟಿರುತ್ತದೆ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು 8 ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನ ತನ್ನದೆಂದಾಗಲೀ ಈ ಬಗ್ಗೆ ತಾನು ವಿಚಾರಣೆಯನ್ನು ನಡೆಸುತ್ತೇನೆಂದಾಗಲೀ ಯಾರೂ ಇಂದಿನವರೆಗೂ ಖುದ್ದಾಗಿ ಆಗಲಿ ಅಥವಾ ತನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನದ ಮಾಲೀಕರಿಗೆ ಸಾಕಷ್ಟು ದಿನಗ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದ ವಾಹನ ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನದ ಮಾಲೀಕರಿಗೆ ಅಥವಾ ಏಜೆಂಟರ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮೀಲಾಗದೇ ಹಾಗೂ ಅವರೆಲ್ಲರಿಗೂ ಅರಿವಿಲ್ಲದಂತೆ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿರುವುದಿಲ್ಲವಾದುದರಿಂದ ಸದರಿ ವಾಹನವನ್ನು ಇನ್ನೂ ಹಾಗೆಯೇ ಇಟ್ಟುಕೊಂಡಲ್ಲಿ ಯಾವುದೆ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದ ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/55/2008-09, ದಿನಾಂಕ:28ನೇ ಏಪ್ರಿಲ್, 2009

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಬಿ) ರ ಪ್ರಕಾರ ಅನುಸರಿಸಬೇಕಾದ ಕ್ರಮಗಳನ್ನೆಲ್ಲಾ ಅನುಸರಿಸಿದ ನಂತರ ಕಲಂ 43 (A)(2) ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಅಬಕಾರಿ ಉಪ ನಿರೀಕ್ಷಕರು-2, ನಂಜನಗೂಡು ವಲಯ ಇವರ ಪ್ರಮಾವ ಸಂಖ್ಯೆ : 04/08-09, ದಿನಾಂಕ:23-08-2008ರಂದು ವಶಪಡಿಸಿಕೊಂಡ ಸಂ:KA-09/Y-8568 ನೋಂದಣ ಟಿ.ವಿ.ಎಸ್ ಎಕ್ಸೆಲ್ ವಾಹನವನ್ನು ಹಾಗೂ 8.640 ಲೀ. ಮದ್ಯವನ್ನು (ಮಾದರಿಯನ್ನು ಹೊರತುಪಡಿಸಿ) ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಲಾಗಿದೆ.

(ಈ ಆದೇಶವನ್ನು ಇಂದು ಅಂದರೆ 2009ನೇ ಇಸವಿಯ ಏಪ್ರಿಲ್ ತಿಂಗಳ 28ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಪ್ರಾಧಿಕಾರದ ಮೊಹರಿನೊಂದಿಗೆ ಹೊರಡಿಸಲಾಗಿದೆ.)

ಈ ಆದೇಶವು ಇಂದಿನಿಂದ 30 ದಿನಗಳ ನಂತರ ಜಾರಿಗೆ ಬರುವುದು.

ಎ.ಎಸ್.ವಿಶ್ವರೂಪ್

ಪಿ.ಆರ್.489

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ಹಾಗೂ
ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಡೆಪ್ಯುಟಿ ಕಮಿಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್:28/2008-09, ದಿನಾಂಕ:28ನೇ ಮೇ, 2009

ಉಪಸ್ಥಿತರು: ಡಾ|| ವೈ. ಮಂಜುನಾಥ್

ಡೆಪ್ಯುಟಿ ಕಮಿಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಫಿರ್ಯಾದುದಾರರು **ಪ್ರತಿವಾದಿ/ ಆರೋಪಿ**

ಅಬಕಾರಿ ಉಪ ನಿರೀಕ್ಷಕರು **ವಿರುದ್ಧ** 1) ಆರೋಪಿಗಳು ಪರಾರಿಯಾಗಿರುತ್ತಾರೆ.
ಟಿ.ನರಸೀಪುರ ವಲಯ, ಟಿ.ನರಸೀಪುರ

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:14-07-2008 ರಂದು ರಾತ್ರಿ 9:30 ಗಂಟೆ ಸಮಯದಲ್ಲಿ ಅಬಕಾರಿ ಉಪ ನಿರೀಕ್ಷಕರು ನಂ.2 ಟಿ.ನರಸೀಪುರ ವಲಯ, ಇವರು ಟಿ.ನರಸೀಪುರ ತಾಲ್ಲೂಕು, ಬನ್ನೂರು-ಯಾಚೇನಹಳ್ಳಿ ರಸ್ತೆ, ಯಾಚೇನಹಳ್ಳಿ ಗ್ರಾಮದ ವಿದ್ಯುತ್ ಕಂಬದ ಬಳಿ, ಅಕ್ರಮವಾಗಿ 17.280 ಲೀ. ನಕಲಿ ಮದ್ಯವನ್ನು ನೋಂದಣಿ ಸಂಖ್ಯೆಯ ಇಲ್ಲದ ಸುಜುಕಿ ಜೀಸ್ (ಚಾಸಿಸ್ ನಂ.MB8NF4BCB-88149876 ಇಂಜಿನ್ ಸಂಖ್ಯೆ: 479-223344) ವಾಹನದಲ್ಲಿ ಹೊಂದಿ ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ನಕಲಿ ಮದ್ಯವನ್ನು ಜಪ್ತುಗೊಳಿಸಿ, ಪ್ರಥಮ ಮಾಹಿತಿ ವರದಿ ಸಂಖ್ಯೆ: 02/2008-09 ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 11, 14ರ ರೀತ್ಯಾ ಅಪರಾಧವಾಗಿದ್ದು, ಕಲಂ 32, 34, 38(ಎ) ರೀತ್ಯಾ ಶಿಕ್ಷಾರ್ಹವಾದ್ದರಿಂದ ಮೊಕದ್ದಮೆ ದಾಖಲಿಸಿ, ಆರೋಪಿಗಳು ತಲೆ ಮರೆಸಿಕೊಂಡಿರುವುದಾಗಿ ನಮೂದಿಸಿ, ಪ್ರಥಮ ಮಾಹಿತಿ ವರದಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ಲಭ್ಯವಿರುವ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ದಿನಾಂಕ : 14.07.2008ರಂದು ಟಿ.ನರಸೀಪುರ ತಾಲ್ಲೂಕು ಬನ್ನೂರು-ಯಾಚೇನಹಳ್ಳಿ ರಸ್ತೆ, ಯಾಚೇನಹಳ್ಳಿ ಗ್ರಾಮದ ವಿದ್ಯುತ್ ಕಂಬದ ಬಳಿ, ಅಕ್ರಮವಾಗಿ 17.280 ಲೀ. ನಕಲಿ ಮದ್ಯವನ್ನು ನೋಂದಣಿ ಸಂಖ್ಯೆಯ ಇಲ್ಲದ ಸುಜುಕಿ ಜೀಸ್ (ಚಾಸಿಸ್ ನಂ.MB8NF4BCB-88149876 ಇಂಜಿನ್ ಸಂಖ್ಯೆ 479-223344) ವಾಹನದಲ್ಲಿ ಹೊಂದಿ ಸಾಗಾಣಿಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ. ಈ ಸಂದರ್ಭದಲ್ಲಿ ಆರೋಪಿಗಳು ತಲೆ ಮರೆಸಿಕೊಂಡಿರುತ್ತಾನೆ. ಈ ವಾಹನಕ್ಕೆ ಸಂಬಂಧಪಟ್ಟ ಆರೋಪಿಯಾಗಲೀ / ವಾಹನ ಮಾಲೀಕರಾಗಲೀ ಈ ಪ್ರಾಧಿಕಾರದ

ಮುಂದೆ ತಮ್ಮ ನಿಲುವು ಏನೆಂಬುದನ್ನು ಮತ್ತು ಮಾಲೀಕರ ಮೇಲೆ ಇರತಕ್ಕಂತಹ ಜವಾಬ್ದಾರಿಯನ್ನು ಪ್ರಾಧಿಕಾರದ ಮುಂದೆ ಇದುವರೆವಿಗೂ ಸ್ಪಷ್ಟವಾಗಿ ನಿರೂಪಿಸಿರುವುದಿಲ್ಲ. ಹಾಗೂ ವಾಹನ ಬಿಡುಗಡೆಗಾಗಿ ಪ್ರತಿವಾದಿಗಳ ಕಡೆಯಿಂದ ಯಾವುದೇ ಪ್ರಯತ್ನ ನಡೆಸಿರುವುದಿಲ್ಲ.

ಪ್ರಥಮ ಮಾಹಿತಿ ವರದಿಯಲ್ಲಿ ಆರೋಪಿಗಳು ತಲೆ ಮರೆಸಿಕೊಂಡಿರುವುದಾಗಿ ಮೊಕದ್ದಮೆಯನ್ನು ದಾಖಲಿಸಿ, ಸುಮಾರು (10) ತಿಂಗಳಿಗೂ ಹೆಚ್ಚು ಕಾಲ ಕಳೆದಿರುತ್ತದೆ. ಇಂತಹ ಪ್ರಕರಣಗಳಲ್ಲಿ ಕಲಂ 43(ಸಿ)ರ ಅಡಿಯಲ್ಲಿ ಮೊಕದ್ದಮೆ ದಾಖಲಾದ ದಿನದಿಂದ ಒಂದು ತಿಂಗಳೊಳಗಾಗಿ ವಾಹನ ಮತ್ತು ಮಾದಕ ದ್ರವ್ಯಗಳು ತನ್ನದೆಂದು ಮಾಲೀಕತ್ವ ನಿರೂಪಿಸಲು ಮುಂದೆ ಬಾರದಿದ್ದ ಪಕ್ಷದಲ್ಲಿ ಅಂತಹ ವಾಹನ ಮತ್ತು ಮಾದಕ ದ್ರವ್ಯಗಳನ್ನು ಕಲಂ 43(ಸಿ)ರ ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಅಕ್ರಮವಾಗಿ ನಕಲಿ ಮದ್ಯವನ್ನು ತಯಾರಿಸಿ, ಮಾರಾಟ ಮತ್ತು ಸಾಗಾಣಿಕೆಯಂತಹ ವ್ಯವಹಾರದಲ್ಲಿ ತೊಡಗಿ, ಇಂತಹ ಮಾದಕ ದ್ರವ್ಯಗಳನ್ನು ಮುಗ್ಧ ಜನರು ಸೇವಿಸಿ, ತಮ್ಮ ಪ್ರಾಣ ಕಳೆದುಕೊಳ್ಳುವುದಲ್ಲದೇ, ಸಮಾಜದ ಮೇಲೆ ದುಷ್ಪರಿಣಾಮ ಉಂಟಾಗುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಇದು ಅಲ್ಲದೇ ಸರ್ಕಾರದ ಬೊಕ್ಕಸಕ್ಕೆ ನಷ್ಟವುಂಟು ಮಾಡುತ್ತಿರುವುದು ಸ್ಪಷ್ಟವಾಗಿ ಕಂಡುಬಂದಿರುತ್ತದೆ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (10) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿನ ವರೆವಿಗೂ ಖುದ್ದಾಗಿಯಾಗಲೀ ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ / ಏಜೆಂಟರ್ ಗಮನಕ್ಕೆ ಬಾರದೆ ಮತ್ತು ಅವರುಗಳು ಶಾಮಿಲಾಗದೆ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೆ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/28/2008-09, ದಿನಾಂಕ:28ನೇ ಮೇ, 2009

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಸಿ)ರ ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಅಬ್ಕಾರಿ ಉಪ ನಿರೀಕ್ಷಕರು, ಟಿ.ನರಸೀಪುರ ವಲಯ, ಟಿ.ನರಸೀಪುರ ಇವರು ಹೂಡಲಾದ ಪ್ರ.ಮಾ.ವರದಿ ಸಂಖ್ಯೆ: 02/2008-09, ದಿ: 14-07-08 ರಂದು ವಶಪಡಿಸಿಕೊಂಡ ನೋಂದಣಿ ಸಂಖ್ಯೆಯ ಇಲ್ಲದ ಸುಜುಕಿ ಜೀಸ್ (ಚಾಸಿಸ್ ನಂ.MB8NF4BCB-88149876 ಇಂಜಿನ್ ಸಂಖ್ಯೆ: 479-223344) ವಾಹನವನ್ನು ಮತ್ತು 17.280 ಲೀ. ನಕಲಿ ಮದ್ಯವನ್ನು (ಮಾದರಿ ಹೊರತುಪಡಿಸಿ) ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2009ನೇ ಇಸವಿ ಮೇ ತಿಂಗಳ 28ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಈ ಆದೇಶವು ಇಂದಿನಿಂದ 30 ದಿನಗಳ ನಂತರ ಜಾರಿಗೆ ಬರುವುದು.

ಡಾ॥ ವೈ. ಮಂಜುನಾಥ್

ಪಿ.ಆರ್.525

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ಹಾಗೂ
ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಡೆಪ್ಯುಟಿ ಕಮಿಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್:251/2008-09, ದಿನಾಂಕ:28ನೇ ಮೇ, 2009

ಉಪಸ್ಥಿತರು: ಡಾ॥ ವೈ. ಮಂಜುನಾಥ್

ಡೆಪ್ಯುಟಿ ಕಮಿಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಫಿರ್ಯಾದುದಾರರು **ಪ್ರತಿವಾದಿ/ ಆರೋಪಿ**

ಅಬಕಾರಿ ಉಪ ನಿರೀಕ್ಷಕರು, **ವಿರುದ್ಧ** 1) ಎಂ.ರಾಜು ಮತ್ತು ಇತರರು
ಉಪ ವಿಭಾಗ, ಮೈಸೂರು.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ: 27-11-2008ರಂದು ಮಧ್ಯಾಹ್ನ 3:30 ಗಂಟೆ ಸಮಯದಲ್ಲಿ ಅಬಕಾರಿ ಉಪ ನಿರೀಕ್ಷಕರು, ಉಪ ವಿಭಾಗ, ಮೈಸೂರು ಇವರು ಮೈಸೂರು ತಾಲ್ಲೂಕು, ಹೂಟಗಳ್ಳಿ ಎಸ್.ಆರ್. ಎಸ್ ಕಾಲೋನಿ, ವಿಶ್ವ ಕರ್ಮ ಸಮಿತಿ ಎಂದು ನಾಮಾಂಕಿತ ಹೊಂದಿರುವ ಫಲಕದ ಪಕ್ಕದಲ್ಲಿರುವ ಎಂ. ರಾಜು ಬಿನ್ ಮಹದೇವು ಇವರ ವಾಸದ ಮನೆಯಲ್ಲಿ 112.320 ಲೀ. ನಕಲಿ ಮದ್ಯ, 105 ಲೀ. ಸಂಸ್ಕರಿಸಿದ ಮದ್ಯ (ಬ್ಲೆಂಡ್) ಖಾಲಿ ಸೀಸೆಗಳು, ಲೇಬಲ್‌ಗಳು, ಕಾರ್ಕ್‌ಗಳು, ಭದ್ರತಾ ಅಂಟು ಚೀಟಿಗಳು ಮತ್ತು ವೆನಿಲಾ ಎಸೆನ್ಸ್‌ಗಳನ್ನು ಹೊಂದಿದ್ದು, ಇದನ್ನು ಸಾಗಾಣಿಕೆ ಮಾಡಲು ಕೆಎ-05/ಎಂ-3582 ನೋಂದಣಿ ಸಂಖ್ಯೆಯ ಮಾರುತಿ-800 ವಾಹನವನ್ನು ಉಪಯೋಗಿಸಲು ಇಟ್ಟುಕೊಂಡಿದ್ದ ಆರೋಪಕ್ಕಾಗಿ ವಾಹನ, ನಕಲಿ ಮದ್ಯ, ಬ್ಲೆಂಡ್ ಮದ್ಯ ಮತ್ತು ಇತರೆ ವಸ್ತುಗಳನ್ನು ಜಪ್ತುಗೊಳಿಸಿ, ಪ್ರಥಮ ಮಾಹಿತಿ ವರದಿ ಸಂಖ್ಯೆ: 19/2008-09 ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 11, 13(ಎಫ್) 14ರ ರೀತ್ಯಾ ಅಪರಾಧವಾಗಿದ್ದು, ಕಲಂ 32, 38(ಎ) ಹಾಗೂ 43 ಮತ್ತು 43(ಎ)ರ ರೀತ್ಯಾ ಶಿಕ್ಷಾರ್ಹವಾದ್ದರಿಂದ ಮೊಕದ್ದಮೆ ದಾಖಲಿಸಿ, ಎಂ.ರಾಜು ಎಂಬ ಆರೋಪಿಯನ್ನು ಬಂಧಿಸಿ, ನ್ಯಾಯಾಲಯದ ವಶಕ್ಕೆ ಒಪ್ಪಿಸಿರುವುದಾಗಿ ಪ್ರಥಮ ಮಾಹಿತಿ ವರದಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ವಶಪಡಿಸಿಕೊಂಡ ವಾಹನದ ವಿವರವುಳ್ಳ 'ಬಿ' ವಹಿಯನ್ನು ಕೋರಿ, ಬೆಂಗಳೂರು ಉತ್ತರ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ದಿ: 30-01-2009ರಂದು ಈ ಪ್ರಾಧಿಕಾರದಿಂದ ಪತ್ರ ಬರೆಯಲಾಗಿದ್ದು, ಸದರಿಯವರು ವಾಹನವು ಈ ಕಚೇರಿ ವ್ಯಾಪ್ತಿಗೆ ಬರುವುದಿಲ್ಲವಾದ್ದರಿಂದ ಮೂಲ ನೋಂದಣಿ ಪ್ರಾಧಿಕಾರವಾದ ಬೆಂಗಳೂರು (ದಕ್ಷಿಣ) ಇವರ ಸಂಪರ್ಕಿಸಬೇಕಾಗಿ ತಿಳಿಸಿರುತ್ತಾರೆ. ಅದರಂತೆ 'ಬಿ' ವಹಿಯನ್ನು ಕೋರಿ, ಬೆಂಗಳೂರು (ದಕ್ಷಿಣ) ಇವರಿಗೆ ಪತ್ರ ಬರೆಯಲಾಗಿ, ಈವರೆವಿಗೂ ಯಾವುದೇ ಪ್ರತಿಕ್ರಿಯೆ ಇರುವುದಿಲ್ಲ.

ಕಡತ ಪರಿಶೀಲಿಸಲಾಯಿತು. ಕೆಳಕಂಡ ದಾಖಲಾತಿಗಳು ಕಂಡುಬಂದಿರುತ್ತವೆ.

1) ಶೋಧನ ಸಮುಚಿತ ಆಧಾರ
2) ಮಹಜರ್ ಕ್ರಮ
3) ಮೆಮೊ ಆಫ್ ಅರೆಸ್ಟ್
4) ಜಪ್ತಿ ಪತ್ರ
5) ಸ್ವತ್ತಿನ ಪಟ್ಟಿ
6) ಪ್ರಥಮ ಮಾಹಿತಿ ವರದಿ

ಮೇಲ್ಕಂಡ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ದಿನಾಂಕ:27.11.2008ರಂದು ಮೈಸೂರು ತಾಲ್ಲೂಕು, ಹೂಟಗಳ್ಳಿ ಎಸ್.ಆರ್. ಎಸ್ ಕಾಲೋನಿ, ವಿಶ್ವ ಕರ್ಮ ಸಮಿತಿ ಎಂದು ನಾಮಾಂಕಿತ ಹೊಂದಿರುವ ಫಲಕದ ಪಕ್ಕದಲ್ಲಿರುವ ಎಂ. ರಾಜು ಬಿನ್ ಮಹದೇವು ಇವರ ವಾಸದ ಮನೆಯಲ್ಲಿ 112.320 ಲೀ. ನಕಲಿ ಮದ್ಯ, 105 ಲೀ. ಸಂಸ್ಕರಿಸಿದ ಮದ್ಯ (ಬ್ಲೆಂಡ್) ಖಾಲಿ ಸೀಸೆಗಳು, ಲೇಬಲ್‌ಗಳು, ಕಾರ್ಕ್‌ಗಳು, ಭದ್ರತಾ ಅಂಟು ಚೀಟಿಗಳು ಮತ್ತು ವೆನಿಲಾ ಎಸೆನ್ಸ್‌ಗಳನ್ನು ಹೊಂದಿದ್ದು, ಇದನ್ನು ಸಾಗಾಣಿಕೆ ಮಾಡಲು ಕೆಎ-05/ಎಂ-3582 ನೋಂದಣಿ ಸಂಖ್ಯೆಯ ಮಾರುತಿ-800 ವಾಹನವನ್ನು ಉಪಯೋಗಿಸಲು ಇಟ್ಟುಕೊಂಡಿದ್ದುದು ಕಂಡುಬಂದಿರುತ್ತದೆ. ಸಂದರ್ಭದಲ್ಲಿ ಆರೋಪಿ ಎಂ. ರಾಜು ಬಿನ್ ಮಹದೇವ ಇವರನ್ನು ದಸ್ತಗಿರಿಗೊಳಿಸಲಾಗಿರುತ್ತದೆ. ವಾಹನಕ್ಕೆ ಸಂಬಂಧಪಟ್ಟ ಆರೋಪಿಗಳಾಗಲೀ/ ವಾಹನ ಮಾಲೀಕರಾಗಲೀ ತಮ್ಮ ನಿಲುವು ಏನೆಂಬುದನ್ನು ಮತ್ತು ಮಾಲೀಕರ ಮೇಲೆ ಇರತಕ್ಕಂತಹ ಜವಾಬ್ದಾರಿಯನ್ನು ಪ್ರಾಧಿಕಾರದ ಮುಂದೆ ಹಾಜರಾಗಿ ಇದುವರೆವಿಗೂ ಸ್ಪಷ್ಟವಾಗಿ ನಿರೂಪಿಸಿರುವುದಿಲ್ಲ. ಹಾಗೂ ವಾಹನ ಬಿಡುಗಡೆಗಾಗಿ ಪ್ರತಿವಾದಿಗಳ ಕಡೆಯಿಂದ ಯಾವುದೇ ಪ್ರಯತ್ನ ನಡೆಸಿರುವುದಿಲ್ಲ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು 6 ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಖುದ್ದಾಗಿಯಾಗಲೀ ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನೆ ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ / ಏಜೆಂಟರ್ ಗಮನಕ್ಕೆ ಬಾರದೆ ಮತ್ತು ಅವರುಗಳು ಶಾಮಿಲಾಗದೇ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೆ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/251/2008-09, ದಿನಾಂಕ:28ನೇ ಮೇ, 2009

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಬಿ)ರ ಪ್ರಕಾರ ಅನುಸರಿಸಬೇಕಾದ ಕ್ರಮಗಳನ್ನೆಲ್ಲಾ ಅನುಸರಿಸಿದ ಂತರ ಕಲಂ 43(ಎ) (2) ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಅಬ್ಕಾರಿ ಉಪ ನಿರೀಕ್ಷಕರು, ಗುಪ್ತ ರ್ತಾದಳ, ಮೈಸೂರು ಇವರು ಹೂಡಲಾದ ಪ್ರ.ಮಾ.ವರದಿ ಸಂಖ್ಯೆ:19/2008-09, ದಿನಾಂಕ:27-11-08ರಂದು ಶಪಡಿಸಿಕೊಂಡ ಕೆಎ-05/ಎಂ-3582 ನೋಂದಣಿ ಸಂಖ್ಯೆಯ ಮಾರುತಿ-800 ವಾಹನವನ್ನು, 112.320 ಲೀ. ನಕಲಿ ಮದ್ಯ, 05 ಲೀ. ಬ್ಲೆಂಡ್ ಮದ್ಯ ಮತ್ತು ಇತರೆ ವಸ್ತುಗಳನ್ನು (ಮಾದರಿ ಹೊರತುಪಡಿಸಿ) ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2009ನೇ ಇಸವಿ ಮೇ ತಿಂಗಳ 28ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ುಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತಾ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಈ ಆದೇಶವು ಇಂದಿನಿಂದ 30 ದಿನಗಳ ನಂತರ ಜಾರಿಗೆ ಬರುವುದು.

ಡಾ|| ವೈ. ಮಂಜುನಾಥ್
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ಹಾಗೂ
ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿ.ಆರ್.526

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್:457/2008-09, ದಿನಾಂಕ:28ನೇ ಮೇ, 2009

ಉಪಸ್ಥಿತರು: ಡಾ|| ವೈ.ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಫಿರ್ಯಾದುದಾರರು		ಪ್ರತಿವಾದಿ/ ಆರೋಪಿ
ಅಬಕಾರಿ ಉಪ ನಿರೀಕ್ಷಕರು	**ವಿರುದ್ಧ**	1) ಕೆ.ಎಸ್.ರಾಜು ಬಿನ್ ಕೆ.ಹೆಚ್.ಶಿವಣ್ಣ
ಹುಣಸೂರು ವಲಯ, ಹುಣಸೂರು.		2) ಕೆ.ಹೆಚ್.ಶಿವಣ್ಣ ಬಿನ್ ಲೇ|| ಹೊನ್ನಪ್ಪ

ಕರಣದ ಮುಖ್ಯಾಂಶಗಳು:

ದಿನಾಂಕ:14-03-2009ರಂದು ಬೆಳಿಗ್ಗೆ 8:50 ಗಂಟೆ ಸಮಯದಲ್ಲಿ ಅಬಕಾರಿ ಉಪ ನಿರೀಕ್ಷಕರು, ಹುಣಸೂರು ಲಯ, ಇವರು ಹುಣಸೂರು ತಾಲ್ಲೂಕು, ಹುಣಸೂರು-ಕೆ.ಆರ್.ನಗರ ಬೈಪಾಸ್ ರಸ್ತೆಯ ಕಲ್ಕುಣಿಕೆಯಲ್ಲಿರುವ ಕೆ.ಎಸ್.ರಾಜು ನ್ ಕೆ.ಹೆಚ್.ಶಿವಣ್ಣ ಎಂಬುವರಿಗೆ ಸೇರಿದ ತೋಟದ ಹೆಂಚಿನ ಮನೆಯ ಒಳಭಾಗದ ಅಂಗಳದಲ್ಲಿ ಸುಮಾರು 3 ರಿಂದ 4 ೊಡ್ಡ ಬಿಂದಿಗೆಗಳಿದ್ದು, ಅವುಗಳಲ್ಲಿ 110 ಲೀ. ಸೇಂದಿಯನ್ನು ಹೊಂದಿದ್ದು, ಇದನ್ನು ಸಾಗಾಣಿಕೆ ಮಾಡಲು ಕೆಎ-09/ಎಸ್-673 ನೋಂದಣಿ ಸಂಖ್ಯೆಯ ಟಿವಿಎಸ್ ಎಕ್ಸೆಲ್-50 ವಾಹನವನ್ನು ಉಪಯೋಗಿಸಲು ಇಟ್ಟುಕೊಂಡಿದ್ದ ಆರೋಪಕ್ಕಾಗಿ ಾಹನ ಮತ್ತು ಸೇಂದಿಯನ್ನು ಜಪ್ತುಗೊಳಿಸಿ, ಪ್ರಥಮ ಮಾಹಿತಿ ವರದಿ ಸಂಖ್ಯೆ: 16/2008-09 ರಲ್ಲಿ ಕರ್ನಾಟಕ ಅಬಕಾರಿ ಾಯಿದೆ 1965ರ ಕಲಂ 11, 13(1) (ಎ) ಮತ್ತು (ಸಿ) ರೀತ್ಯಾ ಅಪರಾಧವಾಗಿದ್ದು, ಕಲಂ 32, 38(ಎ) ರೀತ್ಯಾ ಕ್ಷಾರ್ಹವಾದ್ದರಿಂದ ಮೊಕದ್ದಮೆ ದಾಖಲಿಸಿ, ಕೆ.ಎಸ್.ರಾಜು ಎಂಬ ಆರೋಪಿಯನ್ನು ಬಂಧಿಸಿ, ನ್ಯಾಯಾಲಯದ ವಶಕ್ಕೆ ಪ್ಪಿಸಿರುವುದಾಗಿ ಪ್ರಥಮ ಮಾಹಿತಿ ವರದಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ವಶಪಡಿಸಿಕೊಂಡ ವಾಹನದ ವಿವರವುಳ್ಳ 'ಬಿ' ವಹಿಯನ್ನು ಕೋರಿ, ಮೈಸೂರು ಪೂರ್ವ ಪ್ರಾದೇಶಿಕ ಸಾರಿಗೆ ಧಿಕಾರಿಗಳಿಗೆ ದಿನಾಂಕ:20-03-2009 ರಂದು ಈ ಪ್ರಾಧಿಕಾರದಿಂದ ಪತ್ರ ಬರೆಯಲಾಗಿದೆ. ಹುಣಸೂರು ವಲಯದ ಬಕಾರಿ ನಿರೀಕ್ಷಕರು, ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ 'ಬಿ' ವಹಿಯ ಪ್ರತಿಯನ್ನು ಪಡೆದು, ತಮ್ಮ ದಿನಾಂಕ: -05-09 ರ ಪತ್ರದಲ್ಲಿ ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. 'ಬಿ' ವಹಿಯನ್ನು ಪರಿಶೀಲಿಸಲಾಗಿ, ಚಾರ್ಜಿಸ್ ನಂ. ಎ810ಎಫ್-9836, ಇಂಜಿನ್ ನಂ.ಎ810ಎಂ-9೩1668 ಆಗಿದ್ದು, ಕೆ.ಹೆಚ್.ಶಿವಣ್ಣ ಬಿನ್ ಲೇ|| ಕೆ.ಬಿ.ಹೊನ್ನಪ್ಪ, ರಂಗನಾಥ ಬಡಾವಣೆ, ಆರ್.ನಗರ ರಸ್ತೆ, ಕಲ್ಕುಣಿಕೆ, ಹುಣಸೂರು ತಾಲ್ಲೂಕು ಇವರ ಒಡೆತನದಲ್ಲಿದ್ದು, ವಾಹನ ಮತ್ತು ಸೇಂದಿಯನ್ನು ಸರ್ಕಾರಕ್ಕೆ ಏಕೆ ುಟ್ಟುಗೋಲು ಹಾಕಿಕೊಳ್ಳಬಾರದೆಂದು ಕಲಂ 43(ಬಿ) ರ ಅಡಿಯಲ್ಲಿ ಕಾರಣ ಕೇಳಿ ನೋಟೀಸ್ ನೀಡಲಾಗಿರುತ್ತದೆ. ಸದರಿ ೋಟೀಸ್‌ನ್ನು ವಾಹನ ಮಾಲೀಕರಿಗೆ ದಿನಾಂಕ:19-05-09ರಂದು ಹುಣಸೂರು ವಲಯದ ಅಬಕಾರಿ ನಿರೀಕ್ಷಕರು, ಾರಿಗೊಳಿಸಿ, ದಿನಾಂಕ: 28-05-09ರಂದು ಸ್ವೀಕೃತಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ಈ ಪ್ರಕರಣದಲ್ಲಿ ಮಾದರಿ ತೆಗೆಯಲಾದ ಮಾದಕ ದ್ರವ್ಯಗಳನ್ನು ಬೆಂಗಳೂರಿನ ಮುಖ್ಯ ರಾಸಾಯನಿಕ ತಜ್ಞರಿಗೆ ಕಳುಹಿಸಿ, ತಮ್ಮ ವರದಿ ದಿನಾಂಕ:04-05-09 ರಲ್ಲಿ ಈಥೈಲ್ ಆಲ್ಕೋಯಾಲ್ ಅಂಶ ಕಂಡುಬಂದಿದ್ದು, ಅವು ಮಾನವ ಸೇವನೆಗೆ ಯೋಗ್ಯವೆಂದು ರಾಸಾಯನಿಕ ತಜ್ಞರ ವರದಿಯಿಂದ ದೃಢಪಟ್ಟಿರುತ್ತದೆ.

ಕಡತ ಪರಿಶೀಲಿಸಲಾಯಿತು. ಕೆಳಕಂಡ ದಾಖಲಾತಿಗಳು ಕಂಡುಬಂದಿರುತ್ತವೆ.

1) ಶೋಧನ ಸಮುಚಿತ ಆಧಾರ
2) ಮಹಜರ್ ಕ್ರಮ
3) ಮೆಮೊ ಆಫ್ ಅರೆಸ್ಟ್
4) ಜಪ್ತಿ ಪತ್ರ
5) ಸ್ವತ್ತಿನ ಪಟ್ಟಿ
6) ಪ್ರಥಮ ಮಾಹಿತಿ ವರದಿ
7) ರಾಸಾಯನಿಕ ತಜ್ಞರ ವರದಿ
8) ರಿಮ್ಯಾಂಡ್ ಅರ್ಜಿ

ಮೇಲ್ಕಂಡ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ದಿನಾಂಕ:14.03.09ರಂದು ಹುಣಸೂರು ತಾಲ್ಲೂಕು, ಹುಣಸೂರು-ಕೆ.ಆರ್.ನಗರ ಬೈಪಾಸ್ ರಸ್ತೆಯ ಕಲ್ಕುಣಿಕೆಯಲ್ಲಿರುವ ಕೆ.ಎಸ್.ರಾಜು ಬಿನ್ ಕೆ.ಹೆಚ್. ಶಿವಣ್ಣ ಎಂಬುವರಿಗೆ ಸೇರಿದ ಹೆಂಚಿನ ಹಂಚಿನ ಮನೆಯ ಒಳಭಾಗದ ಅಂಗಳದಲ್ಲಿ ಸುಮಾರು 3 ರಿಂದ 4 ದೊಡ್ಡ ಬಿಂದಿಗೆಗಳಿದ್ದು, ಅವುಗಳಲ್ಲಿ 110 ಲೀ ಸೇಂದಿಯನ್ನು ಹೊಂದಿದ್ದು, ಇದನ್ನು ಸಾಗಾಣಿಕೆ ಮಾಡಲು ಕೆಎ-09/ಎಸ್-8673 ನೋಂದಣಿ ಸಂಖ್ಯೆಯ ಟಿವಿಎಸ್ ಎಕ್ಸೆಲ್-50 ವಾಹನವನ್ನು ಉಪಯೋಗಿಸಲು ಇಟ್ಟುಕೊಂಡಿದ್ದುದು ಕಂಡುಬಂದಿರುತ್ತದೆ. ಸಂದರ್ಭದಲ್ಲಿ ಆರೋಪಿ ಕೆ.ಎಸ್.ರಾಜು ಬಿನ್ ಕೆ.ಹೆಚ್.ಶಿವಣ್ಣ ಇವರನ್ನು ದಸ್ತಗಿರಿಗೊಳಿಸಲಾಗಿರುತ್ತದೆ. ಅಲ್ಲದೇ 'ಬಿ' ವಹಿ ರನ್ವಯ ವಾಹನ ಮಾಲೀಕರಾದ ಕೆ.ಹೆಚ್.ಶಿವಣ್ಣ ಬಿನ್ ಲೇ॥ ಕೆ.ಬಿ.ಹೊನ್ನಪ್ಪ, ಇವರಿಗೆ ಈ ಪ್ರಾಧಿಕಾರದಿಂದ ದಿನಾಂಕ:14-05-2009 ರಂದು ಕಲಂ 43(ಬಿ)ರ ಅಡಿಯಲ್ಲಿ ನೀಡಲಾದ ಕಾರಣ ಕೇಳುವ ನೋಟೀಸ್ ಜಾರಿಯಾಗಿದ್ದರೂ ಸಹ ಆರೋಪಿಯಾಗಲೀ/ವಾಹನ ಮಾಲೀಕರಾಗಲೀ ತಮ್ಮ ನಿಲುವು ಏನೆಂಬುದನ್ನು ಮತ್ತು ತಮ್ಮ ಮೇಲೆ ಇರತಕ್ಕಂತಹ ಜವಾಬ್ದಾರಿಯನ್ನು ಪ್ರಾಧಿಕಾರದ ಮುಂದೆ ಇದುವರೆವಿಗೂ ಸ್ಪಷ್ಟವಾಗಿ ನಿರೂಪಿಸಿರುವುದಿಲ್ಲ. ಹಾಗೂ ವಾಹನ ಬಿಡುಗಡೆಗಾಗಿ ಪ್ರತಿವಾದಿಗಳ ಕಡೆಯಿಂದ ಯಾವುದೇ ಪ್ರಯತ್ನ ನಡೆಸಿರುವುದಿಲ್ಲ. ಹುಣಸೂರು ವಲಯದ ಅಬಕಾರಿ ನಿರೀಕ್ಷಕರು, ತಮ್ಮ ಪತ್ರ ದಿನಾಂಕ:28.05.09ರಲ್ಲಿ ಜಪ್ತುಗೊಳಿಸಲಾದ ವಾಹನವನ್ನು ಮತ್ತು ಸೇಂದಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ವರದಿ ಮಾಡಿರುತ್ತಾರೆ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು ಎರಡು ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾವು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಖುದ್ದಾಗಿಯಾಗಲೀ ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನೆ ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ , ಏಜೆಂಟರ್ ಗಮನಕ್ಕೆ ಬಾರದೆ ಮತ್ತು ಅವರುಗಳು ಶಾಮಿಲಾಗದೇ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೆ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/457/2008--09, ದಿನಾಂಕ:28ನೇ ಮೇ, 2009

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಬಿ)ರ ಪ್ರಕಾರ ಅನುಸರಿಸಬೇಕಾದ ಕ್ರಮಗಳನ್ನೆಲ್ಲಾ ಅನುಸರಿಸಿದ ನಂತರ ಕಲಂ 43(ಎ) (2) ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಅಬ್ಕಾರಿ ಉಪ ನಿರೀಕ್ಷಕರು, ಹುಣಸೂರು ವಲಯ, ಹುಣಸೂರು ಇವರು ಹೂಡಲಾದ ಪ್ರ.ಮಾ.ವರದಿ ಸಂಖ್ಯೆ:16/2008-09, ದಿನಾಂಕ:14-09-09 ರಂದು ವಶಪಡಿಸಿಕೊಂಡ ಕೆಎ-09/ಎಸ್-8673 ನೋಂದಣಿ ಸಂಖ್ಯೆಯ ಟಿವಿಎಸ್ ಎಕ್ಸ್‌ಎಲ್-50 ವಾಹನವನ್ನು ಮತ್ತು 110 ಲೀ ಸೇಂದಿಯನ್ನು (ಮಾದರಿ ಹೊರತುಪಡಿಸಿ) ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2009ನೇ ಇಸವಿ ಮೇ ತಿಂಗಳ 28ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತಾ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಈ ಆದೇಶವು ಇಂದಿನಿಂದ 30 ದಿನಗಳ ನಂತರ ಜಾರಿಗೆ ಬರುವುದು.

ಡಾ॥ ವೈ. ಮಂಜುನಾಥ್

ಪಿ.ಆರ್.532

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ಹಾಗೂ
ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್:315(ಎ)/2007-08, ದಿನಾಂಕ:28ನೇ ಮೇ, 2009

ಉಪಸ್ಥಿತರು: ಡಾ॥ ವೈ.ಮಂಜುನಾಥ್,

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು: **ಪ್ರತಿವಾದಿ/ ಆರೋಪಿ**

ಅಬಕಾರಿ ಉಪ ನಿರೀಕ್ಷಕರು **ವಿರುದ್ಧ** 1) ತಲೆ ತಪ್ಪಿಸಿಕೊಂಡಿರುತ್ತಾನೆ.

ಹುಣಸೂರು ವಲಯ, ಹುಣಸೂರು.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:21-04-2008ರಂದು ಬೆಳಿಗ್ಗೆ 8:30 ಗಂಟೆ ಸಮಯದಲ್ಲಿ ಅಬಕಾರಿ ಉಪ ನಿರೀಕ್ಷಕರು, ಹುಣಸೂರು ವಲಯ, ಇವರು ಹುಣಸೂರು ತಾಲ್ಲೂಕು, ಹನಗೂಡು ಹೋಬಳಿ, ಕೊಟ್ಟಿಗೆ ಕಾವಲ್-ಕೂಡ್ಲೂರು ರಸ್ತೆ, ಕೊಟ್ಟಿಗೆ ಗ್ರಾಮದ ಕಾಲುವೆ ಹತ್ತಿರ ಅಕ್ರಮವಾಗಿ 40 ಲೀ. ಸೇಂದಿಯನ್ನು ಟಿಎನ್-29/ಕ್ಯೂ-6179 ನೋಂದಣಿ ಸಂಖ್ಯೆಯ ಬಜಾಜ್ ಎಂ-80 ವಾಹನದಲ್ಲಿ ಹೊಂದಿ ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಸೇಂದಿಯನ್ನು ಜಪ್ತುಗೊಳಿಸಿ, ಪ್ರಥಮ ಮಾಹಿತಿ ವರದಿ ಸಂಖ್ಯೆ: 02/2007-08 ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 11, 13 (1) (ಎ) (ಸಿ) ಮತ್ತು 14ರ ರೀತ್ಯಾ ಅಪರಾಧವಾಗಿದ್ದು, ಕಲಂ 32, 34, 38(ಎ) ಮತ್ತು 43(ಎ)ರ ರೀತ್ಯಾ ಶಿಕ್ಷಾರ್ಹವಾದ್ದರಿಂದ ಮೊಕದ್ದಮೆ ದಾಖಲಿಸಿ ಆರೋಪಿ ತಲೆ ಮರೆಸಿಕೊಂಡಿರುವುದಾಗಿ ನಮೂದಿಸಿ, ಪ್ರಥಮ ಮಾಹಿತಿ ವರದಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ವಶಪಡಿಸಿಕೊಂಡ ವಾಹನದ ವಿವರವುಳ್ಳ 'ಬಿ' ವಹಿಯ ಪ್ರತಿಯನ್ನು ಕೋರಿ, ತಮಿಳುನಾಡು ರಾಜ್ಯದ ಚೆನ್ನೈನ ಸಾರಿಗೆ ಆಯುಕ್ತರಿಗೆ ದಿನಾಂಕ: 21-07-2008ರಂದು ಈ ಪ್ರಾಧಿಕಾರದಿಂದ ಪತ್ರ ಬರೆದು, ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ 'ಬಿ' ವಹಿಯನ್ನು ಕಳುಹಿಸಲು ಸೂಚಿಸುವಂತೆ, ಕೋರಲಾಗಿದೆ. ಇದುವರೆವಿಗೂ ಯಾವುದೇ ಪ್ರತಿಕ್ರಿಯೆ ಬರುವುದಿಲ್ಲ.

ಈ ಪ್ರಕರಣದಲ್ಲಿ ಮಾದರಿ ತೆಗೆಯಲಾದ ಮಾದಕ ದ್ರವ್ಯಗಳನ್ನು ಬೆಂಗಳೂರಿನ ಮುಖ್ಯ ರಾಸಾಯನಿಕ ತಜ್ಞರಿಗೆ ಕಳುಹಿಸಿ, ತಮ್ಮ ವರದಿ ದಿ: 22-04-2008ರಲ್ಲಿ ಈಥೈಲ್ ಆಲ್ಕೋಹಾಲ್ ಅಂಶ ಕಂಡುಬಂದಿದ್ದು, ಅವು ಮಾನವ ಸೇವನೆಗೆ ಯೋಗ್ಯವೆಂದು ರಾಸಾಯನಿಕ ತಜ್ಞರ ವರದಿಯಿಂದ ದೃಢಪಟ್ಟಿರುತ್ತದೆ.

ಕಡತ ಪರಿಶೀಲಿಸಲಾಯಿತು. ಕೆಳಕಂಡ ದಾಖಲಾತಿಗಳು ಕಂಡುಬಂದಿರುತ್ತವೆ.

1) ಶೋಧನ ಸಮುಚಿತ ಆಧಾರ
2) ಮಹಜರ್ ಕ್ರಮ
3) ಜಪ್ತಿ ಪತ್ರ
4) ಸ್ವತ್ತಿನ ಪಟ್ಟಿ
5) ಪ್ರಥಮ ಮಾಹಿತಿ ವರದಿ
6) ರಾಸಾಯನಿಕ ತಜ್ಞರ ವರದಿ

ಮೇಲ್ಕಂಡ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ದಿನಾಂಕ: 21.04.2008ರಂದು ಹುಣಸೂರು ತಾಲ್ಲೂಕು, ಹನಗೂಡು ಹೋಬಳಿ, ಕೊಟ್ಟಿಗೆ ಕಾವಲ್-ಕೂಡ್ಲೂರು ರಸ್ತೆ, ಕೊಟ್ಟಿಗೆ ಗ್ರಾಮದ ಕಾಲುವೆ ಹತ್ತಿರ ಅಕ್ರಮವಾಗಿ 40 ಲೀ. ಸೇಂದಿಯನ್ನು ಟಿಎನ್-29/ಕ್ಯೂ-6179 ನೋಂದಣಿ ಸಂಖ್ಯೆಯ ಬಜಾಜ್ ಎಂ-80 ವಾಹನದಲ್ಲಿ ಹೊಂದಿ ಸಾಗಾಣಿಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ. ಈ ಸಂದರ್ಭದಲ್ಲಿ ಆರೋಪಿ ತಲೆ ಮರೆಸಿಕೊಂಡಿರುತ್ತಾನೆ. ಈ ವಾಹನಕ್ಕೆ ಸಂಬಂಧಪಟ್ಟ ಆರೋಪಿಯಾಗಲೀ / ವಾಹನ ಮಾಲೀಕರಾಗಲೀ ಈ ಪ್ರಾಧಿಕಾರದ ಮುಂದೆ ತಮ್ಮ ನಿಲುವು ಏನೆಂಬುದನ್ನು ಮತ್ತು ತಮ್ಮ ಮೇಲೆ ಇರತಕ್ಕಂತಹ ಜವಾಬ್ದಾರಿಯನ್ನು ಪ್ರಾಧಿಕಾರದ ಮುಂದೆ ಇದುವರೆವಿಗೂ ಸ್ಪಷ್ಟವಾಗಿ ನಿರೂಪಿಸಿರುವುದಿಲ್ಲ. ಹಾಗೂ ವಾಹನ ಬಿಡುಗಡೆಗಾಗಿ ಪ್ರತಿವಾದಿಗಳ ಕಡೆಯಿಂದ ಯಾವುದೇ ಪ್ರಯತ್ನ ನಡೆಸಿರುವುದಿಲ್ಲ. ಹುಣಸೂರು ವಲಯದ ಅಬಕಾರಿ ನಿರೀಕ್ಷಕರು, ತಮ್ಮ ಪತ್ರ ದಿ: 21.03.09 ರಲ್ಲಿ ಜಪ್ತುಗೊಳಿಸಲಾದ ವಾಹನವನ್ನು ಮತ್ತು ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ವರದಿ ಮಾಡಿರುತ್ತಾರೆ.

ಪ್ರಥಮ ಮಾಹಿತಿ ವರದಿಯಲ್ಲಿ ಆರೋಪಿಯು ತಲೆ ಮರೆಸಿಕೊಂಡಿರುವುದಾಗಿ ಮೊಕದ್ದಮೆಯನ್ನು ದಾಖಲಿಸಿ, ಸುಮಾರು (11) ತಿಂಗಳಿಗೂ ಹೆಚ್ಚು ಕಾಲ ಕಳೆದಿರುತ್ತದೆ. ಇಂತಹ ಪ್ರಕರಣಗಳಲ್ಲಿ ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಸಿ) ರ ಅಡಿಯಲ್ಲಿ ಮೊಕದ್ದಮೆ ದಾಖಲಾದ ದಿನದಿಂದ ಒಂದು ತಿಂಗಳೊಳಗಾಗಿ ವಾಹನ ಮತ್ತು ಮಾದಕ ದ್ರವ್ಯಗಳು ತನ್ನದೆಂದು ಮಾಲೀಕತ್ವ ನಿರೂಪಿಸಲು ಮುಂದೆ ಬಾರದಿದ್ದ ಪಕ್ಷದಲ್ಲಿ ಅಂತಹ ವಾಹನ ಮತ್ತು ಮಾದಕ ದ್ರವ್ಯಗಳನ್ನು ಕಲಂ 43(ಸಿ)ರ ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (11) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಖುದ್ದಾಗಿಯಾಗಲೀ ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ / ಏಜೆಂಟರ್ ಗಮನಕ್ಕೆ ಬಾರದೆ ಮತ್ತು ಅವರುಗಳು ಶಾಮಿಲಾಗದೇ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೆ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/315(ಎ)/2007-08, ದಿನಾಂಕ:28ನೇ ಮೇ, 2009

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಸಿ)ರ ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಅಬ್ಕಾರಿ ಉಪ ನಿರೀಕ್ಷಕರು, ಹುಣಸೂರು ವಲಯ, ಹುಣಸೂರು ಇವರು ಹೂಡಲಾದ ಪ್ರ.ಮಾ.ವರದಿ ಸಂಖ್ಯೆ: 02/2007-08, ದಿ: 21-04-08 ರಂದು ವಶಪಡಿಸಿಕೊಂಡ ಟಿಎನ್-29/ಕ್ಯೂ-6179 ನೋಂದಣಿ ಸಂಖ್ಯೆಯ ಬಜಾಜ್ ಎಂ-80 ವಾಹನವನ್ನು ಮತ್ತು 40 ಲೀ. ಸೇಂದಿಯನ್ನು (ಮಾದರಿ ಹೊರತುಪಡಿಸಿ) ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2009ನೇ ಇಸವಿ ಮೇ ತಿಂಗಳ 28ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಈ ಆದೇಶವು ಇಂದಿನಿಂದ 30 ದಿನಗಳ ನಂತರ ಜಾರಿಗೆ ಬರುವುದು.

ಡಾ॥ ವೈ. ಮಂಜುನಾಥ್

ಪಿ.ಆರ್.533 ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ಹಾಗೂ

ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್:145/2008-09, ದಿನಾಂಕ:28ನೇ ಮೇ, 2009

ಉಪಸ್ಥಿತರು: ಡಾ॥ ವೈ.ಮಂಜುನಾಥ್,

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಫಿರ್ಯಾದುದಾರರು:		**ಪ್ರತಿವಾದಿ/ ಆರೋಪಿ**
ಅಬಕಾರಿ ಉಪ ನಿರೀಕ್ಷಕರು	**ವಿರುದ್ಧ**	1) ರಂಗನಾಥ್ ಬಿನ್ ಯಲ್ಲಪ್ಪ
ಹುಣಸೂರು ವಲಯ, ಹುಣಸೂರು.		2) ಮಂಗಳಮ್ಮ ಕೋಂ ಶ್ರೀಕಂಠ

ಪ್ರಕರಣದ ಮುಖ್ಯಾಂಶಗಳು:

ದಿನಾಂಕ: 28-09-2008 ರಂದು ಬೆಳಿಗ್ಗೆ 9:45 ಗಂಟೆ ಸಮಯದಲ್ಲಿ ಅಬಕಾರಿ ಉಪ ನಿರೀಕ್ಷಕರು, ಹುಣಸೂರು ವಲಯ, ಇವರು ಹುಣಸೂರು ತಾಲ್ಲೂಕು, ಬಿಳಿಕೆರೆ ಹೋ॥ ಹುಸೇನ್ ಪುರ ಪೋಸ್ಟ್‌ಗೆ ಸೇರಿದ ತೆಂಕನಕೊಪ್ಪಲು ಗ್ರಾಮದ ಸರ್ಕಲ್ ಬಳಿ, ಅಕ್ರಮವಾಗಿ 7.920 ಲೀ. ಮದ್ಯವನ್ನು ಕೆಎ-05/ಹೆಚ್-2751 ನೋಂದಣಿ ಸಂಖ್ಯೆಯ ಬಜಾಜ್ ಸ್ಕೂಟರ್ ವಾಹನದಲ್ಲಿ ಹೊಂದಿ ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಮದ್ಯವನ್ನು ಜಪ್ತುಗೊಳಿಸಿ, ಪ್ರಥಮ ಮಾಹಿತಿ ವರದಿ ಸಂಖ್ಯೆ: 04/2008-09 ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 11, 13(1)(ಎ) ಮತ್ತು 14ರ ರೀತ್ಯಾ ಅಪರಾಧವಾಗಿದ್ದು, ಕಲಂ 32ರ ರೀತ್ಯಾ ಶಿಕ್ಷಾರ್ಹವಾದ್ದರಿಂದ ಮೊಕದ್ದಮೆ ದಾಖಲಿಸಿ, ರಂಗನಾಥ ಬಿನ್ ಎಲ್ಲಪ್ಪ ಎಂಬ ಆರೋಪಿಯನ್ನು ಬಂಧಿಸಿ, ನ್ಯಾಯಾಲಯದ ವಶಕ್ಕೆ ಒಪ್ಪಿಸಿರುವುದಾಗಿ ಪ್ರಥಮ ಮಾಹಿತಿ ವರದಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ವಶಪಡಿಸಿಕೊಂಡ ವಾಹನದ ವಿವರವುಳ್ಳ 'ಬಿ' ವಹಿಯ ಪ್ರತಿಯನ್ನು ಕೋರಿ, ಬೆಂಗಳೂರು ಉತ್ತರ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ದಿನಾಂಕ:27-11-2008 ರಂದು ಈ ಪ್ರಾಧಿಕಾರದಿಂದ ಪತ್ರ ಬರೆಯಲಾಗಿದೆ. ಇದಕ್ಕೆ ಯಾವುದೇ ಪ್ರತಿಕ್ರಿಯೆ ಇರುವುದಿಲ್ಲ.

ಈ ಪ್ರಕರಣದಲ್ಲಿ ಮಾದರಿ ತೆಗೆಯಲಾದ ಮಾದಕ ದ್ರವ್ಯಗಳನ್ನು ಬೆಂಗಳೂರಿನ ಮುಖ್ಯ ರಾಸಾಯನಿಕ ತಜ್ಞರಿಗೆ ಕಳುಹಿಸಿ, ತಮ್ಮ ವರದಿ ದಿನಾಂಕ:26-11-08 ರಲ್ಲಿ ಈಥೈಲ್ ಆಲ್ಕೋಹಾಲ್ ಅಂಶ ಕಂಡುಬಂದಿದ್ದು, ಅವು ಮಾನವ ಸೇವನೆಗೆ ಯೋಗ್ಯವೆಂದು ರಾಸಾಯನಿಕ ತಜ್ಞರ ವರದಿಯಿಂದ ದೃಢಪಟ್ಟಿರುತ್ತದೆ.

ಕಡತ ಪರಿಶೀಲಿಸಲಾಯಿತು. ಕೆಳಕಂಡ ದಾಖಲಾತಿಗಳು ಕಂಡುಬಂದಿರುತ್ತವೆ.

1) ಶೋಧನ ಸಮುಚಿತ ಆಧಾರ

2) ಮಹಜರ್ ಕ್ರಮ

3) ಜಪ್ತಿ ಪತ್ರ

4) ಮಾದರಿ ಮೊಹರಿನ ನಕಲು

5) ಸ್ವತ್ತಿನ ಪಟ್ಟಿ

6) ಪ್ರಥಮ ಮಾಹಿತಿ ವರದಿ

7) ರಾಸಾಯನಿಕ ತಜ್ಞರ ವರದಿ

ಮೇಲ್ಕಂಡ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ದಿನಾಂಕ: 28.09.2008 ರಂದು ಹುಣಸೂರು ತಾಲ್ಲೂಕು, ಬಿಳಿಕೆರೆ ಹೋ॥, ಹುಸೇನ್ ಪುರ ಪೋಸ್ಟ್‌ಗೆ ಸೇರಿದ ತೆಂಕನಕೊಪ್ಪಲು ಗ್ರಾಮ ಸರ್ಕಲ್ ಬಳಿ, ಅಕ್ರಮವಾಗಿ 7.920 ಲೀಟರ್ ಮದ್ಯವನ್ನು ಯಾವುದೇ ರಹದಾರಿ ಇಲ್ಲದೆ ಕೆಎ-05/ಹೆಚ್-2751 ನೋಂದಣಿ ಸಂಖ್ಯೆಯ ಬಜಾಜ್ ಸ್ಕೂಟರ್ ವಾಹನದಲ್ಲಿ ಹೊಂದಿ, ಸಾಗಾಣಿಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ.

ಈ ಸಂದರ್ಭದಲ್ಲಿ ಆರೋಪಿ ರಂಗನಾಥ ಬಿನ್ ಯಲ್ಲಪ್ಪ, ಮೀನಾಕ್ಷಿ ಬಡಾವಣೆ, ಕೆ.ಆರ್.ನಗರ ಟೌನ್, ಇವರನ್ನು ದಸ್ತಗಿರಿಗೊಳಿಸಲಾಗಿರುತ್ತದೆ. ಸದರಿ ಆರೋಪಿಯಾಗಲೀ / ವಾಹನ ಮಾಲೀಕರಾಗಲೀ ಈ ಪ್ರಾಧಿಕಾರದ ಮುಂದೆ ತಮ್ಮ ನಿಲುವು ಏನೆಂಬುದನ್ನು ಮತ್ತು ತಮ್ಮ ಮೇಲೆ ಇರತಕ್ಕಂತಹ ಜವಾಬ್ದಾರಿಯನ್ನು ಪ್ರಾಧಿಕಾರದ ಮುಂದೆ ಇದುವರೆವಿಗೂ ಸ್ಪಷ್ಟವಾಗಿ ನಿರೂಪಿಸಿರುವುದಿಲ್ಲ. ಹಾಗೂ ವಾಹನ ಬಿಡುಗಡೆಗಾಗಿ ಪ್ರತಿವಾದಿಗಳ ಕಡೆಯಿಂದ ಯಾವುದೇ ಪ್ರಯತ್ನ ನಡೆಸಿರುವುದಿಲ್ಲ. ಹುಣಸೂರು ವಲಯದ ಅಬಕಾರಿ ನಿರೀಕ್ಷಕರು, ತಮ್ಮ ಪತ್ರ ದಿನಾಂಕ:21.03.09 ರಲ್ಲಿ ಜಪ್ತುಗೊಳಿಸಲಾದ ವಾಹನವನ್ನು ಮತ್ತು ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ವರದಿ ಮಾಡಿರುತ್ತಾರೆ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (8) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿನ ವರೆವಿಗೂ ಖುದ್ದಾಗಿಯಾಗಲೀ ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ / ಏಜೆಂಟರ್ ಗಮನಕ್ಕೆ ಬಾರದೆ ಮತ್ತು ಅವರುಗಳು ಶಾಮಿಲಾಗದೆ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೆ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/145/2008-09, ದಿನಾಂಕ:28ನೇ ಮೇ, 2009

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಬಿ)ರ ಪ್ರಕಾರ ಅನುಸರಿಸಬೇಕಾದ ಕ್ರಮಗಳನ್ನೆಲ್ಲಾ ಅನುಸರಿಸಿದ ನಂತರ ಕಲಂ 43(ಎ) (2) ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಅಬ್ಕಾರಿ ಉಪ ನಿರೀಕ್ಷಕರು, ಹುಣಸೂರು ವಲಯ, ಹುಣಸೂರು ಇವರು ಹೂಡಲಾದ ಪ್ರ.ಮಾ.ವರದಿ ಸಂಖ್ಯೆ:4/2008-09, ದಿನಾಂಕ:28-09-08 ರಂದು ವಶಪಡಿಸಿಕೊಂಡ ಕೆಎ-05/ಹೆಚ್-2751 ನೋಂದಣಿ ಸಂಖ್ಯೆಯ ಬಜಾಜ್ ಸ್ಕೂಟರ್ ವಾಹನವನ್ನು ಮತ್ತು 7.920 ಲೀ. ಮದ್ಯವನ್ನು (ಮಾದರಿ ಹೊರತುಪಡಿಸಿ) ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2009ನೇ ಇಸವಿ ಮೇ ತಿಂಗಳ 28ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತಾ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಈ ಆದೇಶವು ಇಂದಿನಿಂದ 30 ದಿನಗಳ ನಂತರ ಜಾರಿಗೆ ಬರುವುದು.

ಡಾ॥ ವೈ. ಮಂಜುನಾಥ್

ಪಿ.ಆರ್.534

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ಹಾಗೂ
ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್:302(ಎ)/2007-08, ದಿನಾಂಕ:28ನೇ ಮೇ, 2009

ಉಪಸ್ಥಿತರು: ಡಾ॥ ವೈ.ಮಂಜುನಾಥ್,

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು:

ಅಬಕಾರಿ ಉಪ ನಿರೀಕ್ಷಕರು

ಗುಪ್ತ ವಾರ್ತಾವಿಭಾಗ, ಮೈಸೂರು.

ವಿರುದ್ಧ

ಪ್ರತಿವಾದಿ/ ಆರೋಪಿ

1) ಎನ್. ವೆಂಕಟೇಶ್ ಬಿನ್ ನಾರಾಯಣಪ್ಪ,

ಶನಿ ಮಹಾತ್ಮ ಬಡಾವಣೆ, ಎನ್.ಆರ್.ಮೊಹಲ್ಲಾ.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:30-01-2008 ರಂದು ರಾತ್ರಿ 11-00 ಗಂಟೆಯ ಸಮಯದಲ್ಲಿ ಅಬಕಾರಿ ನಿರೀಕ್ಷಕರು, ಗುಪ್ತ ವಾರ್ತಾ ವಿಭಾಗ, ಮೈಸೂರು ಇವರು ಮೈಸೂರು ಸಿಟಿ, ರಮಾಬಾಯಿನಗರ, ಆಶ್ರಯ ಮನೆ ನಂ. 185 ಮತ್ತು 186ರ ಮನೆಯ ಹತ್ತಿರ ಕೆಎ-01/ಎಂಎ-485 ನೋಂದಣಿ ಸಂಖ್ಯೆಯ ಮಾರುತಿ-800 ವಾಹನದಲ್ಲಿ ಅಕ್ರಮವಾಗಿ 175 ಲೀ. ಮದ್ಯಸರ ಹಾಗೂ ವಿವಿಧ ಮಾದರಿಯ ಮದ್ಯ ಬಾಟಲ್‌ಗಳ ಮುಚ್ಚಳಗಳು, ಖಾಲಿ ಸೀಸೆಗಳು ಮತ್ತು ನಕಲಿ ಮದ್ಯ ತಯಾರಿಸಲು ಉಪಯೋಗಿಸುವ ಪರಿಕರಗಳನ್ನು ಹೊಂದಿ. ಸಾಗಾಣಿಕೆ ಮಾಡುತ್ತಿದ್ದುದಕ್ಕಾಗಿ ವಾಹನ, ಮದ್ಯಸಾರ ಮತ್ತು ಇತರೆ ವಸ್ತುಗಳನ್ನು ಜಪ್ತು ಮಾಡಿ ಪ್ರಕರಣ ಸಂಖ್ಯೆ:11/2007-08ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ ರೀತ್ಯ ಮೊಕದ್ದಮೆ ದಾಖಲಿಸಿ, ಸಂಬಂಧಪಟ್ಟ ದಾಖಲಾತಿಗಳನ್ನು ತಮ್ಮ ವರದಿಯೊಂದಿಗೆ ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ವಾಹನವನ್ನು ಯಾರಿಂದ ವಶಪಡಿಸಿಕೊಳ್ಳಲಾಯಿತೊ ಅಂತ ಆರೋಪಿಗಳಿಗೆ ವಾಹನ ಮತ್ತು ಮದ್ಯವನ್ನು ಸರ್ಕಾರಕ್ಕೆ ಏಕೆ ಮುಟ್ಟುಗೋಲು ಹಾಕಿಕೊಳ್ಳಬಾರದೆಂದು ಕಲಂ 43(ಬಿ) ರ ಅಡಿಯಲ್ಲಿ ಕಾರಣ ಕೇಳಿ ನೋಟೀಸ್ ಕೇಳಲಾಗಿತ್ತು. ಸದರಿ ನೋಟೀಸ್ ಪಿ.ನಾರಾಯಣ, ಎನ್. ವೆಂಕಟೇಶ್ ಇವರಿಗೆ ಜಾರಿಯಾಗಿ ಸ್ವೀಕೃತಿಯು ದಿನಾಂಕ:28-02-2008 ರಂದು ಈ ಪ್ರಾಧಿಕಾರಕ್ಕೆ ಸ್ವೀಕೃತವಾಗಿರುತ್ತದೆ.

ವಾಹನದ ಮಾಲೀಕತ್ವದ ವಿವರವುಳ್ಳ 'ಬಿ' ವಹಿಯನ್ನು ಕೋರಿ ಬೆಂಗಳೂರು ಕೇಂದ್ರ ಜಿಲ್ಲೆಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಈ ಪ್ರಾಧಿಕಾರದಿಂದ ದಿ: 16-02-.2008ರಂದು ಪತ್ರ ಬರೆಯಲಾಗಿದೆ. ಇದಕ್ಕೆ ಯಾವುದೇ ಪ್ರತಿಕ್ರಿಯೆ ದೊರೆಯದ ಕಾರಣ ದಿನಾಂಕ : 21-07-2008 ರಂದು ಮತ್ತು 05-11-2008ರಂದು ಮತ್ತೊಮ್ಮೆ ಪತ್ರ ವ್ಯವಹಾರ ನಡೆಸಲಾಗಿರುತ್ತದೆ. ಅದರಂತೆ 'ಬಿ' ವಹಿಯ ಪ್ರತಿಯನ್ನು ಈ ಪ್ರಾಧಿಕಾರಕ್ಕೆ ಕಳುಹಿಸಿರುತ್ತಾರೆ. ಅದನ್ನು ಪರಿಶೀಲಿಸಲಾಗಿ ಸಂಜಯ್ ಎಸ್.ಕಿಕ್ಲಾ ಬಿನ್ ಸುರೇಶ್ ಕಿಕ್ಲಾ, ನಂ.16, 7ನೇ ಮೈನ್, 1ನೇ ಬ್ಲಾಕ್, 80 ಅಡಿ ರಸ್ತೆ ಕೋರಮಂಗಲ ಬೆಂಗಳೂರು ಇವರ ಒಡೆತನದಲ್ಲಿದ್ದು ಸದರಿ ವಾಹನ ಮಾಲೀಕರಿಗೆ ಈ ಪ್ರಾಧಿಕಾರದಿಂದ ದಿ: 12.12.08 ರಂದು ವಾಹನವನ್ನು ಸರ್ಕಾರಕ್ಕೆ ಏಕೆ ಮುಟ್ಟುಗೋಲು ಹಾಕಿಕೊಳ್ಳಬಾರದೆಂದು ಕಲಂ 43(ಬಿ) ರ ಅಡಿಯಲ್ಲಿ ಕಾರಣ ಕೇಳುವ ನೋಟೀಸ್‌ನ್ನು ನೋಂದಣಿ ಅಂಚೆ ಮೂಲಕ ಕಳುಹಿಸಲಾಗಿದ್ದು, ವಿಳಾಸದಲ್ಲಿ ಇಲ್ಲವೆಂಬ ಷರಾದೊಂದಿಗೆ ಅಂಚೆ ಇಲಾಖೆಯವರು ಈ ಪ್ರಾಧಿಕಾರಕ್ಕೆ ಹಿಂತಿರುಗಿಸಿರುತ್ತಾರೆ.

ಕಡತ ಪರಿಶೀಲಿಸಲಾಯಿತು. ದಿನಾಂಕ: 30-01-08 ರಂದು ಮೈಸೂರು ಸಿಟಿ, ರಮಾಬಾಯಿನಗರ, ಆಶ್ರಯ ಮನೆ ನಂ. 185 ಮತ್ತು 186 ರ ಮನೆಯ ಹತ್ತಿರ, ಕೆಎ-01/ಎಂಎ-485 ನೋಂದಣಿ ಸಂಖ್ಯೆಯ ಮಾರುತಿ-800 ವಾಹನದಲ್ಲಿ ಅಕ್ರಮವಾಗಿ 175 ಲೀ. ಮದ್ಯಸಾರ ಹಾಗೂ ವಿವಿಧ ಮಾದರಿಯ ಮದ್ಯ ಬಾಟಲ್‌ಗಳ ಮುಚ್ಚಳಗಳು, ಖಾಲಿ ಸೀಸೆಗಳು ಮತ್ತು ನಕಲಿ ಮದ್ಯ ತಯಾರಿಸಲು ಉಪಯೋಗಿಸುವ ಪರಿಕರಗಳನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ. ಈ ಸಂದರ್ಭದಲ್ಲಿ ಆರೋಪಿಗಳಾದ ಎನ್. ವೆಂಕಟೇಶ್ ಮತ್ತು ಪಿ. ನಾರಾಯಣ ಇವರನ್ನು ದಸ್ತಗಿರಿ ಮಾಡಲಾಗಿದ್ದು ಇವರಿಗೂ ಸಹ ಈ ಪ್ರಾಧಿಕಾರದಿಂದ ಕಾರಣಕೇಳುವ ನೋಟಿಸನ್ನು ನೀಡಲಾಗಿದ್ದು ಯಾವುದೇ ಪ್ರತಿಕ್ರಿಯೆ ಇರುವುದಿಲ್ಲ ಅಲ್ಲದೆ ಸದರಿ ವಾಹನಕ್ಕೆ ಸಂಬಂಧಪಟ್ಟ ಆರೋಪಿಗಳಾಗಲೀ / ವಾಹನ ಮಾಲೀಕರಾಗಲೀ ತಮ್ಮ ನಿಲುವು ಏನೆಂಬುದನ್ನು ಮತ್ತು ಮಾಲೀಕರ ಮೇಲೆ ಇರತಕ್ಕಂತಹ ಜವಾಬ್ದಾರಿಯನ್ನು ಪ್ರಾಧಿಕಾರದ ಮುಂದೆ ಹಾಜರಾಗಿ ಇದುವರೆವಿಗೂ ಸ್ಪಷ್ಟವಾಗಿ ನಿರೂಪಿಸಿರುವುದಿಲ್ಲ. ಹಾಗೂ ವಾಹನ ಬಿಡುಗಡೆಗಾಗಿ ಪ್ರತಿವಾದಿಗಳ ಕಡೆಯಿಂದ ಯಾವುದೇ ಪ್ರಯತ್ನ ನಡೆಸಿರುವುದಿಲ್ಲ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (14) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿನ ವರೆವಿಗೂ ಖುದ್ದಾಗಿಯಾಗಲೀ ಅಥವಾ ತನ್ನ ವಕೀಲರ ಮುಖಾಂತರವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೆ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೆ ಈ ಘಟನೆಯು ಸಂಭವಿಸಿದ ದಿನವಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ

[illegible] ಗಮನಕ್ಕೆ ಬಾರದೆ ಮತ್ತು ಅವರುಗಳು ಶಾಮೀಲಾಗಿ ಹಾಗೂ ಇವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೆ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/302(ಎ)/2008-09, ದಿನಾಂಕ:28ನೇ ಮೇ, 2009

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಬಿ)ರಡಿಯಲ್ಲಿ ಅನುಸರಿಸಬೇಕಾದ ಕ್ರಮಗಳನ್ನೆಲ್ಲಾ ಅನುಸರಿಸಿದ ನಂತರ ಕಲಂ 43(ಎ) (2) ರಡಿಯಲ್ಲಿ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಅಬ್ಕಾರಿ ನಿರೀಕ್ಷಕರು, ಗುಪ್ತ ವಾರ್ತಾ ವಿಭಾಗ, ಮೈಸೂರು ಇವರು ಹೂಡಲಾದ ಪ್ರ.ಮಾ.ವರದಿ ಸಂಖ್ಯೆ:11/2007-08, ದಿನಾಂಕ:30-01-08 ರಂದು ವಶಪಡಿಸಿಕೊಂಡ ಕೆಎ-01/ಎಂಎ-485 ನೋಂದಣಿ ಸಂಖ್ಯೆಯ ಮಾರುತಿ-800 ವಾಹನ, 175 ಲೀ. ಮದ್ಯಸಾರ ಮತ್ತು ಇತರ ವಸ್ತುಗಳನ್ನು (ಮಾದರಿ ಹೊರತುಪಡಿಸಿ) ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2009ನೇ ಇಸವಿ ಮೇ ತಿಂಗಳ 28ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಈ ಆದೇಶವು ಇಂದಿನಿಂದ 30 ದಿನಗಳ ನಂತರ ಜಾರಿಗೆ ಬರುವುದು.

ಡಾ॥ ವೈ. ಮಂಜುನಾಥ್

ಪಿ.ಆರ್.566

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ಹಾಗೂ
ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್:202/08-05-09, ದಿನಾಂಕ:8ನೇ ಮೇ, 2009

ಉಪಸ್ಥಿತರು: ಡಾ॥ ವೈ.ಮಂಜುನಾಥ್,

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು:		**ಪ್ರತಿವಾದಿ/ ಆರೋಪಿ**
ಆರಕ್ಷಕ ಉಪ ನಿರೀಕ್ಷಕರು, ಬದನವಾಳು ಪೊಲೀಸ್ ಠಾಣೆ, ನಂಜನಗೂಡು ತಾಲ್ಲೂಕು.	ವಿರುದ್ಧ	1) ಮಹದೇವ ಬಿನ್ ಪುಟ್ಟಯ್ಯ, ಬಿಳುಗಲಿ, ನಂಜನಗೂಡು ತಾ॥. 2) ರವಿ ಬಿನ್ ರಂಗಸ್ವಾಮಿ, ಬಿಳುಗಲಿ ಗ್ರಾಮ, ನಂಜನಗೂಡು ತಾ॥.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ :14-10-2007ರಂದು ಬೆಳಿಗ್ಗೆ 11-40 ಗಂಟೆಯ ಸಮಯದಲ್ಲಿ ಆರಕ್ಷಕ ನಿರೀಕ್ಷಕರು, ಬದನವಾಳು ಪೋಲೀಸ್ ಠಾಣೆ, ನಂಜನಗೂಡು ತಾಲ್ಲೂಕು ಇವರು ನಂಜನಗೂಡು ತಾಲ್ಲೂಕು, ಬಿಳುಗಲಿ ಗ್ರಾಮದ ಮುರುಟ ಬಸವೇಶ್ವರ ದೇವಸ್ಥಾನದ ಬಳಿ ಟಿ.ವಿ.ಎಸ್ ಸ್ಟಾರ್ ಸಿಟಿ ಸಂಖ್ಯೆ : KA-09/EG-3318 ರಲ್ಲಿ ಅಕ್ರಮವಾಗಿ 17.280 ಲೀ ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದುದ್ದಕ್ಕಾಗಿ ವಾಹನ ಮತ್ತು ಮದ್ಯವನ್ನು ವಶಪಡಿಸಿಕೊಂಡು ಪ್ರ.ಮಾ.ವ ಸಂ. 148/07-08 ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 32 ಮತ್ತು 34ರ ಪ್ರಕಾರ ಶಿಕ್ಷಾರ್ಹವಾದ್ದರಿಂದ ಮೊಕದ್ದಮೆಯನ್ನು ದಾಖಲಿಸಿ, ಜಪ್ತುಗೊಳಿಸಲಾದ ವಾಹನ ಮತ್ತು ಮಾದಕ ದ್ರವ್ಯಗಳನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ಕೋರಿರುತ್ತಾರೆ. ಅಂತೆಯೇ ದಿನಾಂಕ:24-10-2007ರಂದು ನಂಜನಗೂಡು ಜಾರಿ ಮತ್ತು ತನಿಖೆಯ ಅಬಕಾರಿ ಉಪ ನಿರೀಕ್ಷಕರಿಗೆ ಹಸ್ತಾಂತರಿಸಲು ಈ ಪ್ರಾಧಿಕಾರದಿಂದ ಅನುಮತಿ ನೀಡಲಾಗಿದೆ.

ನಂಜನಗೂಡು ಜಾರಿ ಮತ್ತು ತನಿಖೆಯ ಅಬಕಾರಿ ಉಪ ನಿರೀಕ್ಷಕರು ತಮ್ಮ ಪತ್ರದ ದಿನಾಂಕ:12-11-2007 ರಂದು ಈ ಪ್ರಕರಣದಲ್ಲಿ ಜಪ್ತುಗೊಳಿಸಲಾದ ವಾಹನ ಮತ್ತು ಮಾದಕ ದ್ರವ್ಯಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ವರದಿ ಮಾಡಿರುತ್ತಾರೆ. ಅಂತೆಯೇ ದಿನಾಂಕ:14-11-2007ರಂದು (ಮಾದರಿಯನ್ನು ಹೊರತುಪಡಿಸಿ) 17.280 ಲೀ. ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ಹೊರಡಿಸಲಾಗಿರುತ್ತದೆ. ವಾಹನದ ಮಾಲೀಕತ್ವದ ವಿವರವನ್ನು ಕೋರಿ, ಮೈಸೂರು ಜಿಲ್ಲೆಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ದಿನಾಂಕ:14-11-07ರಂದು ಪತ್ರ ಬರೆಯಲಾಗಿರುತ್ತದೆ. ಹಾಗೆಯೇ ಈ ಪ್ರಕರಣದ ಆರೋಪಿಗಳಾದ ಮಹದೇವ ಬಿನ್ ಪುಟ್ಟಯ್ಯ ಮತ್ತು ರವಿ ಬಿನ್ ರಂಗಸ್ವಾಮಿ ಇವರಿಗೆ ಈ ಪ್ರಾಧಿಕಾರದಿಂದ ದಿನಾಂಕ:14-11-07 ರಂದು ವಾಹನ ಮತ್ತು ಮದ್ಯವನ್ನು ಸರ್ಕಾರಕ್ಕೆ ಏಕೆ ಮುಟ್ಟುಗೋಲು ಹಾಕಿಕೊಳ್ಳಬಾರದೆಂದು ಕರ್ನಾಟಕ ಅಬಕಾರಿ ಕಾಯಿದೆ ಕಲಂ 43(ಬಿ) ಕಾರಣ ಕೇಳುವ ನೋಟೀಸನ್ನು ನೋಂದಣಿ ಅಂಚೆ ಮೂಲಕ ಜಾರಿಗೊಳಿಸಲಾಗಿದ್ದು, ಸದರಿ ನೋಟೀಸ್ 2 ಆರೋಪಿಗಳಿಗೆ ಜಾರಿಯಾಗಿ, ಸ್ವೀಕೃತಿಯು ಈ ಪ್ರಾಧಿಕಾರಕ್ಕೆ ಸ್ವೀಕೃತವಾಗಿರುತ್ತದೆ.

ಮಹದೇವ ಬಿನ್ ಪುಟ್ಟಯ್ಯ, ಬಿಳುಗಲಿ ಗ್ರಾಮ, ನಂಜನಗೂಡು ತಾಲ್ಲೂಕು ಇವರು ಸದರಿ ನೋಟೀಸಿಗೆ ಪ್ರತಿಕ್ರಿಯಿಸಿ ತಾನು ಕಾನೂನಿನ ಅರಿವು ಇಲ್ಲದೇ ಈ ರೀತಿ ಮದ್ಯವನ್ನು ವಾಹನದಲ್ಲಿ ಹೊಂದಿ, ಸಾಗಿಸುತ್ತಿದ್ದುದ್ದನ್ನು ಒಪ್ಪಿಕೊಂಡಿರುತ್ತಾನೆ. ಆ ಕಾರಣ ಪ್ರಾಧಿಕಾರವು ವಾಹನಕ್ಕೆ ಸೂಕ್ತ ಬೆಲೆಯನ್ನು ನಿಗದಿಪಡಿಸಿದಲ್ಲಿ, ಆ ಬೆಲೆಯನ್ನು ಸರ್ಕಾರಕ್ಕೆ ಸಂದಾಯ ಮಾಡುವುದಾ ಒಪ್ಪಿ, ವಾಹನವನ್ನು ತನ್ನ ವಶಕ್ಕೆ ಬಿಡುಗಡೆ ಮಾಡಿಕೊಡಬೇಕೆಂದು ಕೋರಿರುತ್ತಾನೆ.

ನಂಜನಗೂಡು ವಲಯದ ಅಬಕಾರಿ ಉಪ ನಿರೀಕ್ಷಕರು ಸದರಿ ವಾಹನದ ಮಾಲೀಕತ್ವದ ವಿವರವುಳ್ಳ "ಬಿ" ವಹಿ ಪ್ರತಿಯನ್ನು ಪಡೆದು, ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ಇದನ್ನು ಪರಿಶೀಲಿಸಲಾಗಿ, ವಾಹನವು ಪಿ. ಮಹದೇವಸ್ವಾಮಿ ಬಿನ್ ಪುಟ್ಟಯ್ಯ ನಂ. 1, ಬಿಳುಗಲಿ ಗ್ರಾಮ, ನಂಜನಗೂಡು ತಾಲ್ಲೂಕು ಇವರ ಒಡೆತನದಲ್ಲಿರುವುದು ದೃಢಪಟ್ಟಿರುತ್ತದೆ. ಅರ್ಜಿದಾರರು ವಾಹನದ ಮಾಲೀಕರು ಸ್ವತಃ ದಿನಾಂಕ:20.11.07ರಂದು ಪ್ರಾಧಿಕಾರಕ್ಕೆ ಸಲ್ಲಿಸಿರುವ ಮನವಿಯಲ್ಲಿ ಅವರ ತಿಳುವಳಿಕೆಯಲ್ಲಿ ಈ ಕೃತ್ಯ ನಡೆದಿರುವುದು ಸ್ಪಷ್ಟವಾಗಿ ಕಂಡುಬಂದಿರುತ್ತದೆ.

ಲಭ್ಯವಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ, ದಿನಾಂಕ:14-10-2007ರಂದು ನಂಜನಗೂಡು ತಾಲ್ಲೂಕು, ಬಿಳುಗ ಗ್ರಾಮದ ಮುರುಡ ಬಸವೇಶ್ವರ ದೇವಸ್ಥಾನದ ಬಳಿ ಟಿ.ವಿ.ಎಸ್ ಸ್ಟಾರ್ ಸಿಟಿ ಸಂಖ್ಯೆ:KA-09/EG-3318 ರಲ್ಲಿ ಅಕ್ರಮವಾ 17.280 ಲೀ. ಮದ್ಯವನ್ನು ಯಾವುದೇ ರಹದಾರಿಯಿಲ್ಲದೆ ಹೊಂದಿ, ಸಾಗಾಣಿಕೆ ಮಾಡುತ್ತಿದ್ದುದನ್ನು ಸ್ವತಃ ವಾಹನದ ಮಾಲೀಕರ ಒಪ್ಪಿಕೊಂಡಿರುತ್ತಾರೆ. ಆದ ಕಾರಣ ಈ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದ ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/202/07-08, ದಿನಾಂಕ:8ನೇ ಮೇ, 2009

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಬಿ) ರ ಪ್ರಕಾರ ಅನುಸರಿಸಬೇಕಾದ ಕ್ರಮಗಳನ್ನೆಲ್ಲಾ ಅನುಸರಿಸಿದ ನಂತ ಕಲಂ 43(ಎ)(2) ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಆರಕ್ಷಕ ಉಪ ನಿರೀಕ್ಷಕರು, ಬದನವಾಳು ಪೋಲೀಸ ಠಾಣೆ, ನಂಜನಗೂಡು ತಾಲ್ಲೂಕು ಇವರ ಪ್ರಮಾವ ಸಂ:148/07, ದಿ:14-10-2007ರಂದು ವಶಪಡಿಸಿಕೊಂಡ ಸಂಖ್ಯೆ:KA-09/EG 3318 ನೋಂದಣಿ ಟಿ.ವಿ.ಎಸ್ ಸ್ಟಾರ್ ಸಿಟಿ ವಾಹನವನ್ನು (17.280 ಲೀ. ಮದ್ಯವನ್ನು ಈಗಾಗಲೇ ಸರ್ಕಾರಕ್ಕೆ ಮುಟ್ಟುಗೋಲ ಹಾಕಿಕೊಳ್ಳಲಾಗಿರುತ್ತದೆ) ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಲಾಗಿದೆ.

(ಈ ಆದೇಶವನ್ನು ಇಂದು ಅಂದರೆ 2009ನೇ ಇಸವಿಯ ಮೇ ತಿಂಗಳ 8ನೇ ತಾರೀಖಿನಂದು ವಿಷಯ ನಿರ್ವಾಹಕರಿ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಪ್ರಾಧಿಕಾರದ ಮೊಹರಿನೊಂದಿಗೆ ಹೊರಡಿಸಲಾಗಿದೆ.)

ಈ ಆದೇಶವು ಇಂದಿನಿಂದ 30 ದಿನಗಳ ನಂತರ ಜಾರಿಗೆ ಬರುವುದು.

ಡಾ॥ ವೈ. ಮಂಜುನಾಥ್

ಪಿ.ಆರ್.619

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ಹಾಗೂ
ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಕರ್ನಾಟಕ ವಿಧಾನಸಭೆ

ಸಂಖ್ಯೆ: ವಿಸಸ/ಶಾರಶಾ/24/ಸಿಎ/2008-09, ದಿನಾಂಕ:10ನೇ ಜುಲೈ, 2009

ವಿಷಯ: ವಿಧಾನಸಭಾ ಸದಸ್ಯರ ವಿಳಾಸದ ಬದಲಾವಣೆ.

ಕುಷ್ಟಗಿ ವಿಧಾನಸಭಾ ಕ್ಷೇತ್ರದ ಮಾನ್ಯ ಸದಸ್ಯರಾದ ಶ್ರೀ ಅಮರೇಗೌಡ ಎಲ್. ಪಾಟೀಲ್ ಬಯ್ಯಾಪುರ ಅವರ ಕೆಳಕಂಡಂತೆ ತಮ್ಮ ವಿಳಾಸವನ್ನು ಬದಲಾಯಿಸಿರುತ್ತಾರೆ.

ಶ್ರೀ ಅಮರೇಗೌಡ ಎಲ್. ಪಾಟೀಲ್ ಬಯ್ಯಾಪುರ

ವಿಧಾನಸಭಾ ಸದಸ್ಯರು, ಚೌಡಕಿ ಬಡಾವಣೆ, ಕೊಪ್ಪಳ ರಸ್ತೆ, ಕುಷ್ಟಗಿ, ಕೊಪ್ಪಳ ಜಿಲ್ಲೆ.

ಆದಕಾರಣ, ಮಾನ್ಯ ಸದಸ್ಯರಿಗೆ ಇನ್ನು ಮುಂದೆ ಕಳುಹಿಸಲಾಗುವ ಎಲ್ಲಾ ಕಾಗದ ಪತ್ರಗಳನ್ನು ಮೇಲ್ಕಂಡ ವಿಳಾಸ ಕಳುಹಿಸಿಕೊಡಬೇಕೆಂದು ಕೋರಲು ನಿರ್ದೇಶಿತನಾಗಿದ್ದೇನೆ.

ಕೆ.ಪಿ. ಗೋಪಿಕೃಷ್ಣ

ಪಿ.ಆರ್.649

ಅಧೀನ ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ.

ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ಉತ್ತರ ಕನ್ನಡ, ಕಾರವಾರ

ಪತ್ರಿಕಾ ಪ್ರಕಟಣೆ

ನಂ.ಜಿಸಕಅ:ಕಾ.ತ.ಬೇ:ಪ್ರಕಟಣೆ:ಎಸ್-4:ಸಿಆರ್13:09-10, ದಿನಾಂಕ:29ನೇ ಜೂನ್, 2009

ವಿಷಯ:2009-10ನೇ ಸಾಲಿನ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ ಕಾನೂನು ಪದವೀಧರರಿಗೆ ತರಬೇತಿ ಮತ್ತು ಧ ಸಹಾಯ ನೀಡುವ ಬಗ್ಗೆ.

2009-10ನೇ ಸಾಲಿಗೆ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ ನಿರುದ್ಯೋಗಿ ಕಾನೂನು ಪದವೀಧರರಿಗೆ ಸ್ವತಂತ್ರವಾಗಿ ವಕೀಲ ವೃತ್ತಿ ಪ್ರಾರಂಭಿಸಲು ಸಹಾಯವಾಗುವಂತೆ ಪ್ರತಿಯೊಬ್ಬ ಕಾನೂನು ಪದವೀಧರರಿಗೆ 4 ವರ್ಷಗಳ ತರಬೇತಿ ಮತ್ತು ಬಾರ್ ಕೌನ್ಸಿಲ್‌ನಲ್ಲಿ ಹೆಸರು ನೊಂದಾಯಿಸಲು ಹಾಗೂ ಕಾನೂನು ಗ್ರಂಥಗಳನ್ನು ಖರೀದಿಸಲು ರೂ.5000-00 ಮೀರದಂತೆ ಧನ ಸಹಾಯ ನೀಡಲಾಗುತ್ತದೆ. ಧನ ಸಹಾಯ ಪಡೆಯುವ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ ನಿರುದ್ಯೋಗಿ ಕಾನೂನು ಪದವೀಧರರಿಗೆ ವಾರ್ಷಿಕ ವರಮಾನ ರೂ.18000-00 ಮೀರದಂತೆ ಇರುವ ಅಭ್ಯರ್ಥಿಗಳು ಸದರ ಸೌಲಭ್ಯಕ್ಕೆ ಅರ್ಹರಿರುತ್ತಾರೆ. ಆದ್ದರಿಂದ ತರಬೇತಿ ಪಡೆಯಲಿಚ್ಛಿಸುವ ಅರ್ಹ ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು ದಿನಾಂಕ:31.09.2009 ರೊಳಗಾಗಿ ಸಂಬಂಧಪಟ್ಟ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ಕಾರವಾರ ಇಲ್ಲಿಗೆ ಅರ್ಜಿ ಸಲ್ಲಿಸುವುದು. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳವರ ಕಛೇರಿ ಕಾರವಾರ/ ಸಂಬಂಧಪಟ್ಟ ತಾಲ್ಲೂಕಿನ ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಯವರಿಗೆ ಸಂಪರ್ಕಿಸಬಹುದು.

1) ಅರ್ಜಿದಾರರ ಗರಿಷ್ಟ ವಯೋಮಿತಿಯು ಅರ್ಜಿ ಸ್ವೀಕರಿಸಿದ ಕೊನೆಯ ದಿನಾಂಕದಂದು 35 ವರ್ಷ ಮೀರಿರಬಾರದು.

2) ಆಯ್ಕೆಯಾದ ಅಭ್ಯರ್ಥಿಗೆ ಡಿಸ್ಟ್ರಿಕ್ ಪಬ್ಲಿಕ್ ಪ್ರಾಸಿಕ್ಯೂಟರ್ ಗವರ್ನಮೆಂಟ್ ಅಡ್ವೋಕೇಟ್ ಅಥವಾ 20 ವರ್ಷಕ್ಕಿಂತ ಹೆಚ್ಚಿಗೆ ವಕೀಲ ವೃತ್ತಿ ನಡೆಸುತ್ತಿರುವ ವಕೀಲರ ಮುಖಾಂತರ ತರಬೇತಿ ನೀಡಲಾಗುವುದು.

3) ತರಬೇತಿಗಾಗಿ ಆಯ್ಕೆ ಮಾಡಿಕೊಳ್ಳಬೇಕಾದ ಅಭ್ಯರ್ಥಿಯು ಅರ್ಜಿ ಸ್ವೀಕರಿಸಲು ನಿಗದಿಪಡಿಸಿದ ತಾರೀಖಿನ ಹಿಂದೆ 2 ವರ್ಷಗಳ ವಕೀಲ ವೃತ್ತಿ ಮಾಡಿರಬೇಕು.

4) ಅರ್ಜಿ ಸಲ್ಲಿಸುವಾಗ ಎಲ್ಲಾ ದಾಖಲಾತಿ ಪತ್ರಗಳನ್ನು ದೃಢೀಕರಿಸಿ ಸಲ್ಲಿಸುವುದು.

ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳ
ಪಿ.ಆರ್.594 ಉತ್ತರ ಕನ್ನಡ, ಕಾರವಾರ.

ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಧಿಕಾರಿಗಳ ಕಛೇರಿ, ಉತ್ತರ ಕನ್ನಡ, ಕಾರವಾರ

ಪ್ರಕಟಣೆ

ಸಂಖ್ಯೆ: ಬಿಸಿಎಂ:ನಿಲಯ:ಕಾತಭ:ಸಿಆರ್-16:2009-10, ದಿನಾಂಕ:20ನೇ ಜೂನ್, 2009

ವಿಷಯ: 2009-10ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಾನೂನು ಪದವೀಧರರಿಗೆ ತರಬೇತಿ ನೀಡುವ ಕುರಿತು.

2009-10ನೇ ಸಾಲಿನಲ್ಲಿ ಉತ್ತರ ಕನ್ನಡ ಜಿಲ್ಲೆಯ ಹಿಂದುಳಿದ ವರ್ಗಗಳ ಕಾನೂನು ಪದವೀಧರರಿಗೆ ವಕೀಲ ವೃತ್ತಿ ಮತ್ತು ಜ್ಯೂಡಿಷಿಯಲ್ ಸೇವೆಗೆ ಸಂಬಂಧಿಸಿದಂತೆ ನ್ಯಾಯಾಡಳಿತದಲ್ಲಿ 4 ವರ್ಷಗಳ ತರಬೇತಿ ನೀಡುವ ಕುರಿತು ಹಿಂದುಳಿದ ವರ್ಗಗಳ ಕಾನೂನು ಪದವೀಧರರಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಆಸಕ್ತ ಹಿಂದುಳಿದ ವರ್ಗಗಳ ಕಾನೂನು ಪದವೀಧರರು ಈ ಕೆಳಕಂಡ ನಿಬಂಧನೆಗಳಿಗೊಳಪಟ್ಟು ಅರ್ಜಿಗಳನ್ನು ದಿನಾಂಕ:20.07.2009ರ ಒಳಗಾಗಿ ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಧಿಕಾರಿಗಳು, ಉತ್ತರ ಕನ್ನಡ, ಕಾರವಾರ ರವರಿಗೆ ಸಲ್ಲಿಸತಕ್ಕದ್ದು. ನಿಗದಿತ ಅರ್ಜಿ ನಮೂನೆಗಳನ್ನು ಈ ಕಛೇರಿಯಿಂದ ಪಡೆಯಬಹುದಾಗಿದೆ.

ನಿಬಂಧನೆಗಳು:

1) ಅಭ್ಯರ್ಥಿಯು ಕಾನೂನು ಪದವಿ ಮಾಡಿರಬೇಕು. ಹಿಂದುಳಿದ ವರ್ಗಕ್ಕೆ ಸೇರಿದವರಾಗಿರಬೇಕು. ರಾಜ್ಯದ ನಿವಾಸಿಯಾಗಿರಬೇಕು. ವಕೀಲಿ ವೃತ್ತಿ ಅಭ್ಯಾಸ (ಪ್ರಾಕ್ಟೀಸ್) ನಿಗದಿಪಡಿಸಿರುವ ಅರ್ಹತೆ ಹೊಂದಿದ್ದು ತರಬೇತಿಗೆ ಅರ್ಜಿ ಸಲ್ಲಿಸುವ ದಿನಾಂಕಕ್ಕಿಂತ ಮುಂಚಿತವಾಗಿ ಎರಡು ವರ್ಷದೊಳಗೆ ಬಾರ್ ಕೌನ್ಸಿಲ್‌ನಲ್ಲಿ ಹೆಸರು ನೋಂದಾಯಿಸಿಕೊಂಡಿರತಕ್ಕದ್ದು.

2) ಕಾನೂನು ತರಬೇತಿ ಭತ್ಯೆಗಾಗಿ ಜಿಲ್ಲೆಯಿಂದ ಹತ್ತು (10) ಅಭ್ಯರ್ಥಿಗಳನ್ನು ಮಾತ್ರ ಆಯ್ಕೆ ಮಾಡಲಾಗುವುದು. ಪ್ರವರ್ಗ-1, 2ಎ, 3ಎ, 3ಬಿ, (3ಬಿ ಯಲ್ಲಿ ಕ್ರಿಶ್ಚಿನ್ ಮತ್ತು ಜೈನರುಗಳನ್ನು ಹೊರತುಪಡಿಸಿ)

3) ಅಭ್ಯರ್ಥಿಗಳ ಪಾಲಕರು/ ಪೋಷಕರ ವಾರ್ಷಿಕ ಆದಾಯ ಮಿತಿ ರೂ.15,000.00 ಒಳಗಿರಬೇಕು. ಪ್ರವರ್ಗ 1 ರಡಿಯಲ್ಲಿ ಬರುವ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಆದಾಯ ಮಿತಿ ಇರುವುದಿಲ್ಲ.

4) ತರಬೇತಿ ಅವಧಿಯು ನಾಲ್ಕು ವರ್ಷಗಳು ತರಬೇತಿ ಅವಧಿಯಲ್ಲಿ ಮಾಹೆಯಾನ ರೂ.1,000.00 ದಂತೆ ತರಬೇತಿ ಭತ್ಯೆ ನೀಡಲಾಗುವುದು.

5) ಪ್ರವರ್ಗ-1 ಕ್ಕೆ ಸೇರಿದ ಅಭ್ಯರ್ಥಿಗಳಿಗೆ ವಯೋಮಿತಿ 31 ವರ್ಷಗಳು, ಇತರೇ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ 30 ವರ್ಷಗಳು ಮೀರಿರಬಾರದು.

6) ಅಭ್ಯರ್ಥಿ ಕಾನೂನು ಪದವಿ ಮುಗಿಸಿ ಅರ್ಜಿ ಸ್ವೀಕರಿಸಲು ಕೊನೆಯ ದಿನಾಂಕಕ್ಕೆ ಎರಡು ವರ್ಷ ಒಳಗೊಂಡಿರಬೇಕು.

7) ಆಯ್ಕೆಯಾದ ಅಭ್ಯರ್ಥಿಗಳು ಜಿಲ್ಲಾ ಪಬ್ಲಿಕ್ ಪ್ರಾಸಿಕ್ಯೂಟರ್, ಸರ್ಕಾರಿ ವಕೀಲರು ಇತರೇ ಯಾವುದೇ 20 ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರುವ ವಕೀಲರ ಹತ್ತಿರ ತರಬೇತಿಗೆ ನಿಯೋಜಿಸಲಾಗುವುದು.

8) ಆಯ್ಕೆಯಾದ ಅಭ್ಯರ್ಥಿಗಳು ಸುಳ್ಳು ಆದಾಯ, ಜಾತಿ ಪ್ರಮಾಣ ಪತ್ರ ನೀಡಿ ಆಯ್ಕೆಯಾಗಿರುವುದು ಕಂಡುಬಂದಲ್ಲಿ ಶಿಕ್ಷೆಗೆ ಗುರಿಪಡಿಸಿ ತರಬೇತಿ ಭತ್ಯೆ ನೀಡಿರುವ ಒಟ್ಟು ಹಣದ ಜೊತೆಗೆ ಶೇಕಡಾ 10% ಬಡ್ಡಿ ಸೇರಿ ಕಂದಾಯ ಬಾಕಿ ರೂಪದಲ್ಲಿ ವಸೂಲು ಮಾಡಲಾಗುವುದು.

9) ತರಬೇತಿಗೆ ಆಯ್ಕೆಯಾದ ಅಭ್ಯರ್ಥಿಗಳು ತರಬೇತಿಯನ್ನು ಮಧ್ಯಂತರದಲ್ಲಿ ಬಿಟ್ಟು ಹೋದಲ್ಲಿ ಪಡೆಯಲಾದ ಭತ್ಯೆಯ ಒಟ್ಟಿಗೆ ಶೇಕಡಾ 10%ರಷ್ಟು ಬಡ್ಡಿ ಸೇರಿಸಿ ಸರ್ಕಾರಕ್ಕೆ ಭರಣ ಮಾಡುವುದು.

10) ಅಪೂರ್ಣ ಹಾಗೂ ಸಕಾಲದಲ್ಲಿ ಬಾರದ ಅರ್ಜಿಗಳನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸಲಾಗುವುದು.

ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು
ಅಲ್ಪಸಂಖ್ಯಾತರ ಅಧಿಕಾರಿ, ಕಾರವಾರ.

ಪಿ.ಆರ್.593

ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳ ಕಛೇರಿ, ಚಿಕ್ಕಮಗಳೂರು

ಪ್ರಕಟಣೆ

ಸಂಖ್ಯೆ: ಜಿಸಕಅ:ಎಸ್‌ಡಬ್ಲ್ಯೂ7:ಸಿಆರ್:8:2009–10, ದಿನಾಂಕ:7ನೇ ಜುಲೈ, 2009

ವಿಷಯ: ಪ.ಜಾತಿಗೆ ಸೇರಿದ ಕಾನೂನು ಪದವೀಧರರಿಗೆ ನ್ಯಾಯಾಂಗ ಆಡಳಿತದಲ್ಲಿ ತರಬೇತಿ ನೀಡುವ ಕುರಿತು.

ಉಲ್ಲೇಖ: ಸರ್ಕಾರದ ಆದೇಶದ ಸಂಖ್ಯೆ: ಎಸ್‌ಡಬ್ಲ್ಯೂ 68:89: ದಿನಾಂಕ:02.11.1990.

ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಪರಿಶಿಷ್ಟ ಕಾನೂನು ಪದವೀಧರರಿಗೆ 2009–10ನೇ ಸಾಲಿನ ಆಡಳಿತ ನ್ಯಾಯಾಧೀಕರಣದಲ್ಲಿ 4 ವರ್ಷದ ತರಬೇತಿಯನ್ನು ನೀಡುವ ಸಲುವಾಗಿ ಅರ್ಹ ವಿದ್ಯಾರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಕರೆಯಲಾಗಿದೆ. ಈ ತರಬೇತಿಯನ್ನು ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಈ ಕೆಳಕಂಡ ಅರ್ಹತೆಯನ್ನು ಹೊಂದಿರಬೇಕು.

1) ಅಭ್ಯರ್ಥಿಗಳು ಪರಿಶಿಷ್ಟ ಜಾತಿಗೆ ಸೇರಿದವರಾಗಿರಬೇಕು.

2) ಈ ಅಭ್ಯರ್ಥಿಗಳು ಆಡಳಿತ ನ್ಯಾಯಾಧೀಕರಣದಲ್ಲಿನ ವೃತ್ತಿಯನ್ನು ಕೈಗೊಳ್ಳಲು ಅರ್ಹತೆ ಹೊಂದುವ ಕಾನೂನು ಪದವಿಯನ್ನು ಪಡೆದಿರಬೇಕು.

3) ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯ ಮೂಲಕ ಅಭ್ಯರ್ಥಿಯನ್ನು ಸಂದರ್ಶನಕ್ಕೆ ಕರೆದು ಆಯ್ಕೆ ಮಾಡಲಾಗುವುದು ಹಾಗೂ ಅವರನ್ನು 4 ವರ್ಷದ ತರಬೇತಿಗೆ ಸರ್ಕಾರಿ ಅಭಿಯೋಜಕರು ಹಾಗೂ ವಕೀಲರ ಬಳಿ ತರಬೇತಿಗೆ ನಿಯೋಜಿಸಲಾಗುವುದು.

ಆದರೆ ಬ್ಯಾಂಕು ನಿಗದಿಪಡಿಸಿದ ಅವಧಿಯೊಳಗೆ ಕ್ರಮವಿಡದೆ ಉಲ್ಲೇಖ (5)ರ ದಿನಾಂಕ:08.11.2008, 26.02.2009ರ ಪತ್ರಗಳಲ್ಲಿ ಕಾಲಾವಕಾಶವನ್ನು ಕೋರಿದ್ದಿತು. ಅವರ ಕೋರಿಕೆಯನ್ನು ಪರಿಗಣಿಸಿ ಉಲ್ಲೇಖ (4)ರ ಈ

ಗೀಯ ಪತ್ರಗಳಲ್ಲಿ ಎರಡು ಬಾರಿ ಅವಧಿಯನ್ನು ವಿಸ್ತರಿಸಿ ಪತ್ತಿನ ಸಹಕಾರ ಸಂಘವಾಗಿ ಪರಿವರ್ತಿಸಿಕೊಳ್ಳಲು ಸಾಕಷ್ಟು ಲಾವಕಾಶ ನೀಡಲಾಗಿತ್ತು. ಆದರೆ ಬ್ಯಾಂಕು ಪತ್ತಿನ ಸಹಕಾರ ಸಂಘವಾಗಿ ಪರಿವರ್ತಿಸಿಕೊಳ್ಳಲು ಯಾವುದೇ ಕ್ರಮವಿಡದೆ ತ್ತೆ ವಿನಾಕಾರ ಕಾಲಾವಕಾಶ ಕೋರಿದೆ. ಪದೇ ಪದೇ ಕಾಲಾವಕಾಶ ಕೋರಿ ಪತ್ರ ಬರೆಯುವುದನ್ನು ಬಿಟ್ಟು ಬೇರಾವುದೇ ು ಆಗಿರುವುದಿಲ್ಲ. ಆದ ಕಾರಣ ಉಲ್ಲೇಖ (3)ರ ಈ ಕಛೇರಿಯ ಆದೇಶದಲ್ಲಿ ಆದೇಶಿಸಿರುವಂತೆ ಈ ಸಂಸ್ಥೆಯನ್ನು ಮತ್ತೆ ಮಾಪನೆಗೊಳಿಸಲು ತೀರ್ಮಾನಿಸಿದೆ. ನಂತರದಲ್ಲಿ ಸರ್ವ ಸದಸ್ಯರ ಸಭೆ ಕರೆದು ಪತ್ತಿನ ಸಹಕಾರ ಸಂಘವಾಗಿ ರಿವರ್ತಿಸಿಕೊಳ್ಳಲು ಅಭಿಪ್ರಾಯ/ ತೀರ್ಮಾನ ತೆಗೆದುಕೊಂಡಲ್ಲಿ ಸಮಾಪನಾಧಿಕಾರಿಯವರು ಪ್ರಸ್ತಾವನೆ ಸಲ್ಲಿಸಲು ಸೂಚಿಸಿ ಕೆಳಕಂಡ ಆದೇಶ ಹೊರಡಿಸಿದೆ.

ಆದೇಶ

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 72(2)ರಲ್ಲಿ ಸಹಕಾರ ಸಂಘಗಳ ನಿಬಂಧಕರಿಗೆ ದತ್ತವಾದ ಧಿಕಾರದಂತೆ ಧಾರವಾಡ ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಬ್ಯಾಂಕ್ ಲಿ., ಹುಬ್ಬಳ್ಳಿ ಇದನ್ನು ಸಮಾಪನೆಗೊಳಿಸಿ ಕಲಂ 3(1)ರ ರೀತ್ಯಾ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಧಾರವಾಡ ಉಪವಿಭಾಗ ಇವರನ್ನು ಮಾಪನಾಧಿಕಾರಿಯನ್ನಾಗಿ ಹೆಚ್ಚುವರಿ ಪ್ರಭಾರದಲ್ಲಿ ನೇಮಿಸಲಾಗಿದೆ.

ಸಮಾಪನಾಧಿಕಾರಿಗಳು ಕೂಡಲೇ ಬ್ಯಾಂಕಿನ ಪ್ರಭಾರವನ್ನು ವಹಿಸಿಕೊಂಡು ಈ ಕಛೇರಿಗೆ ವರದಿ ಮಾಡುವುದು ಾಗೂ ಸಹಕಾರ ಸಂಘಗಳ ಕಾಯ್ದೆ, ನಿಯಮ ಮತ್ತು ಈ ಕಛೇರಿಯ ನಿರ್ದೇಶನ, ಸುತ್ತೋಲೆಗಳನುಸಾರವಾಗಿ ಬ್ಯಾಂಕಿನ ಸ್ತಿ-ಜವಾಬ್ದಾರಿಗಳ ವಿಲೇವಾರಿಗೆ ಕ್ರಮವಿಡತಕ್ಕದ್ದು.

ಈ ಆದೇಶವನ್ನು ನನ್ನ ಸಹಿ ಹಾಗೂ ಕಛೇರಿ ಮೊಹರಿನೊಂದಿಗೆ ದಿನಾಂಕ:11.05.2009ರಂದು ಹೊರಡಿಸಿದೆ.

ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

ಪಿ.ಆರ್.425

ಕೃಷಿ ಮಾರಾಟ ಇಲಾಖೆ

ಕೃಷಿ ಮಾರಾಟ ನಿರ್ದೇಶಕರ ಕಛೇರಿ, ನಂ.16, 11ನೇ ರಾಜಭವನ ರಸ್ತೆ, ಪಿ.ಬಿ.ನಂ.5309, ಬೆಂಗಳೂರು

ಅಧಿಸೂಚನೆ

ಸಂಖ್ಯೆ: ಕೃಮಾಇ/26/ಚುನಾವ/2005, ಬೆಂಗಳೂರು, ದಿನಾಂಕ:29/30ನೇ ಜೂನ್, 2009

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ ಕಲಂ 11ರ ಉಪ ಪ್ರಕರಣ (1)(viii)ರನ್ವಯ ಗಂಗಾವತಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಮಾಇ/26/ಚುನಾವ/2005, ದಿನಾಂಕ:25.09.2007ರಲ್ಲಿ ಹಾಗೂ ಮಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಧಿಸೂಚನೆ ಸಂಖ್ಯೆ: ಕೃಮಾಇ/26/ಚುನಾವ/2005, ದಿನಾಂಕ:22.01.2008ರಲ್ಲಿ ಮಾಡಲಾಗಿದ್ದ ನಾಮನಿರ್ದೇಶನಗಳನ್ನು ಡಳಿತಾತ್ಮಕ ಹಿತದೃಷ್ಟಿಯಿಂದ ರದ್ದುಪಡಿಸುತ್ತ, ಸದರಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಕೆಳಕಂಡ ಅಧಿಕಾರಿಗಳನ್ನು ಈ ಕ್ಷಣದಿಂದ ಜಾರಿಗೆ ಬರುವಂತೆ ಇಲಾಖಾ ಪ್ರತಿನಿಧಿ ಸದಸ್ಯರನ್ನಾಗಿ ನಾಮಕರಣ ಮಾಡಿದ್ದೇನೆ.

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಸಮಿತಿಯ ಹೆಸರು	ಸದಸ್ಯರನ್ನಾಗಿ ನಾಮಕರಣ ಮಾಡಲಾಗಿರುವ ಅಧಿಕಾರಿ
1.	ಕೊಪ್ಪಳ	ಗಂಗಾವತಿ	ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ರಾಯಚೂರು.
2.	ದಕ್ಷಿಣ ಕನ್ನಡ	ಮಂಗಳೂರು	ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಂಗಳೂರು.

ಜಿ. ರಾಮಚಂದ್ರ
ನಿರ್ದೇಶಕರು.

ಪಿ.ಆರ್.591

ಕಾರ್ಮಿಕ ಪರಿಹಾರ ಆಯುಕ್ತರವರ ನ್ಯಾಯಾಲಯ, ಉಪವಿಭಾಗ-2, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಐ.ಟಿ.ಐ. ಆವರಣ, ಬೆಂಗಳೂರು-29

ಪ್ರಕರಣ ಸಂಖ್ಯೆ: ಡಬ್ಲ್ಯೂಸಿಎ/ಬಿ2/ಎಫ್.ಸಿ./ಸಿಆರ್-31/2007, ದಿನಾಂಕ:13ನೇ ಜುಲೈ, 2009

ಅರ್ಜಿದಾರರು

1) ಶ್ರೀಮತಿ ನಸ್ರೀನ್ ಕೋಂ ಲೇ. ಮೊಹಮ್ಮದ್ ಬಾಬು @ ಬಾಬು (36 ವರ್ಷ)

2) ರೇಷ್ಮಾ ಬಿನ್ ಲೇ. ಮೊಹಮ್ಮದ್ ಬಾಬು @ ಬಾಬು (15 ವರ್ಷ)

ವಿರುದ್ಧ

ಪ್ರತಿವಾದಿಗಳು

1) ಮೆ: ಶರ್ಮ ಟ್ರಾನ್ಸ್‌ಪೋರ್ಟ್ಸ್, ನಂ.328, ಸಂಗೀತ ಭವನ, ಬಿಎಸ್‌ಪಿ ರಸ್ತೆ, ಕಲಾಸಿಪಾಳ್ಯಂ, ಬೆಂಗಳೂರು-2.

2) ದಿ ಓರಿಯಂಟಲ್ ಇನ್ಸೂರೆನ್ಸ್ ಕಂ.ಲಿ.,10/1, 1ನೇ ಮಹಡಿ, 3ನೇ ಕ್ರಾಸ್, ಚಿಕ್ಕಣ್ಣ ಗಾರ್ಡನ್, ಶಂಕರಮಠ, ಕಾಂಪೌಂಡ್, ಚಾಮರಾಜಪೇಟೆ, ಬೆಂಗಳೂರು-4.

3) ಅಸ್ಮಾ ಬಿನ್ ಲೇ. ಮೊಹಮ್ಮದ್ ಬಾಬು @ ಬಾಬು (13 ವರ್ಷ)

4) ಮಾಸ್ಟರ್ ವಾಸಿಂ ಪಾಷ ಬಿನ್ ಲೇ. ಮೊಹಮ್ಮದ್ ಬಾಬು @ ಬಾಬು (11 ವರ್ಷ)

ವಿಳಾಸ: ನಂ.5, 3ನೇ ಕ್ರಾಸ್, ಗುಡ್ಡದಹಳ್ಳಿ, ಶಾಮಣ್ಣನಗರ, ಮೈಸೂರು ರಸ್ತೆ, ಬೆಂಗಳೂರು-26.

3) ಗುಲ್‌ಶೀರ್ ಉನ್ನೀಸಾ ಕೋಂ ಲೇ. ಬಾಬು @ ಮೊಹಮ್ಮದ್ ಬಾಬು (39 ವರ್ಷ)

4) ಮುಜಾಹಿದ್ ಪಾಷ ಬಿನ್ ಬಾಬು @ ಮೊಹಮ್ಮದ್ ಬಾಬು (17 ವರ್ಷ)

5) ರಫಿಯಾ ಬಾನು ಬಿನ್ ಬಾಬು @ ಮೊಹಮ್ಮದ್ ಬಾಬು (16 ವರ್ಷ)

6) ಫಸಿಯಾ ತಬಸುಮ್ @ ಪನೀರ ಬಿನ್ ಬಾಬು @ ಮೊಹಮ್ಮದ್ ಬಾಬು (13 ವರ್ಷ)

ವಿಳಾಸ: 3 ರಿಂದ 6: ನಂ.91, ಕಂಟಿಪುರ, ಕುಂಬಳಗೋಡು ಪೋಸ್ಟ್, ಬೆಂಗಳೂರು.

ಪ್ರಕಟಣೆ

ಅರ್ಜಿದಾರರಾದ ನಸ್ರೀನ್, ರೇಷ್ಮಾ, ಅಸ್ಮಾ, ವಾಸಿಂ ಪಾಷ ಮತ್ತು ಪ್ರತಿವಾದಿಗಳಾದ ಗುಲ್‌ಶೀರ್ ಉನ್ನೀಸಾ, ಮುಜಾಹಿದ್ ಪಾಷ, ರಫಿಯಾ, ಫಸಿಯಾ ತಬಸುಮ್ ಇವರುಗಳು ಈ ನ್ಯಾಯಾಲಯಕ್ಕೆ ಅರ್ಜಿಯೊಂದನ್ನು ಸಲ್ಲಿಸಿ, ದಿವಂಗತ ಮೊಹಮ್ಮದ್ ಬಾಬು @ ಬಾಬು ಇವರು ಪ್ರತಿವಾದಿ-1 ಇವರ ಬಳಿ ಕೆಲಸ ನಿರ್ವಹಿಸುತ್ತಿದ್ದಾಗ ಅಪಘಾತ ಹೊಂದಿ ಮೃತಪಟ್ಟಿರುತ್ತಾರೆಂದು ತಿಳಿಸಿರುತ್ತಾರೆ. ಅಲ್ಲದೇ ತಾವು ಮೃತರ ಅವಲಂಬಿತರಾದ್ದರಿಂದ ತಮಗೆ ಕಾಯ್ದೆಯನ್ವಯ ಪರಿಹಾರದ ಹಣವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯವನ್ನು ಕೋರಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ ಹಾಗೂ ಅರ್ಜಿದಾರರಲ್ಲದೇ ತಾವೇನಾದರೂ ಮೃತರ ಅವಲಂಬಿತರು ಎಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೆ ಅಂತಹವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನದೊಳಗಾಗಿ ತಮ್ಮ ಆಕ್ಷೇಪಣೆ ಅಥವಾ ಅರ್ಜಿಗಳಾಗಲೀ ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಕ್ಲೈಮ್ ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು. ತದನಂತರ ಬಂದ ಆಕ್ಷೇಪಣೆ ಅಥವಾ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಕಾರ್ಮಿಕ ಪರಿಹಾರ ಆಯುಕ್ತರು,
ಉಪವಿಭಾಗ-2, ಬೆಂಗಳೂರು.

ಪಿ.ಆರ್.647

ಸಹಾಯಕ ಕಾರ್ಮಿಕ ಆಯುಕ್ತರು ಹಾಗೂ ಉಪಧನ ಪಾವತಿ ಕಾಯ್ದೆಯಡಿ ನಿಯಂತ್ರಣಾಧಿಕಾರಿಯವರ ನ್ಯಾಯಾಲಯ, ವಿಭಾಗ-4, ಬೆಂಗಳೂರು

ಸಂಖ್ಯೆ:ಪಿಜಿಎ/ಎಸ್.ಆರ್-77/2007-08

ಅರ್ಜಿದಾರರು

ಶ್ರೀಮತಿ ಲಕ್ಷ್ಮಮ್ಮ ಕೋಂ ಲೇಟ್ ಚಿಕ್ಕಣ್ಣ, ನಂ.143, ಯಲಚೇನಹಳ್ಳಿ ಜೆ.ಪಿ.ನಗರ ಅಂಚೆ, ಕನಕಪುರ ಮುಖ್ಯ ರಸ್ತೆ, ಬೆಂಗಳೂರು-78.

ವಿರುದ್ಧ

ಪ್ರತಿವಾದಿಗಳು

ದಿ ಕಂಟ್ರೋಲರ್, ಪ್ರಿಂಟಿಂಗ್ & ಸ್ಟೇಷನರಿ, ಪ್ರಿಂಟಿಂಗ್ ಪ್ರೆಸ್, ಕೆ.ಎಸ್.ಆರ್.ಟಿ.ಸಿ. ಸೆಂಟ್ರಲ್ ಆಫೀಸ್, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು-27.

ಪ್ರಕಟಣೆ

ಸಾರ್ವಜನಿಕರಿಗೆ ಹಾಗೂ ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೇಲ್ಕಂಡ ಅರ್ಜಿದಾರರು ಈ ನ್ಯಾಯಾಲಯದಲ್ಲಿ ದಿನಾಂಕ:17.05.2007ರಂದು ಉಪಧನ ಪಾವತಿ ಕಾಯ್ದೆಯಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ, ಅವರ ಪತಿ ಲೇಟ್ ಚಿಕ್ಕಣ್ಣ ಇವರು ಪ್ರತಿವಾದಿ ಸಂಸ್ಥೆಯಲ್ಲಿ ತಮ್ಮ 28 ವರ್ಷ, 06 ತಿಂಗಳು, 11 ದಿನಗಳ ಕಾಲ ಸೇವೆ ಸಲ್ಲಿಸಿ, ದಿನಾಂಕ:31.05.1996 ರಂದು ಸೇವೆಯಿಂದ ನಿವೃತ್ತಿ ಹೊಂದಿ, ತದನಂತರ ದಿನಾಂಕ:17.02.2003 ರಂದು ಮರಣ ಹೊಂದಿದ್ದಾರೆಂದು ತಿಳಿಸಿ, ಪ್ರತಿವಾದಿಗಳಿಂದ ಕಾನೂನು ರೀತ್ಯಾ ಬರಬೇಕಾದ ವ್ಯತ್ಯಾಸದ ಉಪಧನವನ್ನು ಕೊಡಿಸಿಕೊಡಬೇಕೆಂದು ಕೋರಿರುತ್ತಾರೆ.

ಸದರಿ ದಾವೆಯ ವಿಚಾರಣೆ ನಡೆಯುತ್ತಿದ್ದು, ಈ ಬಗ್ಗೆ ಆದೇಶ ಹೊರಡಿಸಬೇಕಾಗಿರುವುದರಿಂದ ಮೇಲೆ ಸೂಚಿಸಿರುವ ಅರ್ಜಿಯನ್ನು ಹೊರತುಪಡಿಸಿ (ಜೀವಂತ ಸದಸ್ಯರು) ಬೇರೆ ಯಾರಾದರೂ ಸದರಿ ಕಾರ್ಮಿಕರಿಗೆ ಸಂಬಂಧಿಸಿದ ಶಾಸನಬದ್ಧ

ವಾರಸುದಾರರು ಎಂದು ಪರಿಗಣಿಸಲು ಪ್ರಾರ್ಥಿಸುವುದಾದಲ್ಲಿ ಅಂತಹವರು ಈ ಪ್ರಕಟಣೆಯನ್ನು ರಾಜ್ಯಪತ್ರದಲ್ಲಿ ಪ್ರಕಟಿಸಿದ 30 ದಿನಗಳೊಳಗಾಗಿ ಅಂತಹ ಆಕ್ಷೇಪಣೆಗಳನ್ನಾಗಲೀ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದೆಂದು ಈ ಮೂಲಕ ಸೂಚಿಸಲಾಗಿದೆ.

ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ದಿನಾಂಕ:15.07.2009

ಎ.ಹೆಚ್. ಉಮೇಶ
ಸಹಾಯಕ ಕಾರ್ಮಿಕ ಆಯುಕ್ತರು ಮತ್ತು
ನಿಯಂತ್ರಣಾಧಿಕಾರಿಗಳು, ಉಪಧನ ಪಾವತಿ
ಕಾಯ್ದೆ, ವಿಭಾಗ-4, ಬೆಂಗಳೂರು.

ಪಿ.ಆರ್.648

ಸಹಕಾರ ಇಲಾಖೆ

ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು ಇವರ ನಡವಳಿಗಳು

ಕ್ರ.ಸಂ.ಜೆಆರ್‌ಬಿ:ಸಮಾಪನೆ:10:2008-09, ದಿನಾಂಕ:13ನೇ ಮಾರ್ಚ್, 2009

ವಿಷಯ: ಸಮಾಪನೆಯಲ್ಲಿರುವ ಚಿತ್ರದುರ್ಗ ತಾಲ್ಲೂಕು ಸಣ್ಣ ಮತ್ತು ಅತಿ ಸಣ್ಣ ರೈತರ ಸಾಮೂಹಿಕ ಏತ ನೀರಾವರಿ ಸಹಕಾರ ಸಂಘ ನಿ., ಚಿತ್ರದುರ್ಗ ತಾಲ್ಲೂಕು ಇದರ ನೊಂದಣಿ ರದ್ಧತಿ ಬಗ್ಗೆ.

ಉಲ್ಲೇಖ:1) ಈ ಕಛೇರಿಯ ಸಮಾಪನಾ ಆದೇಶ ಸಂಖ್ಯೆ: ಜೆಆರ್‌ಬಿ/ಸಮಾಪನೆ/ 10/98-99, ದಿನಾಂಕ:01.08.1998.
2) ಸಹಕಾರ ಸಂಘಗಳ ಉಪನಿಬಂಧಕರು, ಚಿತ್ರದುರ್ಗ ಇವರ ಪತ್ರದ ಸಂಖ್ಯೆ: ಡಿಆರ್‌ಡಿ/ ಎಲ್‌ಕ್ಯೂಡಿ/ಸಿಆರ್-32/ 2003-04, ದಿನಾಂಕ:23.02.2005.

ಪ್ರಸ್ತಾವನೆ:

ಚಿತ್ರದುರ್ಗ ತಾಲ್ಲೂಕು ಸಣ್ಣ ಮತ್ತು ಅತಿ ಸಣ್ಣ ರೈತರ ಸಾಮೂಹಿಕ ಏತ ನೀರಾವರಿ ಸಹಕಾರ ಸಂಘ ನಿ., ಚಿತ್ರದುರ್ಗ ತಾಲ್ಲೂಕು, ಈ ಸಹಕಾರ ಸಂಘವು ನೊಂದಣಿ ಸಂಖ್ಯೆ: ಡಿಆರ್‌ಡಿ/ ಎಸ್‌ಇಬಿ/ ಆರ್‌ಸಿಎಸ್/81-82, ದಿನಾಂಕ:02.01.1982 ರಲ್ಲಿ ನೊಂದಣಿಯಾಗಿದ್ದು, ಈ ಸಂಘವು ಸಾಮೂಹಿಕ ಬೇಸಾಯಕ್ಕೆ ಸಂಬಂಧಿಸಿದಂತೆ ಸಂಘದ ವ್ಯಾಪ್ತಿಯಲ್ಲಿ ಬರುವ ಸದಸ್ಯರ ರೈತರ ಜಮೀನುಗಳಲ್ಲಿ ಕೊರೆಸಿದ ಕೊಳವೆಬಾವಿ ಹಾಗೂ ಪಂಪ್ ಸೆಟ್ ಮೋಟಾರ್‌ಗಳನ್ನು ಬರಗಾಲ ಪೀಡಿತ ಅಭಿವೃದ್ಧಿ ಯೋಜನಾವತಿಯಿಂದ ಅನುದಾನ ರೂಪದಲ್ಲಿ ಅನುದಾನ ನೀಡಲಾಗಿರುತ್ತದೆ. ಕಾಲಕ್ರಮೇಣ ಜಿಲ್ಲೆಯಲ್ಲಿ ಮಳೆ ಕಡಿಮೆಯಾಗಿ ಅಂತರ್ಜಲ ಕೊರತೆಯಿಂದಾಗಿ ಸಂಘದ ಕಾರ್ಯಚಟುವಟಿಕೆಗಳು ಸ್ಥಗಿತಗೊಂಡಿದ್ದರಿಂದ ಮೇಲ್ಕಂಡ ಸಹಕಾರ ಸಂಘವನ್ನು ಉಲ್ಲೇಖ (1)ರ ಆದೇಶದಲ್ಲಿ ಸಮಾಪನೆಗೊಳಿಸಲಾಗಿತ್ತು. ಸಂಘವು, ತೀರಿಸತಕ್ಕ ಜವಾಬ್ದಾರಿಗಳನ್ನು ತೀರಿಸಲಾಗದ ಸ್ಥಿತಿಗೆ ಬಂದಿದ್ದು, ಸಮಾಪನಾಧಿಕಾರಿಗಳು ಸಂಘದ ಸದಸ್ಯರುಗಳಿಗೆ ಸಂಘದ ಪುನಃಶ್ಚೇತನಕ್ಕೆ ಒಲವು ಇಲ್ಲದಿರುವುದನ್ನು ಮನಗಂಡು ದಿನಾಂಕ:09.02.2005 ರಂದು ನಡೆಸಿದ ಸಮಾಪನಾಧಿಕಾರಿಯವರ ಸಭಾ ನಡವಳಿಕೆ ರೀತ್ಯಾ ಬರತಕ್ಕ ಆಸ್ತಿಗಳನ್ನು ನಷ್ಟಕ್ಕೆ ವರ್ಗಾಯಿಸಿ ತೀರಿಸತಕ್ಕ ಜವಾಬ್ದಾರಿಗಳನ್ನು ಹೊಂದಾಣಿಕೆ ಮೂಲಕ ಶೂನ್ಯಗೊಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಸಂಘವನ್ನು ಯಥಾಸ್ಥಿತಿಯಲ್ಲಿ ಮುಂದುವರೆಸಿದಲ್ಲಿ ಸದಸ್ಯರಿಗಾಗಲೀ ಅಥವಾ ಸಾರ್ವಜನಿಕರಿಗಾಗಲೀ ಯಾವುದೇ ಪ್ರಯೋಜನ ಇಲ್ಲವೆಂದು ಪರಿಗಣಿಸಿ, ಆಸ್ತಿ-ಜವಾಬ್ದಾರಿ ತಃಖ್ತೆಯನ್ನು ಶೂನ್ಯಗೊಳಿಸಿ ಸಂಘದ ನೊಂದಣಿಯನ್ನು ರದ್ದುಗೊಳಿಸಲು ಸಮಾಪನಾಧಿಕಾರಿಗಳು ಸಲ್ಲಿಸಿರುವ ಪ್ರಸ್ತಾವನೆಯನ್ನು ಉಲ್ಲೇಖ (2)ರ ಪತ್ರದಲ್ಲಿ ಸಹಕಾರ ಸಂಘಗಳ ಉಪನಿಬಂಧಕರು, ಚಿತ್ರದುರ್ಗ ಇವರು ಸದರಿ ಸಂಘವನ್ನು ರದ್ದುಗೊಳಿಸಲು ಶಿಫಾರಸ್ಸು ಮಾಡಿರುತ್ತಾರೆ.

ಮೇಲಿನ ಕಾರಣಗಳಿಂದ ಹಾಗೂ ಉಪನಿಬಂಧಕರ ವರದಿಯ ಮೇರೆಗೆ ಸಂಘವನ್ನು ಮುಂದುವರೆಸುವುದು ಸೂಕ್ತವಲ್ಲವೆಂದು, ಸಂಘದ ನೊಂದಣಿಯನ್ನು ರದ್ದುಗೊಳಿಸುವುದು ಸೂಕ್ತವೆಂದು ಮನಗಂಡು ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಆದೇಶ

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 75 ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ/69/ಸಿಎಲ್‌ಎಂ/2001, ದಿನಾಂಕ:21.11.2001 ರಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಸಿ.ಎಸ್. ವೀರೇಶ್, ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು, ಆದ ನಾನು ಚಿತ್ರದುರ್ಗ ತಾಲ್ಲೂಕು ಸಣ್ಣ ಮತ್ತು ಅತಿ ಸಣ್ಣ ರೈತರ ಸಾಮೂಹಿಕ ಏತ ನೀರಾವರಿ ಸಹಕಾರ ಸಂಘ ನಿ., ಚಿತ್ರದುರ್ಗ ತಾಲ್ಲೂಕು ಈ ಸಂಘದ ನೊಂದಣಿ ಸಂಖ್ಯೆ: ಡಿಆರ್‌ಡಿ/ಎಸ್‌ಇಬಿ/ಆರ್‌ಸಿಎಸ್/7607/81-82 ಅನ್ನು ಈ ಕೂಡಲೇ ಜಾರಿಗೆ ಬರುವಂತೆ ರದ್ದುಪಡಿಸಿರುತ್ತೇನೆ. ಈ ದಿನದಿಂದ ಸದರಿ ಸಂಘವು ಕಾರ್ಪೋರೇಟ್ ಬಾಡಿಯಾಗಿರುವ ಅಸ್ತಿತ್ವವನ್ನು ಕಳೆದುಕೊಂಡಿರುತ್ತದೆ.

ಈ ಆದೇಶವನ್ನು ನನ್ನ ಸ್ವಹಸ್ತಾಕ್ಷರ ಹಾಗೂ ಕಛೇರಿಯ ಮೊಹರಿನೊಂದಿಗೆ ಈ ದಿನ ದಿನಾಂಕ:13.03.2009ರಂದು ಹೊರಡಿಸಿದೆ.

ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು,
ಬೆಂಗಳೂರು ಪ್ರಾಂತ, ಬೆಂಗಳೂರು.

ಪಿ.ಆರ್.280

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ

ಸಂಖ್ಯೆ: ಆಸಾನಿ/184/ಆಡಳಿತ–1/2008–09, ಬೆಂಗಳೂರು, ದಿನಾಂಕ:15ನೇ ಜೂನ್, 2009

ವಿಷಯ: ಈ ನಿರ್ದೇಶನಾಲಯದ ಸಹಾಯಕ ನಿರ್ದೇಶಕ ಸಮೂಹ 'ಬಿ' ವೃಂದದ ಅಧಿಕಾರಿಗಳಾದ ಶ್ರೀ ಎ.ಕೆ. ಹನುಮಂತಪ್ಪ, ತಾಲ್ಲೂಕು ಯೋಜನಾಧಿಕಾರಿಗಳು, ತಾಲ್ಲೂಕು ಪಂಚಾಯತ್ ಸಮಿತಿ, ಶಿಕಾರಿಪುರ, ಶಿವಮೊಗ್ಗ ಜಿಲ್ಲೆ, ಪ್ರಸ್ತುತ ಅನ್ಯ ಕರ್ತವ್ಯದ ಮೇಲೆ ಜಿಲ್ಲಾ ಪಂಚಾಯತಿ ಶಿವಮೊಗ್ಗ ಇವರ ವಿರುದ್ಧ "ಇಲಾಖಾ ವಿಚಾರಣೆ ಏರ್ಪಡಿಸುವ ಕುರಿತು ವಿಚಾರಣಾಧಿಕಾರಿಗಳನ್ನು ನೇಮಿಸುವ ಕುರಿತು.

ಉಲ್ಲೇಖ:
1) ಶ್ರೀ ಎ.ಕೆ. ಹನುಮಂತಪ್ಪ, ಸಹಾಯಕ ನಿರ್ದೇಶಕರು, ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 11ರ ಅಡಿಯಲ್ಲಿ ಹೊರಡಿಸಲಾದ ಇದೇ ಕ್ರಮಾಂಕದ ಕಾರಣ ಕೇಳುವ ಜ್ಞಾಪನ ದಿನಾಂಕ: 24.03.2009
2) ಶ್ರೀ ಎ.ಕೆ. ಹನುಮಂತಪ್ಪ, ಸಹಾಯಕ ನಿರ್ದೇಶಕರು, ಇವರು ಸಲ್ಲಿಸಿದ ಲಿಖಿತ ವಿವರಣೆ ದಿನಾಂಕ: 28.05.2009.

ಪ್ರಸ್ತಾವನೆ:

ಶ್ರೀ ಎ.ಕೆ. ಹನುಮಂತಪ್ಪ, ಈ ನಿರ್ದೇಶನಾಲಯದ ಸಹಾಯಕ ನಿರ್ದೇಶಕರ ವೃಂದದ ಸಮೂಹ 'ಬಿ' ಅಧಿಕಾರಿಗಳು, ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿ, ಶಿವಮೊಗ್ಗ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ **"ದಿನಾಂಕ: 20.08.2004ರಂದು"** ನೇರವಾಗಿ ಸರ್ಕಾರಕ್ಕೆ ಸಲ್ಲಿಸಿದ್ದ ಅವರ ವರ್ಗಾವಣೆ ಅರ್ಜಿಯಲ್ಲಿ **"ನನ್ನ ವೈಯಕ್ತಿಕ ಸಮಸ್ಯೆಯಿಂದಾಗಿ ಮತ್ತು ನನ್ನ ಸ್ನೇಹಿತನಾದ ಎನ್. ವಾಸುದೇವ ಸಹಾಯಕ ನಿರ್ದೇಶಕರು (ಸಾಂಖ್ಯಿಕ ಅಧಿಕಾರಿ), ಜಿಲ್ಲಾ ಪಂಚಾಯತ್, ಯೋಜನಾ ಶಾಖೆ, ಚಿಕ್ಕಮಗಳೂರು, ಇವರು ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದು, ಅವರಿಗೆ ನೆರವು ನೀಡುವ ಉದ್ದೇಶದಿಂದ ನಾವುಗಳು ಇಬ್ಬರು ಪರಸ್ಪರ (ಮ್ಯೂಚುಯಲ್) ವರ್ಗಾವಣೆ ಮಾಡಿಕೊಳ್ಳಲು ನಾನು ಮನಸ್ಸು ಪೂರ್ವಕವಾಗಿ ಒಪ್ಪಿಕೊಂಡಿದ್ದು ನನ್ನ ಮನವಿಯನ್ನು ಪುರಸ್ಕರಿಸಿ ಪರಸ್ಪರ ವರ್ಗಾವಣೆ ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇನೆ"** ಎಂದು ನಮೂದಿಸಿ ಅವರನ್ನು ಜಿಲ್ಲಾ ಪಂಚಾಯಿತಿ ಚಿಕ್ಕಮಗಳೂರು ಇಲ್ಲಿಗೆ ವರ್ಗಾವಣೆ ಮಾಡುವಂತೆ ಕೋರಿದ್ದರು. (ಅವರ ಈ ಅರ್ಜಿಯಲ್ಲಿ ಅನುಬಂಧ–'ಎ'ರಲ್ಲಿದೆ). ಅವರ ಈ ಕೋರಿಕೆಯನ್ನು ಪುಷ್ಠೀಕರಿಸಲು (in support of representation dated 20.08.2004 of Sri. A.K Hanumanthappa) ಶ್ರೀ ಎನ್. ವಾಸುದೇವ, ಸಹಾಯಕ ನಿರ್ದೇಶಕರು (ಸಾಂಖ್ಯಿಕ ಅಧಿಕಾರಿಗಳು) ಜಿಲ್ಲಾ ಪಂಚಾಯಿತಿ ಚಿಕ್ಕಮಗಳೂರು ಇವರು ದಿನಾಂಕ:03.09.2004ರಂದು ನೇರವಾಗಿ ಸರ್ಕಾರಕ್ಕೆ ಸಲ್ಲಿಸಿದ್ದ ಅವರ ಮನವಿಯಲ್ಲಿ ಅವರ ತಂದೆಯವರ ಮತ್ತು ಸ್ವತಃ ಅವರು ಸಕ್ಕರೆ ಕಾಯಿಲೆ ಹಾಗೂ ರಕ್ತದೊತ್ತಡದಿಂದ ಬಳಲುತ್ತಿದ್ದು, ಅವರನ್ನು ಶಿವಮೊಗ್ಗ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿಯ ಶ್ರೀ ಎ.ಕೆ. ಹನುಮಂತಪ್ಪ, ಸಹಾಯಕ ನಿರ್ದೇಶಕರು ಇವರ ಸ್ಥಳಕ್ಕೆ **"ಪರಸ್ಪರ ವರ್ಗಾವಣೆ"** ಎಂದು ಪರಿಗಣಿಸಿ ವರ್ಗಾವಣೆ ಮಾಡುವಂತೆ ಕೋರಿದ್ದರು.

(ಶ್ರೀ ಎನ್. ವಾಸುದೇವ, ಸಹಾಯಕ ನಿರ್ದೇಶಕರು, ದಿನಾಂಕ: 03.09.2004ರಂದು ಸಲ್ಲಿಸಿದ್ದ ಅವರ ಅರ್ಜಿ ಮತ್ತು ಅದಕ್ಕೆ ಲಗತ್ತಿಸಲಾದ ಅವರ ಮತ್ತು ಅವರ ತಂದೆಯವರ ವೈದ್ಯಕೀಯ ಪ್ರಮಾಣ ಪತ್ರಗಳನ್ನು (**ಅನುಬಂಧ–ಬಿ, ಸಿ ಮತ್ತು ಡಿ ಯಲ್ಲಿ ಒದಗಿಸಲಾಗಿದೆ**).

ಮೇಲೆ ವಿವರಿಸಿದಂತೆ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿ, ಶಿವಮೊಗ್ಗ ಜಿಲ್ಲೆ ಇಲ್ಲಿ ಸಹಾಯಕ ನಿರ್ದೇಶಕರಾಗಿದ್ದ ಶ್ರೀ ಎ.ಕೆ. ಹನುಮಂತಪ್ಪ, ಇವರ ಅರ್ಜಿ ದಿನಾಂಕ: 20.08.2004ನ್ನು (ಅನುಬಂಧ–ಎ) ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು ಇಲ್ಲಿ ಸಹಾಯಕ ನಿರ್ದೇಶಕರ ವೃಂದದ ಸಾಂಖ್ಯಿಕ ಅಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಎನ್. ವಾಸುದೇವ ಇವರ ಅರ್ಜಿ ದಿನಾಂಕ: 03.09.2004ನ್ನು (**ಅನುಬಂಧ–ಬಿ ರಿಂದ ಡಿ ವರೆಗೆ**) – ಅಂದರೆ ಇವರುಗಳು ಪರಸ್ಪರ ವರ್ಗಾವಣೆಗಾಗಿ ಸಲ್ಲಿಸಿದ್ದ ಅರ್ಜಿಗಳನ್ನು ಪರಿಗಣಿಸಿ 2004–05ನೇ ಸಾಲಿನ ವರ್ಗಾವಣೆಗಳಿಗೆ ಸಂಬಂಧಿಸಿದಂತೆ ಹೊರಡಿಸಲಾದ ಮಾರ್ಗಸೂಚಿಗಳ ಅನ್ವಯ ಈ ನಿರ್ದೇಶನಾಲಯದ ಆದೇಶದ ಸಂಖ್ಯೆ: ಆಡಳಿತ/273/2004–05 ದಿನಾಂಕ 30.09.2004ರಲ್ಲಿ ಶ್ರೀ ಎ.ಕೆ. ಹನುಮಂತಪ್ಪ ಮತ್ತು ಶ್ರೀ ಎನ್. ವಾಸುದೇವ, ಸಹಾಯಕ ನಿರ್ದೇಶಕರುಗಳನ್ನು (ಇನ್ನಿತರ 6 ಸಹಾಯಕ ನಿರ್ದೇಶಕರುಗಳ ಸಹಿತವಾಗಿ) ಪರಸ್ಪರ ವರ್ಗಾವಣೆ ಮಾಡಲಾಗಿತ್ತು. ಈ ವರ್ಗಾವಣೆ ಆದೇಶದ ದಿನಾಂಕ 30.09.2004ನ್ನು **"ಅನುಬಂಧ–ಇ"** ಯನ್ನು ಒದಗಿಸಲಾಗಿದೆ.

ಮೇಲಿನ ವರ್ಗಾವಣೆ ಆದೇಶದ ದಿನಾಂಕ:30.09.2004ರ ಅನ್ವಯ ಅವರ ಸ್ವಂತ ಕೋರಿಕೆಯ ಅನ್ವಯ ವರ್ಗಾವಣೆ ಆದೇಶದಲ್ಲಿದ್ದ ಶ್ರೀ ಎ.ಕೆ. ಹನುಮಂತಪ್ಪ, ಸಹಾಯಕ ನಿರ್ದೇಶಕರು, ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿ ಶಿವಮೊಗ್ಗ ಇವರನ್ನು ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು, ಶಿವಮೊಗ್ಗ ಇವರ ಕಛೇರಿ ಆದೇಶದ ಸಂಖ್ಯೆ: ಆಡಳಿತ/39/2004–05

ದಿನಾಂಕ 14.10.2004ರಲ್ಲಿ (ಅನುಬಂಧ- ಎಫ್) ಬಿಡುಗಡೆಗೊಳಿಸಲಾಗಿದ್ದರಿಂದ ಸ್ವಂತ ಕೋರಿಕೆ ಅನ್ವಯ ವರ್ಗಾವಣೆ ಹೊಂದಿದ್ದ ಶ್ರೀ ಎ.ಕೆ. ಹನುಮಂತಪ್ಪ, ಸಹಾಯಕ ನಿರ್ದೇಶಕರು, ಬಿಡುಗಡೆ ಹೊಂದಿದ ತಕ್ಷಣ ಅಥವಾ ಮಾರನೇಯ ದಿನ ವರ್ಗಾವಣೆ ಹೊಂದಿದ್ದ ಕಛೇರಿಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳತಕ್ಕದ್ದಾಗಿದ್ದರೂ ಶ್ರೀ ಎ.ಕೆ. ಹನುಮಂತಪ್ಪ, ಸಹಾಯಕ ನಿರ್ದೇಶಕರು, ಬಿಡುಗಡೆಹೊಂದಿದ ದಿನಾಂಕ:14.10.2004ರ ತಕ್ಷಣದ ಮಾರನೇಯ ದಿನ (immediate next day) ಅಂದರೆ ದಿನಾಂಕ 15.10.2004ರಂದೇ ವರ್ಗಾವಣೆ ಹೊಂದಿದ್ದ ಚಿಕ್ಕಮಗಳೂರು ಜಿಲ್ಲಾ ಪಂಚಾಯಿತಿಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೇ ದಿನಾಂಕ:03.09.2005ರಂದು (ಅಂದರೆ 10 (ಹತ್ತು) ತಿಂಗಳುಗಳ ದೀರ್ಘ ಅವಧಿಗಾ ಗೈರು ಹಾಜರಿ ನಂತರ) ದಿನಾಂಕ:02.09.2005ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದರಿಂದ ಇವರ ಗೈರು ಹಾಜರಾತಿಯು ಉದ್ದೇಶಪೂರ್ವಕ ಅನಧಿಕೃತ ಗೈರುಹಾಜರಿ ಎಂದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಅವರ ವಿರುದ್ಧದ ಗೈರು ಹಾಜರಾತಿ ಹಾಗೂ ದುರ್ನಡತೆ ಆರೋಪಗಳಿಗೆ ಸಂಬಂಧಿಸಿದಂತೆ ಅವರ ವಿರುದ್ಧ ಉದ್ದೇಶಿಸಲಾದ ಇಲಾಖಾ ವಿಚಾರಣೆಗೆ ಸಂಬಂಧಿಸಿದಂತೆ ಉಲ್ಲೇಖ(1)ರಲ್ಲಿನ ಕಾರಣ ಕೇಳುವ ಜ್ಞಾಪನವನ್ನು ಹೊರಡಿಸಿ ಅವರ "ಲಿಖಿತ ಹೇಳಿಕೆ"ಯನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು.

ಆಪಾದಿತ ಸರ್ಕಾರಿ ಅಧಿಕಾರಿಗಳಾದ ಶ್ರೀ ಎ.ಕೆ. ಹನುಮಂತಪ್ಪ, ಅವರು ಉಲ್ಲೇಖ(2)ರಲ್ಲಿ ಸಲ್ಲಿಸಲಾದ ಅವರ ಲಿಖಿತ ವಿವರಣೆ ದಿನಾಂಕ: 28.05.2005ರಲ್ಲಿ ಅವರ ದಿನಾಂಕ: 15.10.2004ರಿಂದ ದಿನಾಂಕ: 02.09.2005ರ ವರೆಗಿನ ಅವರ ಗೈರು ಹಾಜರಾತಿಯನ್ನು ಸಮರ್ಥಿಸಿಕೊಂಡಿದ್ದು, ಅವರ ವಿರುದ್ಧದ ಆರೋಪಗಳನ್ನು ಸ್ಪಷ್ಟವಾಗಿ ನಿರಾಕರಿಸಿರುತ್ತಾರೆ ಹಾಗೂ ಅವರ ವಿವರಣೆಯಲ್ಲಿನ ಅಂಶಗಳು ಅವರ ವಿರುದ್ಧದ ಆಪಾದನೆಗಳನ್ನು ಸಮರ್ಥಿಸಿಕೊಳ್ಳಲು ಅಸಮರ್ಪಕವಾಗಿರುತ್ತದೆ. ಆದ್ದರಿಂದ ಅವರ ವಿರುದ್ಧದ ಆರೋಪಗಳ ಸತ್ಯಾಸತ್ಯತೆಯನ್ನು ಕಂಡುಕೊಳ್ಳಲು ಅವರ ವಿರುದ್ಧ ಇಲಾಖಾ ವಿಚಾರಣೆ ಏರ್ಪಡಿಸುವುದು ಸೂಕ್ತವೆಂಬ ಕಾರಣದಿಂದ ವಿಚಾರಣಾಧಿಕಾರಿಗಳನ್ನು ನೇಮಕಾತಿ ಮಾಡುವುದು ಅಗತ್ಯವಾಗಿರುತ್ತದೆ.

ಸದರಿ ಶ್ರೀ ಎ.ಕೆ. ಹನುಮಂತಪ್ಪ, ಸಹಾಯಕ ನಿರ್ದೇಶಕರು, ಅವರ ವಿರುದ್ಧ ಹೊರಿಸಲಾದ ಆರೋಪಗಳು ಹಾಗೂ ಆರೋಪಗಳಿಗೆ ಸಂಬಂಧಿಸಿದಂತೆ ಸದರಿ ಅವರು ಸಲ್ಲಿಸಿದ ವಿವರಣೆಯಲ್ಲಿನ ಅಂಶಗಳನ್ನು ಈ ಕೆಳಗೆ ವಿಶ್ಲೇಷಿಸಲಾಗಿದೆ ಹಾಗೂ ಅವರ ವಿವರಣೆಯನ್ನು ಯಾವ ಕಾರಣದಿಂದ ಒಪ್ಪಲಾಗುವುದಿಲ್ಲವೆಂದು ಸ್ಪಷ್ಟೀಕರಿಸಲಾಗಿದೆ.

ಎ) ಆರೋಪ: 1

ಈ ನಿರ್ದೇಶನಾಲಯದ ಸಹಾಯಕ ನಿರ್ದೇಶಕರ ವೃಂದದ (ಗ್ರೂಪ್ 'ಬಿ') ಅಧಿಕಾರಿಗಳಾದ ಶ್ರೀ ಎ.ಕೆ. ಹನುಮಂತಪ್ಪ, ಆದ ನೀವು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ಶಿವಮೊಗ್ಗ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ನಿಮ್ಮನ್ನು ನಿಮ್ಮ ಸ್ವಂತ **ಕೋರಿಕೆ ದಿನಾಂಕ 20.08.2004ರ** ಅನ್ವಯ, ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು (ಇಲ್ಲಿನ ಸಾಂಖ್ಯಿಕ ಅಧಿಕಾರಿ ಹುದ್ದೆಗೆ) ಇಲ್ಲಿಗೆ ಈ ನಿರ್ದೇಶನಾಲಯದ ಆದೇಶದ ಸಂಖ್ಯೆ:ಅಸಇತ/273/2004-05 ದಿನಾಂಕ:03.09.2004ರಲ್ಲಿ ವರ್ಗಾವಣೆ ಮಾಡಲಾಗಿತ್ತು. ಹಾಗೂ ಈ ಆದೇಶದ ಅನ್ವಯ ನಿಮ್ಮನ್ನು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ಶಿವಮೊಗ್ಗ, ಇವರ ಕಛೇರಿಯಿಂದ **ದಿನಾಂಕ:14.10.2004ರ** ಆದೇಶ **ಸಂಖ್ಯೆ: ಅಸಇತ/39/2004-05** ದಿನಾಂಕ: **14.10.2004ರಲ್ಲಿ** ಬಿಡುಗಡೆಗೊಳಿಸಲಾಗಿತ್ತು. ಹಾಗೂ ಅದೇ ಆದೇಶದ ಅನ್ವಯ ವರ್ಗಾವಣೆ ಹೊಂದಿದ ಕಛೇರಿಯಲ್ಲಿ ಮಾರನೇಯ ದಿನ ಅಂದರೆ ದಿನಾಂಕ: 15.10.2004ರಂದು ಕರ್ತವ್ಯಕ್ಕೆ ವರದಿ ಮಾಡತಕ್ಕದ್ದಾಗಿತ್ತಾದರೂ, ವರ್ಗಾವಣೆ ಹೊಂದಿದ ಕಛೇರಿಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೆ **ದೀರ್ಘಾವಧಿಯವರೆಗೆ ಅನಧಿಕೃತ ಗೈರು ಹಾಜರಾಗಿ ದಿನಾಂಕ:03.09.2005ರಂದು** ಚಿಕ್ಕಮಗಳೂರು ಜಿಲ್ಲಾ ಪಂಚಾಯತ್ ಕಛೇರಿಯಲ್ಲಿ ವರದಿ ಮಾಡಿಕೊಂಡಿರುತ್ತೀರಿ.

ಕರ್ನಾಟಕ ನಾಗರೀಕ ಸೇವಾ ನಿಯಮಗಳು 1957ರ ನಿಯಮ 76(3)ರ ಅನ್ವಯ "ಸ್ವಂತ ಕೋರಿಕೆ ಮೇರೆಗೆ ಅಂತಹ ವರ್ಗಾವಣೆಯಾದ ದಿನಾಂಕದಂದು ಅವನು ಹೊಂದಿದ ಮತ್ತು ಪಡೆಯಬಹುದಾದ ಯಾವುದೇ ಬಗೆಯ ರಜೆಯನ್ನು ಅವರಿಗೆ ನೀಡಬಹುದಾದ ಸೇರಿಕೆ ಕಾಲದ ಅವಧಿಯನ್ನು ಮೀರಿದ ಅವಧಿಗೆ ಮಾತ್ರ ಮಂಜೂರು ಮಾಡಬಹುದಾದ್ದರಿಂದ" ಮೇಲೆ ತಿಳಿಸಲಾದ ಆದೇಶದಲ್ಲಿ ನಿಮ್ಮ ಕೋರಿಕೆ ಅನ್ವಯ ನಿಮ್ಮನ್ನು ಚಿಕ್ಕಮಗಳೂರು ಜಿಲ್ಲಾ ಪಂಚಾಯಿತಿಗೆ ವರ್ಗಾವಣೆ ಮಾಡಲಾಗಿತ್ತಾದ್ದರಿಂದ, ವರ್ಗಾವಣೆಯಾದ ಸ್ಥಳದಲ್ಲಿ/ಕಛೇರಿಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೆ ದೀರ್ಘಾವಧಿಯವರೆಗೆ ಅಂದರೆ 326 ದಿನಗಳಷ್ಟು ಅನಧಿಕೃತ ಗೈರುಹಾಜರಾಗಿ ಮೇಲಿನ ನಿಯಮಗಳ ನಿಯಮ:76(3)ಗೆ ವಿರುದ್ಧವಾಗಿ ವರ್ತಿಸಿದ್ದಲ್ಲದೆ ಕರ್ನಾಟಕ ನಾಗರೀಕ ಸೇವಾ(ನಡತೆ) ನಿಯಮಗಳು 1966ರ ನಿಯಮ 3ನ್ನು ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ಸಾಬೀತಾಗಿದ್ದರಿಂದ ನಿಮ್ಮ ವಿರುದ್ಧ ಇಲಾಖಾ ವಿಚಾರಣೆ ಏರ್ಪಡಿಸಲು ಉದ್ದೇಶಿಸಲಾಗಿದೆ.

ಆರೋಪ: 1ಕ್ಕೆ ಅವರು ಸಲ್ಲಿಸಿದ ವಿವರಣೆ:

ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು ಅವರು ನನ್ನನ್ನು ಶಿವಮೊಗ್ಗದಿಂದ ವರ್ಗಾಯಿಸಿ ಚಿಕ್ಕಮಗಳೂರು ಜಿಲ್ಲಾ ಪಂಚಾಯಿತಿಗೆ (ಸಾಂಖ್ಯಿಕ ಅಧಿಕಾರಿ) ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಿ ದಿನಾಂಕ:

30.09.2004ರಂದು ಆದೇಶ ಹೊರಡಿಸಿದರು. ಸದರಿ ಆದೇಶದ ಷರಾದಲ್ಲಿ ಕೋರಿಕೆ ಎಂದು ತಿಳಿಸಲಾಗಿತ್ತು. ನಾನ 2004-05ನೇ ಸಾಲಿನಲ್ಲಿ ವರ್ಗಾವಣೆಯನ್ನು ಕೋರಿದ್ದು ನಿಜ. ಆದರೆ ಸಾಮಾನ್ಯ ವರ್ಗಾವಣೆ ಅವಧಿ 31.05.2004 2004-05ನೇ ಸಾಲಿನಲ್ಲಿ ವರ್ಗಾವಣೆಯನ್ನು ಕೋರಿದ್ದು ನಿಜ. ಮುಕ್ತಾಯಗೊಂಡಿತ್ತು. ಅಂದರೆ ನನ್ನ ಕೋರಿಕೆಯನ್ನು 2004-05ನೇ ಸಾಲಿಗೆ ಸಾಮಾನ್ಯ ವರ್ಗಾವಣೆ ಅವಧಿಯ ಪರಿಗಣಿಸದೆ ಕೈಬಿಟ್ಟರು. ಆದ ಕಾರಣ ನನ್ನ ಪತ್ನಿಯ ಅನಾರೋಗ್ಯದ ಹಾಗೂ ನನ್ನ ಮಗನ ಪಿಯುಸಿ ವಿದ್ಯಾಭ್ಯಾಸಕ್ಕಾ ಶಿವಮೊಗ್ಗದಲ್ಲಿಯೇ ಮುಂದುವರೆಸಲು ನಿರ್ಧರಿಸಿ ಅವನನ್ನು ಕಾಲೇಜಿಗೆ ವರ್ಷದ ಫೀ ಇತ್ಯಾದಿಗಳನ್ನು ಕಟ್ಟಿ ಸೇರಿಸಿದ್ದಲ್ಲದ ಹೆಚ್ಚಿನ ತಿಳುವಳಿಕೆ ಪಡೆಯಲು ಖಾಸಗಿ ಪಾಠದ ವ್ಯವಸ್ಥೆಯನ್ನು ಸಹ ಮಾಡಿಸಿದ್ದೆನು. ಆದರೆ ಮಾನ್ಯ ನಿರ್ದೇಶಕರು, ದಿನಾಂ 30.09.2004ರಂದು ವರ್ಗಾವಣೆ ಆದೇಶ ಮಾಡಿದ್ದು ವರ್ಷದ ಮಧ್ಯಮಾವಧಿ ಆಗಿರುವುದಲ್ಲದೆ ನನ್ನ ಕೋರಿಕೆ ಅವ ಮೀರಿದ ನಂತರ ಹೊರಡಿಸಿದ್ದ ಆದೇಶವಾಗಿರುತ್ತದೆ. ಈ ವರ್ಗಾವಣೆ ಆದೇಶದಿಂದ ಭಾದಿತನಾದ ನಾನು ಕರ್ನಾಟಕ ಆಡಳಿ ಮಂಡಳಿಯಲ್ಲಿ ನ್ಯಾಯ ಕೋರಿ ಅರ್ಜಿ ಸಲ್ಲಿಸಿದ್ದೆನು. ಗೌರವಾನ್ವಿತ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯವರು ನ ಮನವಿಯನ್ನು ವಿಚಾರಣೆಗೆ ಅಂಗೀಕರಿಸಿ ವಿಚಾರಣೆಯನ್ನು ನಡೆಸಿ ದಿನಾಂಕ: 18.10.2004ರಂದು ಈ ಕೆಳಕಂಡಂತೆ ಆದೇ ನೀಡಿದರು. (ಅರ್ಜಿ ಸಂಖ್ಯೆ: 5536/2004)

"The applicant may file review application before the cadre management Authority in terms cause-ii of the Government Order dated 22-11-2001" ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ನಿರ್ದೇಶ ಪಾಲಿಸಲು ಅವಕಾಶವನ್ನು ನೀಡದೆ ನಾನು ದಿನಾಂಕ:12.10.2004ರಿಂದ 18.10.2004ರ ವರೆಗೆ ಪರಿವರ್ತಿತ ರ ಮಂಜೂರಾತಿಯನ್ನು ವೈದ್ಯಕೀಯ ಕಾರಣದ ಮೇಲೆ ಕೋರಿರುವುದನ್ನು ಸಹ ಲೆಕ್ಕಿಸದೇ ನನ್ನನ್ನು ದಿನಾಂಕ: 14.10.2004 ಅಪರಾಹ್ನ ಕರ್ತವ್ಯದಿಂದ ಬಿಡುಗಡೆಗೊಳಿಸಿರುವುದಾಗಿ ಜಿಲ್ಲಾ ಸಾಂಖ್ಯಿಕ ಅಧಿಕಾರಿ, ಶಿವಮೊಗ್ಗ ಇವರು ತಪ್ಪು ಮಾಹಿತಿಯನ ಮೇಲಾಧಿಕಾರಿಯವರಿಗೆ ಒಪ್ಪಿಸಿರುತ್ತಾರೆ. ಆದರೆ **ವಾಸ್ತವದಲ್ಲಿ ನಾನು ಅಕ್ಟೋಬರ್ 2004,** ನವೆಂಬರ್ 2004, ಈ ಎರಡ ತಿಂಗಳುಗಳು ಮತ್ತು ಡಿಸೆಂಬರ್ 2004ರ 1 ಮತ್ತು 2ನೇ ತಾರೀಖುಗಳಲ್ಲಿ ಶಿವಮೊಗ್ಗ ಸಾಂಖ್ಯಿಕ ಅಧಿಕಾರಿಗಳ ಕಛೇರಿಯ ಕೆಲಸ ನಿರ್ವಹಿಸಿರುತ್ತೇನೆ. ಈ ಹೇಳಿಕೆಗೆ ಆಧಾರವಾಗಿ ಮೇಲೆ ಹೇಳಿರುವ ಅವಧಿಯ ಹಾಜರಿ ತಃಖ್ತೆಯನ್ನು ಮತ್ತು ರಜ ಅರ್ಜಿ ಹಾಗೂ ವೈದ್ಯಕೀಯ ಪ್ರಮಾಣ ಪತ್ರವನ್ನು ಕ್ರಮವಾಗಿ ನಿಶಾನೆ ಡಿ-1, ಡಿ-2, ಡಿ-3, ಡಿ-4 ಮತ್ತು ಡಿ-5 ಮತ್ತು ಡಿ 5(ಎ) ಎಂದು ಗುರುತಿಸಿ ತಮ್ಮ ಅವಗಾಹನೆಗಾಗಿ ಒಪ್ಪಿಸಿರುತ್ತೇನೆ. ಮೇಲೆ ವಿವರಿಸಿರುವ ಅಂಶಗಳೂ ದಾಖಲೆಗ ಆಧಾರದಿಂದ ಕೂಡಿರುವುದರಿಂದ ನನ್ನ ಮೇಲೆ ಹೊರಿಸಿರುವ ಒಂದನೇ ಆರೋಪದಲ್ಲಿ ಪ್ರಸ್ತಾಪಿಸಿರುವ ಯಾವುದೇ ಅಂಶಗಳ ವಾಸ್ತವ ಸಂಗತಿಗಳಿಂದ ಕೂಡಿರುವುದಿಲ್ಲ. ಅಂದರೆ ಸತ್ಯಕ್ಕೆ ದೂರವಾಗಿವೆ ಹಾಗೂ ನಿರಾಧಾರವಾಗಿದೆ. ಆದುದರಿಂ ಆರೋಪವನ್ನು ಒಪ್ಪದೇ ನಿರಾಕರಿಸುತ್ತೇನೆ.

ಆರೋಪ: 1ಕ್ಕೆ ಸಲ್ಲಿಸಿರುವ ಅವರ ವಿವರಣೆಯ ವಿಶ್ಲೇಷಣೆ:

ಆಪಾದಿತ ಸರ್ಕಾರಿ ಅಧಿಕಾರಿಯಾದ ಶ್ರೀ ಎ.ಕೆ. ಹನುಮಂತಪ್ಪ, ಸಹಾಯಕ ನಿರ್ದೇಶಕರು ದಿನಾಂ 20.08.2004ರಂದು (ಅನುಬಂಧ-ಎ ರಲ್ಲಿದೆ) ಹಾಗೂ ಶ್ರೀ ಎನ್. ವಾಸುದೇವ, ಸಹಾಯಕ ನಿರ್ದೇಶಕರು, ದಿನಾಂ 03.09.2004 (**ಅನುಬಂಧ-ಬಿ**) ರಂದು ಸಲ್ಲಿಸಿದ ಪರಸ್ಪರ ಕೋರಿಕೆ ವರ್ಗಾವಣೆ ಮನವಿಗಳನ್ನು ಪರಿಗಣಿಸಿ 2004-05ನ ಸಾಲಿನ ಸರ್ಕಾರಿ ನೌಕರರ ವರ್ಗಾವಣೆಗೆ ಸಂಬಂಧಿಸಿದಂತೆ ಹೊರಡಿಸಲಾಗಿದ್ದ ಸರ್ಕಾರದ ಆದೇಶದ ಸಂಖ್ಯೆ: ಸಿಆಸುಇ ಸೇನೌವ 2004 ದಿನಾಂಕ: 01.09.2004ರ ಅನ್ವಯ (**ಅನುಬಂಧ-ಜಿ**) ಶ್ರೀ ಎ.ಕೆ. ಹನುಮಂತಪ್ಪ ಸಹಾಯಕ ನಿರ್ದೇಶಕರ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿ, ಶಿವಮೊಗ್ಗ ಮತ್ತು ಶ್ರೀ ಎನ್. ವಾಸುದೇವ, ಸಹಾಯಕ ನಿರ್ದೇಶಕರು, ಜಿ ಪಂಚಾಯಿತಿ, ಚಿಕ್ಕಮಗಳೂರು ಇವರುಗಳನ್ನು ಅವರುಗಳ ಕೋರಿಕೆಯ ಅನ್ವಯ (ಅದೇ ಆದೇಶದಲ್ಲಿ ಇನ್ನಿತರ 6 ಸಹಾಯ ನಿರ್ದೇಶಕರುಗಳನ್ನು ಸೇರಿಸಿ) ಆದೇಶದ ದಿನಾಂಕ: 30.09.2004ರಲ್ಲಿ (ಅನುಬಂಧ-ಇ) ಪರಸ್ಪರ ವರ್ಗಾವಣೆ ಮಾಡಲಾಗಿತ್ತು

ಸದರಿ ಅವರು ದಿನಾಂಕ: 20.08.2004 (ಅನುಬಂಧ-ಎ) ರಂದು ವರ್ಗಾವಣೆಗಾಗಿ ಅರ್ಜಿ ಸಲ್ಲಿಸಿದ್ದನ್ನು ಪರಿಗಣಿ ದಿನಾಂಕ:30.09.2004 (ಅನುಬಂಧ-ಇ) ಆದೇಶದಲ್ಲಿ ವರ್ಗಾವಣೆ ಮಾಡಲಾಗಿತ್ತಾದರೂ ಹಾಗೂ ಆ ಆದೇಶದ ಅನ್ವ ದಿನಾಂಕ:14.10.2004ರ ಆದೇಶದಲ್ಲಿ ಅವರನ್ನು ಬಿಡುಗಡೆಗೊಳಿಸಿದ್ದರೂ (**ಅನುಬಂಧ-ಎಫ್**) ಅವರ ಸ್ವಂತ ಕೋರಿಕೆ ಅನ್ವ ಮಾಡಲಾಗಿದ್ದ ಈ ವರ್ಗಾವಣೆ ವಿರುದ್ಧ ಸದರಿ ಶ್ರೀ ಎ.ಕೆ. ಹನುಮಂತಪ್ಪ, ಸಹಾಯಕ ನಿರ್ದೇಶಕರು, ಗೌರವಾನ್ವಿತ ಕರ್ನಾಟ ಆಡಳಿತ ಮಂಡಳಿಯಲ್ಲಿ ಸಲ್ಲಿಸಿದ್ದ ಅರ್ಜಿ ಸಂಖ್ಯೆ:5536/2004ಕ್ಕೆ ಸಂಬಂಧಿಸಿದಂತೆ ದಿನಾಂಕ:18.10.2004 ರಂದು ಗೌರವಾನ್ವ ಆಡಳಿತ ನ್ಯಾಯ ಮಂಡಳಿಯಲ್ಲಿ ಹೊರಡಿಸಿದ ಆದೇಶದಲ್ಲಿ (**ಅನುಬಂಧ-ಎಚ್**) "in the light of the alternative rema available for the applicant we decline to interfere with the present application. However, **if the applica is not already relieved as on today,** the applicant may file a review application before the Cad

anagement Authority in terms of clause-II of the Government Order dated 22.11.2001 on or before 10.2004. The cadre management authority is directed to consider the request of the applicant and ss appropriate orders in accordance with law within one week thereafter. If the applicant is not relieved an today the I[st] Respondent is directed not to give affect to the impugned order dated 30.09.2004" ಂದು ಆದೇಶಿಸಲ್ಪಟ್ಟಿತ್ತು.

ಕೋರಿಕೆ ವರ್ಗಾವಣೆ ಆದೇಶದಲ್ಲಿದ್ದ ಶ್ರೀ ಎ.ಕೆ. ಹನುಮಂತಪ್ಪ, ಸಹಾಯಕ ನಿರ್ದೇಶಕರನ್ನು ದಿನಾಂಕ: .10.2004ರ ಆದೇಶದಲ್ಲಿಯೇ **(ಅನುಬಂಧ- ಎಫ್)** ಅಂದರೆ ಗೌರವನ್ವಿತ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ದೇಶ ಹೊರಡಿಸುವ ಪೂರ್ವದಲ್ಲಿಯೇ ಬಿಡುಗಡೆಗೊಳಿಸಿದ್ದರಿಂದ ಮೇಲೆ ವಿವರಿಸಲಾದ ಕರ್ನಾಟಕ ಆಡಳಿತ ನ್ಯಾಯ ಂಡಳಿಯ ಆದೇಶದಿಂದ ಶ್ರೀ ಎ.ಕೆ. ಹನುಮಂತಪ್ಪ, ಸಹಾಯಕ ನಿರ್ದೇಶಕರ ವರ್ಗಾವಣೆ ಆದೇಶಕ್ಕೆ ಯಾವುದೇ ರಿಣಾಮವಾಗದೇ ಇದ್ದಾಗ್ಯೂ ಶ್ರೀ ಎ.ಕೆ. ಹನುಮಂತಪ್ಪ, ಸಹಾಯಕ ನಿರ್ದೇಶಕರು, ದಿನಾಂಕ:19.11.2004ರಂದು ಹಾಗೂ ವರ ಪತ್ನಿಯು ದಿನಾಂಕ: 17.11.2004ರಂದು **(ಅನುಬಂಧ –ಜೆ ಮತ್ತು ಅನುಬಂಧ –ಕೆ)** ಸಲ್ಲಿಸಿದ್ದ ಅರ್ಜಿಗಳನ್ನು ಪರಿಶೀಲಿಸಿ ಾಗೂ ಶ್ರೀ ಎ.ಕೆ. ಹನುಮಂತಪ್ಪ, ಸಹಾಯಕ ನಿರ್ದೇಶಕರು, ದಿನಾಂಕ:20.08.2004ರಂದು ವರ್ಗಾವಣೆಗಾಗಿ ಸಲ್ಲಿಸಿದ್ದ ವರ ಅರ್ಜಿಯನ್ನು ವರ್ಗಾವಣೆ ಆದೇಶ ಹೊರಡಿಸುವ ದಿನಾಂಕದವರೆಗೆ ಯಾವುದೇ ಹಂತದಲ್ಲಿಯೂ ಹಿಂದಕ್ಕೆ ಪಡೆಯದೆ ದ್ದುದರಿಂದ ಈ ಎಲ್ಲಾ ಅಂಶಗಳನ್ನೊಳಗೊಂಡಂತೆ ಹೊರಡಿಸಲಾಗಿದ್ದ "ಹಿಂಬರಹ"ದ ಸಂಖ್ಯೆ: ಆಸಾಂನಿ/16/ಆಡಳಿತ(1)/ 004–05 ದಿನಾಂಕ: 10.12.2004ರಲ್ಲಿ **(ಅನುಬಂಧ-ಎಲ್)** "ದಿನಾಂಕ: 14.10.2004ರಂದು ಅಪರಾಹ್ನ ಅವರನ್ನು ಜಿಲ್ಲಾ ಂಖ್ಯಾ ಸಂಗ್ರಹಣಾಧಿಕಾರಿಗಳು, ಶಿವಮೊಗ್ಗ ಇವರು ಬಿಡುಗಡೆಗೊಳಿಸಿದ್ದರಿಂದ ಅವರ ಸ್ಥಾನವು "ಪರಸ್ಪರ ಕೋರಿಕೆ" ರ್ಗಾವಣೆಯಿಂದ ಭರ್ತಿ ಆಗಿದ್ದರಿಂದ ದಿನಾಂಕ:14.10.2004ರ ನಂತರ ಆ ಕಛೇರಿಯಲ್ಲಿ ಮುಂದುವರೆಯಲು ವಕಾಶವಿಲ್ಲವಾದ್ದರಿಂದ ಆವರು ತಕ್ಷಣ ಅವರ ಕೋರಿಕೆ ಮೇಲೆ ವರ್ಗಾವಣೆಯಾದ ಕಛೇರಿಯಲ್ಲಿ ಅಂದರೆ ಜಿಲ್ಲಾ ಂಚಾಯತಿ, ಚಿಕ್ಕಮಗಳೂರು ಇಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವಂತೆ ಸೂಚಿಸಲಾಗಿತ್ತು.

ದಿನಾಂಕ: 14.09.2004ರಂದು ಬಿಡುಗಡೆ ಹೊಂದಿದ್ದ ಇವರು ಅಕ್ಟೋಬರ್ 2004, ನವೆಂಬರ್ 2004–2 ತಿಂಗಳು ಾಗೂ ಡಿಸೆಂಬರ್ 2004ರ 1 ಮತ್ತು 2ನೇ ದಿನಾಂಕಗಳಂದು ಶಿವಮೊಗ್ಗ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿಯಲ್ಲಿಯೇ ಲಸ ನಿರ್ವಹಿಸಿರುತ್ತೇನೆ ಎಂಬ ಅವರ ವಿವರಣೆ ಸಂಪೂರ್ಣ ಅತೃಪ್ತಿಕರ ಹಾಗೂ ನಂಬಲರ್ಹವಾಗುತ್ತದೆಯಾದ್ದರಿಂದ ರೋಪ-1ಕ್ಕೆ ಸಲ್ಲಿಸಿರುವ ಅವರ ವಿವರಣೆಯನ್ನು ತಿರಸ್ಕರಿಸಲಾಗಿದೆ. ಸದರಿ ಸಮೂಹ 'ಬಿ' ಅಧಿಕಾರಿಗಳು ಅವರ ವರಣೆಯೊಂದಿಗೆ ಅವರು ದಿನಾಂಕ: 14.09.2004ರಂದು (ಅನುಬಂಧ_ಎಫ್) ಬಿಡುಗಡೆ ಹೊಂದಿದ್ದರೂ, ಅಕ್ಟೋಬರ್– 004, ನವೆಂಬರ್ –2004 2 ತಿಂಗಳು ಮತ್ತು ಡಿಸೆಂಬರ್–2004ರ 1–2ನೇ ದಿನಾಂಕಗಳಂದು ಶಿವಮೊಗ್ಗ ಜಿಲ್ಲಾ ಸಾಂಖ್ಯಿಕ ಧಿಕಾರಿಗಳ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕುರಿತು ಅವರು ಸಲ್ಲಿಸಿರುವ ಹಾಜರಾತಿ ಪುಸ್ತಕದ ಪ್ರತಿಯನ್ನು ರಿಶೀಲಿಸಲಾಗಿ ಶ್ರೀ ಎ.ಕೆ. ಹನುಮಂತಪ್ಪ, ಅವರ ಸ್ಥಳದಲ್ಲಿ ಪರಸ್ಪರ ವರ್ಗಾವಣೆ ಹೊಂದಿದ್ದ ಶ್ರೀ ಎಸ್. ವಾಸುದೇವ, ಹಾಯಕ ನಿರ್ದೇಶಕರು, ದಿನಾಂಕ: 21.10.2004ರಂದೇ ಕರ್ತವ್ಯಕ್ಕೆ ಹಾಜರಾಗಿದ್ದರಿಂದ ಹಾಗೂ ಮಂಜೂರಾದ **"ಒಂದೇ ುದ್ದೆಯಲ್ಲಿ"** ಇಬ್ಬರೂ ಅಧಿಕಾರಿಗಳು ಕರ್ತವ್ಯ ನಿರ್ವಹಿಸುವುದಕ್ಕಾಗಲೀ ಅಥವಾ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡಲು ವಕಾಶವಿಲ್ಲವಾದ್ದರಿಂದ ಆ ಕಛೇರಿಯಿಂದ ಬಿಡುಗಡೆ ಹೊಂದಿದ್ದ ಸದರಿ ಅಪಾದಿತ ಸಹಾಯಕ ನಿರ್ದೇಶಕರಾದ ಶ್ರೀ ಎ.ಕೆ. ನುಮಂತಪ್ಪ, ಅವರು ಬಿಡುಗಡೆ ಹೊಂದಿದ ದಿನಾಂಕದ ನಂತರ ಹಾಜರಾತಿ ಪುಸ್ತಕದಲ್ಲಿ ಸಹಿ ಹಾಕಿದಲ್ಲಿ ಅದು ಸರ್ಕಾರದ ಛೇರಿಯಲ್ಲಿನ ದಾಖಲಾತಿಯನ್ನು ಒತ್ತಾಯಪೂರ್ವಕವಾಗಿ ಪಡೆದುಕೊಂಡ ಅಪರಾಧವೆಂದು (tamparing of office ecords) ಪರಿಗಣಿಸತಕ್ಕದ್ದಾಗಿದೆ ಹಾಗೂ ಇಂತಹ ಅಪರಾಧಕ್ಕಾಗಿ ಸದರಿ ಅವರ ವಿರುದ್ಧ ಪ್ರತ್ಯೇಕವಾದ ಕ್ರಮ ುರುಗಿಸುವುದನ್ನು ಕಾಯ್ದಿರಿಸಿ, ಅವರ ಮನವಿಯಲ್ಲಿನ ಈ ಅಂಶಗಳನ್ನು ಸಂಪೂರ್ಣವಾಗಿ ಅಸಮರ್ಪಕವೆಂದು ರಸ್ಕರಿಸಲಾಗಿದೆ.

ಆರೋಪ–2

ಮೇಲಿನ ಕಂಡಿಕೆ/ಆರೋಪ: 1ರಲ್ಲಿನ ಆಪಾದನೆಗಳಲ್ಲಿ ವಿವರಿಸಿದಂತೆ ದಿನಾಂಕ: 14.10.2004ರಂದು ಜಿಲ್ಲಾ ಸಂಖ್ಯಾ ಂಗ್ರಹಣಾಧಿಕಾರಿಗಳ ಕಛೇರಿ, ಶಿವಮೊಗ್ಗ ಇಲ್ಲಿಂದ ಬಿಡುಗಡೆಯಾಗಿದ್ದ ಸಮೂಹ 'ಬಿ' ಅಧಿಕಾರಿಗಳಾದ ನೀವು ವರ್ಗಾವಣೆ ಹೊಂದಿದ ಕಛೇರಿಯಲ್ಲಿ ತಕ್ಷಣ ವರದಿ ಮಾಡಿಕೊಳ್ಳದೆ ದಿನಾಂಕ:15.10.2004ರಿಂದ 02.09.2005ರ ವರೆಗೆ ಅಂದರೆ 10 ಂಗಳುಗಳಿಗಿಂತ ಹೆಚ್ಚಿನ ಅವಧಿಗೆ ಸರ್ಕಾರದ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿ ಸಮೂಹ 'ಬಿ' ವೃಂದಕ್ಕೆ ಸೇರಿದ ನೀವು ರ್ಕಾರದ ಅಧಿಕಾರಿಗಳಿಬ್ಬರಿಗೆ ಸಲ್ಲದ ರೀತಿಯಲ್ಲಿ ವರ್ತಿಸಿರುತ್ತೀರಿ.

ಕರ್ನಾಟಕ ನಾಗರಿಕ ಸೇವಾ ನಿಯಮಗಳು, 1957ರ ನಿಯಮ:88ರ ಅನ್ವಯ "ಸರ್ಕಾರಿ ನೌಕರನು ವರ್ಗಾವಣೆ ಹೊಂದಿದ ಸಂದರ್ಭದಲ್ಲಿ ಅವರ ಸೇರಿಕೆ ಕಾಲಾವಧಿಯನ್ನು ಮೀರಿ ಗೈರು ಹಾಜರಾದಲ್ಲಿ ಅಂತಹ ಗೈರು ಹಾಜರಾತಿಯು ನಿಯಮ: 106–ಎರ ಅನ್ವಯ ಅನಧಿಕೃತ ಗೈರುಹಾಜರಿ [illegible]" [illegible]ಗಿದ್ದರಿಂದ, ಪ್ರಸ್ತುತ ಪ್ರಕರಣದಲ್ಲಿ [illegible] ಕಾಲಾವಧಿಯನ್ನು ಮೀರಿ ದಿನಾಂಕ: 15.10.2004ರಿಂದ 02.09.2005ರ ವರೆಗೆ ದೀರ್ಘಾವಧಿ ಅನಧಿಕೃತ ಗೈರು ಹಾಜರಾ[illegible] ನೀವು ಕರ್ನಾಟಕ ನಾಗರೀಕ ಸೇವಾ(ನಡತೆ) ನಿಯಮಗಳು, 1966ರ ನಿಯಮ: 3ನ್ನು ಉಲ್ಲಂಘಿಸಿರುವುದರಿಂದ ನಿಮ್ಮ [illegible] ಇಲಾಖಾ ವಿಚಾರಣೆ ಏರ್ಪಡಿಸಲು ಉದ್ದೇಶಿಸಲಾಗಿದೆ.

ಆರೋಪ: 2ಕ್ಕೆ ಅವರು ಸಲ್ಲಿಸಿದ ವಿವರಣೆ:

ನನ್ನನ್ನು ಶಿವಮೊಗ್ಗ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿಯು ಕರ್ತವ್ಯದಿಂದ ದಿನಾಂಕ:14.10.2009ರಂದು ಬಿಡುಗಡೆ ಮಾಡಿದೆ ಎಂಬ ಆರೋಪ ಸತ್ಯವಲ್ಲ. ತಪ್ಪು ಮಾಹಿತಿಯಿಂದ ರಚಿಸಲ್ಪಟ್ಟ ಆರೋಪವಾಗಿದೆ. ಹಾಜರಿ ಪಟ್ಟಿಯ ಪ್ರಕಾರ ನನ್ನನ್ನು ದಿನಾಂಕ:02.12.2004ರ [illegible] ಬಿಡುಗಡೆಗೊಳಿಸಿರುತ್ತಾರೆ. ಈ ಬಗ್ಗೆ ನಾನು ತಮ್ಮ ಅವಗಾಹನೆಗಾಗಿ ಲಗತ್ತಿಸಿರುವ ನಿಶಾನೆ ಡಿ–1, ಡಿ–2, ಮತ್ತು ಡಿ–3ರ ದಸ್ತಾವೇಜುಗಳನ್ನು ಪರಾಂಬರಿಸಬೇಕೆಂದು ಪ್ರಾರ್ಥಿಸುತ್ತೇನೆ. ನಾನು ದಿನಾಂಕ:03.12.2004 ರಿಂದ 02.09.2005ರ ವರೆಗೆ ಗೈರು ಹಾಜರಾಗಿರುವುದಕ್ಕೆ ಸಕ್ಷಮ ಪ್ರಾಧಿಕಾರಿಯವರಿಗೆ ರಜೆ ಅರ್ಜಿಯನ್ನು ಸಹ [illegible] ಕೋರಿರುತ್ತೇನೆ. ನನ್ನ ಸಕ್ಷಮ ಪ್ರಾಧಿಕಾರಿಗಳು ನನ್ನ ರಜೆ ಅರ್ಜಿಯನ್ನು ಮರುಸ್ವೀಕರಿಸಿ ರಜೆ ಮಂಜೂರು ಮಾಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಈಗಾಗಲೇ ರವಾನಿಸಲಾಗಿದೆ ಎಂಬುದಾಗಿ ನನಗೆ ದಿನಾಂಕ:16.03.2008ರ ಪತ್ರದಲ್ಲಿ (ಸಂ.[illegible]/134/[illegible]–1/2006–07 ತಿಳಿಸಿರುತ್ತಾರೆ. ಸದರಿ ಪತ್ರದ ಛಾಯಾ ಪ್ರತಿಯನ್ನು ನಿಶಾನೆ ಡಿ–6 ಎಂದು ಗುರುತಿಸಿ ಒಪ್ಪಿಸಿರುವುದರ ಜೊತೆಗೆ ಆ ಪತ್ರದ ಕೊನೆ ಕಂಡಿಕೆಯನ್ನು ತಮ್ಮ ದಯಾಪೂರಿತವಾದ ಅವಗಾಹನೆಗೆ ತರಬಯಸುತ್ತೇನೆ.

"ಆದುದರಿಂದ ನಿಮ್ಮ ಎಲ್ಲಾ ಸಮಸ್ಯೆಗಳನ್ನು ಅರ್ಥೈಸಿಕೊಂಡು ಮಾನವೀಯ ದೃಷ್ಟಿಯ ನಿರ್ಧಾರವನ್ನು ತಳೆದು ನೀವು ಕೋರಿರುವ ರಜೆಯನ್ನು ಮಂಜೂರು ಮಾಡುವಂತೆ ಸರ್ಕಾರಕ್ಕೆ ಉಲ್ಲೇಖ(4)ರ ಈ ಕಛೇರಿಯ ಪತ್ರದಲ್ಲಿ ಶಿಫಾರಸ್ಸು ಮಾಡಿ ಈಗಾಗಲೇ ರವಾನಿಸಲಾಗಿದೆ".

ಮುಂದುವರೆದಂತೆ ಮಾನ್ಯ ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು, ಇವರು ದಿನಾಂಕ: 05/11–04–2008ರ ಪತ್ರದಲ್ಲಿ (ಸಂಖ್ಯೆ: [illegible]/247/[illegible]–1/2007–08/1068–70) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು ಇವರನ್ನು "ಮೇಲ್ಕಂಡ ಎಲ್ಲಾ ಮಾಹಿತಿಯೊಂದಿಗೆ ಸರ್ಕಾರಕ್ಕೆ ರವಾನಿಸುತ್ತಾ ಸದರಿಯವರು ಮಂಜೂರು ಮಾಡುವಂತೆ ಕೋರಿರುವ ರಜೆಯನ್ನು ಮಾನವೀಯ ದೃಷ್ಟಿಯಿಂದ ಮಂಜೂರು ಮಾಡುವಂತೆ ಕೋರಿ ಸಲ್ಲಿಸಿದೆ" ಎಂದು ಶಿಫಾರಸ್ಸು ಮಾಡಿರುತ್ತಾರೆ. ಸದರಿ ಪತ್ರದ ಪ್ರತಿಯನ್ನು ನಿಶಾನೆ ಡಿ–7 ಎಂದು ಗುರುತಿಸಿ ತಮ್ಮ ಚಿತ್ತ ಅವಗಾಹನೆಗೆ ಸಲ್ಲಿಸಿದೆ.

ಮೇಲಿನ ಎರಡು ಪತ್ರಗಳ (ನಿಶಾನೆ ಡಿ–6 ಮತ್ತು ಡಿ–7) ಹಿನ್ನೆಲೆಯಲ್ಲಿ ನನ್ನ ಗೈರು ಹಾಜರಿಯನ್ನು ಕೆ.ಸಿ.ಎಸ್.ಆರ್ ನಿಯಮ 106–ಎ ವ್ಯಾಪ್ತಿಗೆ ಒಳಪಡಿಸಲು ಬರುವುದಿಲ್ಲ. ಈ ಸಂದರ್ಭದಲ್ಲಿ 106–ಎ ನಿಯಮ ಉದ್ಧೃತ ಭಾಗವನ್ನು ಯಥಾವತ್ತಾಗಿ ತಮ್ಮ ಅವಗಾಹನೆಗಾಗಿ ಮಂಡಿಸಿರುತ್ತೇನೆ.

"Except where the Government Servant without leave granted by a competent Authority will also render such Government servent liable to disciplinary action for misconduct except where the Government servent estabilishes to the [illegible] of the authority competent to sanction leave that he was unable to join duty for reasons beyond his control"

ಮೇಲೆ ವಿವರಿಸಿರುವ ಅಂಶಗಳು, ಎರಡು ಪತ್ರಗಳು ಮತ್ತು 106–ಎ ನಿಯಮದ ಅಂತಿಮ ಕಂಡಿಕೆ ಪ್ರಕಾರ ನಾನು ಮುರ್ನಡತೆ ಎಸಗಿಲ್ಲ ಎಂಬುದು ವ್ಯಕ್ತಪಡುತ್ತದೆ. ಈ ಕಾರಣದಿಂದ ನನ್ನ ಮೇಲೆ ಹೊರಿಸಿರುವ ಎರಡನೇ ಆರೋಪವು ಸಿಂಧುವಾಗುವುದಿಲ್ಲ. ಆದ್ದರಿಂದ ಆರೋಪವನ್ನು ಒಪ್ಪದೇ ನಿರಾಕರಿಸುತ್ತೇನೆ.

ಆರೋಪ: 2ಕ್ಕೆ ಸಲ್ಲಿಸಿರುವ ಅವರ ವಿವರಣೆಯ ವಿಶ್ಲೇಷಣೆ:

2ನೇ ಆರೋಪಕ್ಕೆ ಸಂಬಂಧಿಸಿದಂತೆ [illegible] ಸರ್ಕಾರಿ ಅಧಿಕಾರಿಗಳಾದ ಶ್ರೀ ಎ.ಕೆ. [illegible]ಮಂತಪ್ಪ, ಸಹಾಯಕ ನಿರ್ದೇಶಕರು, ಸಲ್ಲಿಸಿರುವ ಅವರ ವಿವರಣೆಯನ್ನು "ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು, ಶಿವಮೊಗ್ಗ ಇವರು ಆ ಕಛೇರಿಯಿಂದ ದಿನಾಂಕ:14.10.2004ರಂದು ಬಿಡುಗಡೆ ಮಾಡಲಾಗಿದೆ ಎಂಬ ಆರೋಪವು ಸತ್ಯವಲ್ಲ ಹಾಗೂ ರಚಿಸಲ್ಪಟ್ಟ ಆರೋಪವಾಗಿರುತ್ತದೆ ಎಂದು ವಾದಿಸಿರುತ್ತಾರೆ.

ಶ್ರೀ ಎ.ಕೆ. ಹನುಮಂತಪ್ಪ, ಸಹಾಯಕ ನಿರ್ದೇಶಕರು, ಮತ್ತು ಇತರೆ 6 ಸಹಾಯಕ ನಿರ್ದೇಶಕರನ್ನು ದಿನಾಂಕ: 30.09.2004ರಂದು ಹೊರಡಿಸಲಾದ ವರ್ಗಾವಣೆ ಆದೇಶದಲ್ಲಿಯೇ “ಸಂಬಂಧಿಸಿದ ಕಛೇರಿಯ ಅಧಿಕಾರಿಗಳು ವರ್ಗಾವಣೆ ಹೊಂದಿದ ಅಧಿಕಾರಿಗಳನ್ನು ಕರ್ತವ್ಯದಿಂದ ತಕ್ಷಣ ಬಿಡುಗಡೆಗೊಳಿಸಿ ವರ್ಗಾವಣೆ ಆಗಿರುವ ಸ್ಥಳದಲ್ಲಿ ಕರ್ತವ್ಯಕ್ಕೆ ಹಾಜರಾಗಲು ಸೂಚನೆ ನೀಡತಕ್ಕದ್ದೆಂದು ಆದೇಶಿಸಿದ್ದರಿಂದ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು. ಅವರನ್ನು ಬಿಡುಗಡೆ ಮಾಡಿದ್ದು, ಅವರನ್ನು ಆ ಕಛೇರಿಯಿಂದ ಬಿಡುಗಡೆ ಮಾಡಲೇ ಇಲ್ಲವೆಂಬ ಅವರ ಹೇಳಿಕೆಯು ಸಮರ್ಥನೀಯವಾಗಿಲ್ಲವಾದ್ದರಿಂದ ಯಾವುದೇ ಕಾರಣಕ್ಕೂ ಒಪ್ಪಲು ಸಾಧ್ಯವಿಲ್ಲ.

ಸದರಿ ಆಪಾದಿತ ಸರ್ಕಾರಿ ಅಧಿಕಾರಿಗಳು ವರ್ಗಾವಣೆ ಆದೇಶದಲ್ಲಿದ್ದ ಅವಧಿಯಲ್ಲಿ ಗೈರು ಹಾಜರಾದ ಅವಧಿಗೆ ಸಂಬಂಧಿಸಿದಂತೆ ರಜೆ ಮಂಜೂರಾತಿಗಾಗಿ ಸಲ್ಲಿಸಿದ್ದ ಅವರ ಮನವಿಯಲ್ಲಿ ಸದರಿ ಅವರು ಕೋರಿಕೆ ಮೇಲೆ ವರ್ಗಾವಣೆ ಹೊಂದಿರುವ ಕುರಿತು ಹಾಗೂ ಆ ವರ್ಗಾವಣೆ ವಿರುದ್ಧ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಮೊರೆ ಹೋಗಿದ್ದನ್ನು ಕುರಿತು ಯಾವುದೇ ಮಾಹಿತಿಯನ್ನು ಸಲ್ಲಿಸದೇ ಇದ್ದುದರಿಂದ ಇದೊಂದು ಸಾಮಾನ್ಯ ರಜೆ ಪ್ರಕರಣವೆಂದು ಪರಿಗಣಿಸಿ ಮಾನವೀಯ ದೃಷ್ಟಿಯಿಂದ ರಜೆ ಮಂಜೂರು ಮಾಡುವಂತೆ ಸರ್ಕಾರವನ್ನು ಕೋರಲಾಗಿತ್ತಾದ್ದರಿಂದ ಈ ಹಂತದಲ್ಲಿ ರಜೆ ಮಂಜೂರಾತಿಗಾಗಿ ಪ್ರಸ್ತಾವನೆ ಸಲ್ಲಿಸಿದ್ದ ಇಲಾಖಾ ಮುಖ್ಯಸ್ಥರನ್ನು ಪರೋಕ್ಷವಾಗಿ ತಪ್ಪಿತಸ್ಥರೆಂಬ ರೀತಿಯಲ್ಲಿ 2ನೇ ಆರೋಪಕ್ಕೆ ಸಲ್ಲಿಸಿರುವ ಅವರ ವಿವರಣೆಯು ಪರಿಗಣಿಸಲು ಸೂಕ್ತವಲ್ಲವೆಂದು ತಿರಸ್ಕರಿಸಲಾಗಿದೆ.

ಆರೋಪ-3:

ಸರ್ಕಾರದ ಸೇವೆಯ ಸಮೂಹ ‘ಬಿ’ ವೃಂದದ ಒಬ್ಬ ಜವಾಬ್ದಾರಿಯುತ ಹುದ್ದೆಯನ್ನು ಹೊಂದಿರುವ ಅಧಿಕಾರಿಯಾದ ನೀವು 326 ದಿನಗಳಷ್ಟು ಸರ್ಕಾರದ ಸೇವೆಗೆ ಅನಧಿಕೃತ ಗೈರು ಹಾಜರಾಗಿ ನಿಮಗೆ ವಹಿಸಲಾದ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸದೇ ಬೇಜವಾಬ್ದಾರಿಯಿಂದ ವರ್ತಿಸಿರುವ ಕುರಿತು, ನಿಮ್ಮ ವಿರುದ್ಧ ಇಲಾಖಾ ವಿಚಾರಣೆ ಏರ್ಪಡಿಸಲು ಉದ್ದೇಶಿಸಲಾಗಿದೆ.

ಆರೋಪ: 3ಕ್ಕೆ ಸಲ್ಲಿಸಿರುವ ಅವರ ವಿವರಣೆ:

ನಾನು ತಮಗೆ ಸಲ್ಲಿಸಿರುವ ನಿಶಾನೆ ಡಿ-6 ಮತ್ತು ಡಿ-7 ಎಂಬ ಎರಡು ಸರ್ಕಾರದ ದಾಖಲೆಗಳೂ ಮತ್ತು ನಿಯಮ 106-ಎ, ಆರೋಪವನ್ನು ಸಮರ್ಥಿಸುವುದಿಲ್ಲ. ಆದಕಾರಣ ನನ್ನ ಮೇಲೆ ಹೊರಿಸಿರುವ ಆರೋಪವು 106-ಎ ನಿಯಮಕ್ಕೆ (ನಾನು ಮೇಲಿನ ಕಂಡಿಕೆಯಲ್ಲಿ ಮಂಡಿಸಿರುವ) ವಿರುದ್ಧವಾಗಿರುತ್ತದೆ ಎಂದು ದೃಢಪಡಿಸುತ್ತದೆ. ಆದ್ದರಿಂದ ಆರೋಪವನ್ನು ಸಹ ಒಪ್ಪದೇ ನಿರಾಕರಿಸುತ್ತೇನೆ.

ಆರೋಪ: 3ಕ್ಕೆ ಸಲ್ಲಿಸಿರುವ ಅವರ ವಿವರಣೆಯ ವಿಶ್ಲೇಷಣೆ:

ಆಪಾದಿತ ಸರ್ಕಾರಿ ಅಧಿಕಾರಿಗಳಾದ ಶ್ರೀ ಎ.ಕೆ. ಹನುಮಂತಪ್ಪ, ಸಹಾಯಕ ನಿರ್ದೇಶಕರು, ಮೇಲೆ ವಿವರಿಸಿದಂತೆ ಅವರ ಗೈರು ಹಾಜರಾತಿ ಅವಧಿಯನ್ನು ಅವರಿಗೆ ರಜಾ ಮಂಜೂರಾತಿ ಮಾಡುವಂತೆ ದಿನಾಂಕ: 05.04.2008ರಂದು ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆಯನ್ನು ಉಲ್ಲೇಖಿಸುತ್ತಾ, ಇಲಾಖಾ ಮುಖ್ಯಸ್ಥರದೇ ತಪ್ಪೆಂಬುವ ರೀತಿಯಲ್ಲಿ ವಿವರಣೆ ಸಲ್ಲಿಸಿದ್ದನ್ನು ಪರಿಶೀಲಿಸಲಾಗಿ ಹಾಗೂ 3ನೇ ಆರೋಪದಲ್ಲಿ ಆರೋಪಿಸಿದಂತೆ ಅವರ ವೈಯಕ್ತಿಕ ಅನಾನುಕೂಲತೆಗಳು/ತೊಂದರೆಗಳು ಏನೇ ಆಗಿದ್ದರೂ ಅವರ ಕೋರಿಕೆ ಅನ್ವಯ ಅವರನ್ನು ವರ್ಗಾವಣೆ ಮಾಡಿದ್ದ ಸ್ಥಳ/ಕಛೇರಿಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡು ನಂತರ ರಜೆ ಉಪಯೋಗಿಸಬಹುದಾಗಿತ್ತಾದರಿಂದ, ಹಾಗೂ 3ನೇ ಆರೋಪದಲ್ಲಿ ವಿವರಿಸಿದಂತೆ ಈ ಜವಾಬ್ದಾರಿಯುತ ಸಮೂಹ ‘ಬಿ’ ವೃಂದದ ಅಧಿಕಾರಿಗಳಾದ ಸದರಿ ಅವರು ಸುದೀರ್ಘವಾದ ಅವಧಿಯಲ್ಲಿ ಸರ್ಕಾರದ ಕರ್ತವ್ಯದಿಂದ ವಿಮುಖವಾಗಿ ಉಳಿದು ಸರ್ಕಾರಿ ಅಧಿಕಾರಿಗಳೊಬ್ಬರಿಗೆ ಸಲ್ಲದ ರೀತಿಯಲ್ಲಿ ವರ್ತಿಸಿದ್ದರಿಂದ ಹಾಗೂ 3ನೇ ಆರೋಪಕ್ಕೆ ಸಂಬಂಧಿಸಿದ ಅವರ ವಿವರಣೆಯಲ್ಲಿ ಕೂಡ ಇಲಾಖಾ ಮುಖ್ಯಸ್ಥರನ್ನು ಪರೋಕ್ಷವಾಗಿ ತಪ್ಪಿತಸ್ಥರೆಂಬ ರೀತಿಯಲ್ಲಿ ವಿವರಣೆ ನೀಡಿದ್ದನ್ನು ಒಪ್ಪಲು ಸಾಧ್ಯವಿಲ್ಲವೆಂದು ತಿರಸ್ಕರಿಸಲಾಗಿದೆ.

ಆರೋಪ: 4

ದಿನಾಂಕ: 14.10.2004ರಂದು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ಶಿವಮೊಗ್ಗ ಇಲ್ಲಿಂದ ಬಿಡುಗಡೆ ಹೊಂದಿದ ತಕ್ಷಣ ವರ್ಗಾವಣೆ ಹೊಂದಿದ ಕಛೇರಿಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೆ ದಿನಾಂಕ: 15.04.2004ರಿಂದ 02.09.2005ರ ವರೆಗೆ “ಅನಧಿಕೃತ ಗೈರು ಹಾಜರಾಗಿ” ದಿನಾಂಕ:03.09.2005ರಂದು ಅಂದರೆ 326 ದಿನಗಳಷ್ಟು ದಿನ ಅನಧಿಕೃತ ಗೈರು ಹಾಜರಾಗಿ ಪತ್ನಿಯ ಅನಾರೋಗ್ಯದ ಕಾರಣ ನೀಡಿ ಇಷ್ಟೊಂದು ದೀರ್ಘಾವಧಿ ಅವಧಿಯವರೆಗೆ ರಜೆ ಮಂಜೂರು ಮಾಡುವಂತೆ ಕೋರಿರುವುದನ್ನು ಪರಿಶೀಲಿಸಲಾಗಿ ಸಮೂಹ ‘ಬಿ’ ವೃಂದದ ಅಧಿಕಾರಿಗಳಾದ ನೀವು ನಿಮ್ಮ ಪತ್ನಿಯ ಆರೋಗ್ಯ ಅಥವಾ ಇನ್ನಿತರ ಯಾವುದೇ ಕಾರಣಗಳಿದ್ದರೂ, ನಿಮ್ಮ ಕೋರಿಕೆ ಅನ್ವಯ ವರ್ಗಾವಣೆ ಮಾಡಲಾಗಿದ್ದ

ಕಛೇರಿಯಲ್ಲಿ (ಜಿಲ್ಲಾ ಪಂಚಾಯಿತಿ ಚಿಕ್ಕಮಗಳೂರು) ಕರ್ತವ್ಯಕ್ಕೆ ವರದಿ ಮಾಡಿಕೊಂಡ ನಂತರ ಸೂಕ್ತ ಮಾರ್ಗದ ಅನ್ವಯ ರಜೆ ಅರ್ಜಿ ಸಲ್ಲಿಸಿ ರಜೆ ಮಂಜೂರಾತಿ ಪಡೆದುಕೊಂಡು ರಜೆ ಉಪಯೋಗಿಸಬಹುದಾಗಿತ್ತಾದರೂ ನಿಯಮಗಳ ಅನ್ವಯ ಇಂತಹ ಸಮುಚಿತ ಮಾರ್ಗವನ್ನು ಅನುಸರಿಸದೇ ಸರ್ಕಾರದ ಕರ್ತವ್ಯಕ್ಕೆ ದೀರ್ಘಾವಧಿ ಅನಧಿಕೃತ ಗೈರು ಹಾಜರಾಗಿದ್ದನ್ನು ಪರಿಶೀಲಿಸಲಾಗಿ, ಕರ್ನಾಟಕ ನಾಗರಿಕ ಸೇವಾ ನಿಯಮಗಳು, 1957ರ ನಿಯಮ:83(1)ರ ಅನ್ವಯ "ಸರ್ಕಾರಿ ನೌಕರನು ವರ್ಗಾವಣೆ ಹೊಂದಿ ರಜೆ ಕೋರಿದರೆ ವೈದ್ಯಕೀಯ ಕಾರಣದ ಹೊರತು (ಅಂದರೆ ಆತನ ಅಂದರೆ ಸರ್ಕಾರಿ ನೌಕರನು ಸ್ವಂತ ಆರೋಗ್ಯಕ್ಕೆ ಸಂಬಂಧಿಸಿದಂತೆ ವೈದ್ಯಕೀಯ ಕಾರಣದ ಹೊರತು) ಬೇರಾವುದೇ ಕಾರಣಕ್ಕಾಗಿ ಅವನಿಗೆ ರಜೆಯನ್ನು ನೀಡತಕ್ಕದ್ದಲ್ಲವೆಂದು" ಸ್ಪಷ್ಟವಾಗಿದ್ದರಿಂದ, ಮೇಲೆ ತಿಳಿಸಲಾದ ನಿಯಮಗಳಿಗೆ ವಿರುದ್ಧವಾಗಿ ನೀವು ವರ್ತಿಸಿರುವುದು ಮೇಲ್ನೋಟಕ್ಕೆ ಸಾಬೀತಾಗಿದ್ದರಿಂದ ನಿಮ್ಮ ವಿರುದ್ಧ ಇಲಾಖಾ ವಿಚಾರಣೆ ಏರ್ಪಡಿಸಲು ಉದ್ದೇಶಿಸಲಾಗಿದೆ.

ಆರೋಪ: 4ಕ್ಕೆ ಸಲ್ಲಿಸಿರುವ ಅವರ ವಿವರಣೆ:

ನಾಲ್ಕನೇ ಆರೋಪದಲ್ಲಿ ವಿವರಿಸಿರುವ ಎಲ್ಲಾ ಅಂಶಗಳು ತಾವು ನನಗೆ ಬರೆದಿರುವ ದಿನಾಂಕ:16.02.2008ರ ಪತ್ರಕ್ಕೆ (ನಿಶಾನೆ ಡಿ–6 ಎಂದು ಗುರುತಿಸಿ ಲಗತ್ತಿಸಿರುವ ದಸ್ತಾವೇಜು) ಮತ್ತು ತಾವು ನನಗೆ ಮಾನವೀಯತೆ ದೃಷ್ಟಿಯಿಂದ ರಜೆ ಮಂಜೂರು ಮಾಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವ ದಿನಾಂಕ: 05/11.04.2008ರ ಪತ್ರಕ್ಕೆ (ನಿಶಾನೆ ಡಿ–7 ಎಂದು ಗುರುತಿಸಿ ಲಗತ್ತಿಸಿರುವ ದಸ್ತಾವೇಜು) ವಿರುದ್ಧವಾಗಿರುತ್ತದೆ. . ಒಂದು ವರ್ಷದ ಹಿಂದೆ ಅಂದರೆ 2008ರಲ್ಲಿ ನನ್ನ ಎಲ್ಲಾ ಕಷ್ಟಗಳನ್ನು ಅರ್ಥೈಸಿಕೊಂಡು ಮಾನವೀಯತೆ ತೋರಿದ ತಾವು 2009ರಲ್ಲಿ ತಮ್ಮ ನಿಲುವನ್ನು ಬದಲಿಸಿ ನನ್ನ ಮೇಲೆ ಆರೋಪ ಹೊರಿಸಿರುವುದು ಎಷ್ಟು ಸಮಂಜಸ ಎಂಬುದನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ. ನನ್ನ ಹೆಂಡತಿ ಕಿಡ್ನಿ ತೊಂದರೆಯಿಂದ ನರಳುತ್ತಿರುವಾಗ ಆಕೆಯ ಗಂಡನಾಗಿ ನಾನು ಸನಿಹದಲ್ಲಿದ್ದು ಆಕೆಯಲ್ಲಿ ಆತ್ಮಸ್ಥೈರ್ಯ ತುಂಬುವುದರ ಜೊತೆ ಜೊತೆಗೆ ಸೂಕ್ತ ವೈದ್ಯಕೀಯ ಚಿಕಿತ್ಸೆ ಮತ್ತು ಆರೈಕೆಯನ್ನು ನಿರಂತರವಾಗಿ ಮಾಡಬೇಕಾದ್ದು ನನ್ನ ಕರ್ತವ್ಯ ಮತ್ತು ಜವಾಬ್ದಾರಿಯಾಗಿದೆ. ಈ ಹಿನ್ನಲೆಯಲ್ಲಿ ನಾನು ಕರ್ತವ್ಯಕ್ಕೆ ಹೋಗಲು ಸಾಧ್ಯವಾಗಿರಲಿಲ್ಲ. ಈ ಎಲ್ಲಾ ವಾಸ್ತವ ಸಂಗತಿಗಳನ್ನು ತಾವು ಮನಗಂಡ ನಂತರವೇ ನಾನು ಪ್ರಾರ್ಥಿಸಿರುವ ರಜೆಯನ್ನು ಮಾನವೀಯತೆ ದೃಷ್ಟಿಯಿಂದ ಪರಿಗಣಿಸಿ ಮಂಜೂರು ಮಾಡುವಂತೆ ಶಿಫಾರಸ್ಸು ಮಾಡಿದ್ದೀರಿ. ತಮ್ಮ ಈ ಕ್ರಮವೂ ಸಹ 106–ಎ ನಿಯಮದ Exception clause ಅಡಿ ಬರುತ್ತದೆ. ಆದುದರಿಂದ ತಾವು ದಿನಾಂಕ:05/11.04.2008ರ ಪತ್ರದಲ್ಲಿ ರಜೆ ಮಂಜೂರಾತಿಗೆ ಶಿಫಾರಸ್ಸು ಮಾಡಿರುವ ಸತ್ಯವನ್ನು ಪುನರ್ ಮನನ ಮಾಡಿಕೊಂಡು "ಆರೋಪ ಮಾಡಲೇ ಬೇಕೆಂದು ಮಾಡಿರುವ ಆರೋಪವನ್ನು" ಮರು ಪರಿಶೀಲಿಸಿ ಆರೋಪವು ಸತ್ಯವಲ್ಲವೆಂದು ಪರಿಗಣಿಸಬೇಕೆಂದು ಪ್ರಾರ್ಥಿಸುತ್ತೇನೆ. ಈ ಸಂದರ್ಭದಲ್ಲಿ ಮಾನ್ಯ ಶ್ರೀ ರಾಮಾ ಜೋಯ್ಸ್, ಸನ್ಮಾನ್ಯ ನಿವೃತ್ತ ಮುಖ್ಯ ನ್ಯಾಯಾಧೀಶರು ಬರೆದು ಪ್ರಕಟಿಸಿದ "SERVICES UNDER THE STATE" ಪುಸ್ತಕದಲ್ಲಿ ಪ್ರಸ್ತಾಪಿಸಿರುವ ಶುಕ್ರ ನೀತಿಯನ್ನು ಈ ಕೆಳಗೆ ಮಂಡಿಸಿರುತ್ತೇನೆ.

" Low Salary, harsh treatment, insults and imposition of heavy penalties are causes of unrest among the employees. Statisfied with adequate wages, promoted honourbly and consoled or cheered up gentle words, the employes would never desert the king".

ಮೇಲಿನ ತತ್ವವು ಆಡಳಿತ ನಡೆಸುವವರಿಗೆ ಈಗಲೂ ದಾರಿ ದೀಪವಾಗಿದೆ ಎಂದು ಭಾವಿಸಿ ತಮ್ಮ ಅವಗಾಹನೆಗೆ ಮಂಡಿಸಿರುತ್ತೇನೆ.

ಮೇಲೆ ವಿವರಿಸಿರುವ ವಿಷಯಗಳ ವಸ್ತು ಸ್ಥಿತಿಯ ಹಿನ್ನೆಲೆಯಲ್ಲಿ ನಾಲ್ಕನೇ ಆರೋಪವು ಸತ್ಯವಲ್ಲವಾದ್ದರಿಂದ ಆರೋಪವನ್ನು ಒಪ್ಪದೇ ನಿರಾಕರಿಸುತ್ತೇನೆ.

ಆರೋಪ: 4ಕ್ಕೆ ಸಲ್ಲಿಸಿರುವ ಅವರ ವಿವರಣೆಯ ವಿಶ್ಲೇಷಣೆ:

ಸದರಿ ಆಪಾದಿತ ಸರ್ಕಾರಿ ಅಧಿಕಾರಿಗಳು 4ನೇ ಆರೋಪಕ್ಕೆ ಸಂಬಂಧಿಸಿದಂತೆ ಸಲ್ಲಿಸಿರುವ ಅವರ ವಿವರಣೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದಲ್ಲಿ ದಿನಾಂಕ:05/11.04.2008 ರಂದು ಈ ನಿರ್ದೇಶನಾಲಯದಿಂದ ಸಲ್ಲಿಸಿದ ಪ್ರಸ್ತಾವನೆಯಲ್ಲಿ ಅವರಿಗೆ ರಜಾ ಮಂಜೂರು ಮಾಡುವಂತೆ ಕೋರಿದ್ದನ್ನು ನಂತರ ಅವರ ವಿರುದ್ಧ ಇಲಾಖಾ ವಿಚಾರಣೆ ಏರ್ಪಡಿಸಿರುವ ಕುರಿತು ಪ್ರಶ್ನಿಸಿದ್ದು, ಸದರಿ ಅಧಿಕಾರಿಗಳು ಸಲ್ಲಿಸಿದ್ದ ರಜಾ ಅರ್ಜಿಗಳಲ್ಲಿ ಯಾವುದೇ ಹಂತದಲ್ಲಿಯೂ ಅವರ ವರ್ಗಾವಣೆಯು ಕೋರಿಕೆ ವರ್ಗಾವಣೆ ಕುರಿತು ಸರ್ಕಾರದ/ಇಲಾಖಾ ಮುಖ್ಯಸ್ಥರ ವಿರುದ್ಧ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಲ್ಲಿಸಿದ್ದ ಮಾಹಿತಿ ಸಲ್ಲಿಸದೆ ಇದ್ದುದರಿಂದ ಮಾನವೀಯ ದೃಷ್ಟಿಯಿಂದ ರಜೆ ಮಂಜೂರಾತಿಗಾಗಿ ಪ್ರಸ್ತಾವನೆ ಸಲ್ಲಿಸಲಾಗಿತ್ತು.

ಸದರಿ ಅಧಿಕಾರಿಗಳು ಅವರ ವರ್ಗಾವಣೆಗೆ ಸಂಬಂಧಿಸಿದಂತೆ ಸಂಪೂರ್ಣವಾದ ಮಾಹಿತಿ ಒದಗಿಸಿದ್ದಲ್ಲಿ ಅವರ ಪ್ರಕರಣವು ಈ ಹಂತದವರೆಗೂ ಮುಂದುವರೆಯುವ ಸಾಧ್ಯತೆ ಇರಲಿಲ್ಲವಾದ್ದರಿಂದ ಆರೋಪ-4ಕ್ಕೆ ಸಂಬಂಧಿಸಿದಂತೆ ಅವರ ವಿವರಣೆಯನ್ನು ಪರಿಗಣಿಸಲು ಸೂಕ್ತವಲ್ಲವೆಂದು ತಿರಸ್ಕರಿಸಲಾಗಿದೆ.

ಸದರಿ ಸಹಾಯಕ ನಿರ್ದೇಶಕರಾದ ಶ್ರೀ ಎ.ಕೆ. ಹನುಮಂತಪ್ಪ, ಅವರು ಆರೋಪ: 4ಕ್ಕೆ ಸಲ್ಲಿಸಿರುವ ಅವರ ವಿವರಣೆಯಲ್ಲಿ ಇನ್ನಿತರ ವಿಷಯಗಳೊಂದಿಗೆ ನಿವೃತ್ತ ಮುಖ್ಯ ನ್ಯಾಯಾಧೀಶರು ಬರೆಯಲಾದ "Services Under the State" "low Salary, harsh treatment, insults and imposition of penalty are causes of unrest" ಎಂಬುದನ್ನು ವಿವರಿಸಿದ್ದು, ಸದರಿ ಅಧಿಕಾರಿಗಳಾದ ಶ್ರೀ ಎ.ಕೆ. ಹನುಮಂತಪ್ಪ, ಸಹಾಯಕ ನಿರ್ದೇಶಕರು, ರೂ 11400 ರಿಂದ 21600ರ ವರೆಗಿನ ಉತ್ತಮ ವೇತನ ಶ್ರೇಣಿ ಹೊಂದಿರುವ ಸಮೂಹ 'ಬಿ' ವೃಂದದ ಹಾಗೂ ಸರ್ಕಾರದ ಸೇವೆಗೆ ಸೇರಿದ ನಂತರ 2-3 ಬಡ್ತಿ ಸಹಿತ ಅನೇಕ ಉತ್ತಮವಾದ ಸೌಲಭ್ಯ ಪಡೆದುಕೊಂಡಿರುವ ಸರ್ಕಾರದ ಒಂದು ಭಾಗವಾದ ಅಧಿಕಾರಿಗಳ ವರ್ಗಕ್ಕೆ ಸೇರಿದವರಾಗಿದ್ದರಿಂದ ಮೇಲಿನ ಅಂಶಗಳು ಯಾವುದೊಂದು ಅವರಿಗೆ ಅನ್ವಯಿಸಲು ಸಾಧ್ಯವಿಲ್ಲವೆಂದು ಅವರ ವಿವರಣೆಯನ್ನು ಒಪ್ಪಲು ಸಾಧ್ಯವಿಲ್ಲವೆಂದು ತಿರಸ್ಕರಿಸಲಾಗಿದೆ.

ಆರೋಪ: 5

ದಿನಾಂಕ: 15.04.2004ರಿಂದ 02.09.2005ರ ವರೆಗಿನ ನಿಮ್ಮ ಅನಧಿಕೃತ ಗೈರು ಹಾಜರಾತಿಯನ್ನು ಸಕ್ರಮಗೊಳಿಸುವ ಕುರಿತು ದಿನಾಂಕ: 26.06.2008ರಂದು ಸಲ್ಲಿಸಿದ ನಿಮ್ಮ ಅರ್ಜಿಯೊಂದರಲ್ಲಿ ನಿಮ್ಮ ಹಕ್ಕಿನಲ್ಲಿರುವ ಗಳಿಕೆ ರಜೆ/ಪರಿವರ್ತಿತ ರಜೆ ಹಾಗೂ ನಿಮ್ಮ ರಜೆಯಲ್ಲಿ ಕೊರತೆ ಉಂಟಾದಲ್ಲಿ ಹಕ್ಕಿನಲ್ಲಿಲ್ಲದ ರಜೆ (leave not due) ಮಂಜೂರು ಮಾಡಬೇಕೆಂಬ ನಿಮ್ಮ ಕೋರಿಕೆಯನ್ನು ಪರಿಶೀಲಿಸಲಾಗಿ ನಿಮ್ಮ ಈ ಕೋರಿಕೆಯು ಕರ್ನಾಟಕ ನಾಗರೀಕ ಸೇವಾ ನಿಯಮಗಳು, 1957ರ ನಿಯಮ:114ರ ಅನ್ವಯ ಹಕ್ಕಿನಲ್ಲಿಲ್ಲದ ರಜೆಯನ್ನು (leave not due) ಸುದೀರ್ಘವಾದ ಖಾಯಿಲೆಯಿಂದ ಬಳಲುತ್ತಿರುವ "ಸರ್ಕಾರಿ ನೌಕರನಿಗೆ" ಮಾತ್ರ ಅದೇ ನಿಯಮಗಳಲ್ಲಿ ವಿಧಿಸಲಾದ ಷರತ್ತುಗಳ ಅನ್ವಯ, ಮಂಜೂರು ಮಾಡಬಹುದಾಗಿದ್ದರಿಂದ ನೀವು ಸಲ್ಲಿಸಿರುವ ಕೋರಿಕೆಯು ಮೇಲೆ ತಿಳಿಸಲಾದ ನಿಯಮಗಳಿಗೆ ವಿರುದ್ಧವಾಗಿರುವುದರಿಂದ, ಸರ್ಕಾರದ ಜವಾಬ್ದಾರಿಯುತ ಸಮೂಹ 'ಬಿ' ಅಧಿಕಾರಿಯಾದ ನೀವು ಮೇಲಿನ ನಿಯಮಗಳನ್ನು ಉಲ್ಲಂಘಿಸಿ ದಿನಾಂಕ: 15.10.2004 ರಿಂದ 02.09.2005ರ ವರೆಗೆ ಅನಧಿಕೃತ ಗೈರು ಹಾಜರಾಗಿದ್ದರಿಂದ ನಿಮ್ಮ ವಿರುದ್ಧ ಇಲಾಖಾ ವಿಚಾರಣೆ ಏರ್ಪಡಿಸಲು ಉದ್ದೇಶಿಸಲಾಗಿದೆ.

ಆರೋಪ: 5ಕ್ಕೆ ಸಲ್ಲಿಸಿರುವ ಅವರ ವಿವರಣೆ:

ಈ ಆರೋಪದಲ್ಲಿ ನಾನು ರಜೆ ಮಂಜೂರಾತಿಗಾಗಿ ಕೋರಿರುವ ನಿಯಮಗಳ ಬಗ್ಗೆ ವಿಶ್ಲೇಷಣೆ ಮಾಡಲಾಗಿದೆ. ನಿಯಮವನ್ನು ವಿಶ್ಲೇಷಿಸಿದ ಬಳಿಕ ನಾನು ನಿಯಮಗಳನ್ನು ಉಲ್ಲಂಘಿಸಿರುತ್ತೇನೆ ಎಂಬ ಆರೋಪ ಹೊರಿಸಲಾಗಿದೆ. ಈ ಆರೋಪದ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿದರ ನಿಯಮಗಳಲ್ಲಿ ಕಂಡು ಬರುವ ವ್ಯತ್ಯಾಸಗಳೇ ಹೊರತು ನನ್ನ ದುರ್ನಡತೆಯ ವಿಷಯ ಮುಖ್ಯವಾಗಿಲ್ಲ. ಕೆ.ಸಿ.ಎಸ್.ಆರ್ ನಿಯಮ 109ರಲ್ಲಿ ಹೇಳಿರುವುದನ್ನು ಯಥಾವತ್ತಾಗಿ ಮಂಡಿಸಿರುತ್ತೇನೆ.

"109: Any kind of leave under these rules may be granted in combination with or in continuation of any kind of leave (except casual leave)

ನಾನು ಕೋರಿರುವ leave not due ರಜೆಯು 114ನೇ ನಿಯಮದ ವ್ಯಾಪ್ತಿಯಲ್ಲಿ ಬರುವುದಿಲ್ಲವಾದರೆ ಮೇಲೆ ಹೇಳಿರುವ 109ನೇ ನಿಯಮದಡಿ ಹಕ್ಕಿನಲ್ಲಿರುವ ರಜೆಯನ್ನು ಮಂಜೂರು ಮಾಡಬಹುದಾಗಿದೆ. ಉಳಿದ ಅವಧಿಯನ್ನು 117ನೇ ನಿಯಮದಡಿ ವಿಶೇಷ ಅಸಾಧಾರಣ (ರಜೆ ಸಂಬಳ ರಹಿತ) ಎಂದು ಪರಿಗಣಿಸಿ ಗೈರುಹಾಜರಿ ಅವಧಿಯನ್ನು ಸಕ್ರಮಗೊಳಿಸಲು ಅವಕಾಶವಿರುತ್ತದೆ. ನನ್ನ ಮೇಲಿನ ಐದನೇ ಆರೋಪವು ಒಂದರಿಂದ 4ರ ವರೆಗಿನ ಆರೋಪಗಳ ಪುನಾರಾವರ್ತನೆ ಆಗಿರುವುದರಿಂದ ಸದರಿ ಆರೋಪಗಳಿಗೆ ನಾನು ಸಲ್ಲಿಸಿರುವ ಹೇಳಿಕೆಯು ಈ ಆರೋಪಕ್ಕೂ ಅನ್ವಯಿಸುತ್ತದೆ ಎಂದು ಪರಿಗಣಿಸಬೇಕೆಂದು ಪ್ರಾರ್ಥಿಸುತ್ತೇನೆ. ಆ ಹಿನ್ನೆಲೆಯಲ್ಲಿ ಐದನೇ ಆರೋಪವನ್ನು ಒಪ್ಪದೇ ನಿರಾಕರಿಸುತ್ತೇನೆ.

ಪ್ರಾರ್ಥನೆ:

ನನ್ನ ಗೈರು ಹಾಜರಾತಿಯು ನನ್ನ ಕೈಮೀರಿದ ಸಂದರ್ಭದಿಂದ ಆಗಿರುತ್ತದೆ ಎಂಬುದನ್ನು ನಾನು ತಮಗೆ ಮನವರಿಕೆ ಮಾಡಿಕೊಟ್ಟಿರುವುದನ್ನು ತಾವು ಒಪ್ಪಿಕೊಂಡಿರುವುದನ್ನು ನಾನು ತಮಗೆ ಸಲ್ಲಿಸಿರುವ ನಿಶಾನೆ ಡಿ-6 ಮತ್ತು ಡಿ-7ರ ದಸ್ತಾವೇಜುಗಳಿಂದ ಹಾಗೂ 106ಎ ನಿಯಮದ "exception cluse" ನಿಂದ ದೃಢಪಡುತ್ತದೆ. ಆದ್ದರಿಂದ ನನ್ನ ಮೇಲೆ ಶಿಸ್ತು ಕ್ರಮ ಜರುಗಿಸಲು ಉದ್ದೇಶಿಸಿರುವ ಕ್ರಮವನ್ನು ಕೈಬಿಟ್ಟು ಆರೋಪಗಳಿಂದ ಮುಕ್ತಗೊಳಿಸಬೇಕೆಂದು ಪ್ರಾರ್ಥಿಸುತ್ತೇನೆ. ನನ್ನ ಪ್ರಾರ್ಥನೆಯು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಶ್ರೀಮತಿ ಡಾ॥ ಜಯಮ್ಮ ಹಜ್ ವಿರುದ್ಧ ರಾಜ್ಯ (1993 K.S.L.J 1988) ಪ್ರಕರಣದಲ್ಲಿ ನೀಡಿರುವ ತೀರ್ಪಿಗೆ ಅನ್ವಯವಾಗಿರುತ್ತದೆ. ಸದರಿ ಪ್ರಕರಣ ಛಾಯಾ ಪ್ರತಿಯನ್ನು ನಿಶಾನೆ (ಡಿ-8)

ಎಂದು ಗುರುತಿಸಿ ತಮ್ಮ ಅವಗಾಹನೆಗಾಗಿ ಸಲ್ಲಿಸಿರುತ್ತೇನೆ. ಹಾಗೂ ಶಿಸ್ತು ಕ್ರಮವನ್ನು ಈ ಹಂತದಲ್ಲಿಯೇ ಕೈಬಿಟ್ಟು ವೈಯುಕ್ತಿಕ ಕುಟುಂಬ ಜೀವನದಲ್ಲಿ ನೋವು ಅನುಭವಿಸುತ್ತಿರುವ ನನಗೆ ನ್ಯಾಯಯುತ ಪರಿಹಾರ ನೀಡಬೇಕೆಂದು ಅತ್ಯಂತ ವಿಧೇಯತೆಯಿಂದ ಪ್ರಾರ್ಥಿಸುತ್ತೇನೆ.

ಆರೋಪ: 5ಕ್ಕೆ ಸಲ್ಲಿಸಿರುವ ಅಪರ ವಿವರಣೆಯ ವಿಶ್ಲೇಷಣೆ:

ಕೋರಿಕೆ ವರ್ಗಾವಣೆ ಹೊಂದಿ ಬಿಡುಗಡೆ ಹೊಂದಿದ ತಕ್ಷಣ ವರ್ಗಾವಣೆ ಹೊಂದಿದ್ದ ಕಛೇರಿಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೆ ಸುಧೀರ್ಘವಾದ ಅವಧಿಯಲ್ಲಿ (ದಿನಾಂಕ:15.10.2004 ರಿಂದ ದಿನಾಂಕ:02.09.2005ರ ವರೆಗೆ) ಸರ್ಕಾರದ ಕರ್ತವ್ಯಕ್ಕೆ ಗೈರು ಹಾಜರಾಗಿದ್ದ ಪ್ರಕರಣಕ್ಕೆ ಸದರಿ ಅಧಿಕಾರಿಗಳು ಅಪರ ವಿವರಣೆಯಲ್ಲಿ ತಿಳಿಸಲಾದ ನಿಯಮ 109 ಅನ್ವಯಿಸುವುದಿಲ್ಲವಾದ್ದರಿಂದ ಹಾಗೂ ಅಪರ ವಿವರಣೆಯ ಕೊನೆಯ ಕಂಡಿಕೆಯಲ್ಲಿ Dr. Jayamma Vs State ಪ್ರಕರಣದಲ್ಲಿ ಗೌರವಾನ್ವಿತ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ನೀಡಿದ ತೀರ್ಪಿಗೆ ಅಪರ ಪ್ರಕರಣವು ಅನ್ವಯಿಸಲು ಸಾಧ್ಯವಿಲ್ಲವಾದ್ದರಿಂದ 5ನೇ ಆರೋಪಕ್ಕೆ ಅಪರು ಸಲ್ಲಿಸಿರುವ ವಿವರಣೆಯು ಅಸಮಾರ್ಪಕವೆಂದು ತಿರಸ್ಕರಿಸಲಾಗಿದೆ.

ಮೇಲೆ ವಿವರಿಸಿದ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಆದೇಶದಲ್ಲಿ ಒಳಪಟ್ಟಿರುವ ಡಾ॥ ಜಯಮ್ಮ ಅವರು ವರ್ಗಾವಣೆ ಹೊಂದಿದ ಕಛೇರಿಯಲ್ಲಿ ಹಾಜರಾದ ನಂತರ ಅನಧಿಕೃತ ಗೈರು ಹಾಜರಾಗಿರುವುದಕ್ಕೆ ಸಂಬಂಧಿಸಿದ್ದು, ಪ್ರಸ್ತುತ ಪ್ರಕರಣದಲ್ಲಿ ಶ್ರೀ ಎ.ಕೆ. ಹನುಮಂತಪ್ಪ, ಸಹಾಯಕ ನಿರ್ದೇಶಕರು, ಅಪರ ಕೋರಿಕೆ ಅನ್ವಯ ವರ್ಗಾವಣೆ ಹೊಂದಿ ಬಿಡುಗಡೆಗೊಂಡ ನಂತರ ವರ್ಗಾವಣೆಯಾದ ಕಛೇರಿಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೇ ಸುಧೀರ್ಘವಾದ ಅವಧಿಯಲ್ಲಿ ಸರ್ಕಾರದ ಸೇವೆಗೆ ಅನಧಿಕೃತವಾಗಿ ಗೈರು ಹಾಜರಾಗಿದ್ದರಿಂದ ಅವರು 5ನೇ ಆರೋಪಕ್ಕೆ ಸಲ್ಲಿಸಿರುವ ವಿವರಣೆಯನ್ನು ತಿರಸ್ಕರಿಸಲಾಗಿದೆ.

ಒಟ್ಟಾರೆ ಸದರಿ ಆಪಾದಿತ ಅಧಿಕಾರಿಗಳ ವಿರುದ್ಧ ಹೊರಿಸಲಾದ 5 ಆರೋಪಗಳಿಗೆ ಸಲ್ಲಿಸಿರುವ ಅಪರ ವಿವರಣೆಯಲ್ಲಿ ಅವರ ವಿರುದ್ಧದ ಯಾವುದೇ ಒಂದೂ ಆರೋಪವನ್ನು ಸಮರ್ಥಿಸಿಕೊಳ್ಳಲು ಅಸಮರ್ಥವಾಗಿದ್ದರಿಂದ ಅಪರ ವಿವರಣೆಯನ್ನು ಸಂಪೂರ್ಣವಾಗಿ ತಿರಸ್ಕರಿಸಲಾಗಿದೆ ಹಾಗೂ ಅವರ ಮೇಲಿನ ಆಪಾದನೆಗಳನ್ನು ಅಲ್ಲಗಳೆದಿರುತ್ತಾರಾದ್ದರಿಂದ ಅಪರ ವಿರುದ್ಧದ ಆಪಾದನೆಗಳ ಕುರಿತು ಸತ್ಯಾಸತ್ಯತೆಯನ್ನು ಕಂಡುಕೊಳ್ಳಲು ಇಲಾಖಾ ವಿಚಾರಣೆಗಾಗಿ ವಿಚಾರಣಾಧಿಕಾರಿಗಳನ್ನು ನೇಮಕಾತಿ ಮಾಡುವುದು ಅಗತ್ಯವಿರುವುದರಿಂದ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಕಛೇರಿ ಆದೇಶ ಸಂಖ್ಯೆ: ಆಡಳಿತ/103/09–10

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳಿಂದ ಶ್ರೀ. ಎ.ಕೆ. ಹನುಮಂತಪ್ಪ, ಸಹಾಯಕ ನಿರ್ದೇಶಕರು, ಇವರ ವಿರುದ್ಧದ ಮೇಲೆ ವಿವರಿಸಲಾದ ಆರೋಪಗಳಿಗೆ ಸಂಬಂಧಿಸಿದಂತೆ ಸತ್ಯಾಸತ್ಯತೆಯನ್ನು ಕಂಡುಕೊಳ್ಳಲು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ: 11(2)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಇಲಾಖಾ ವಿಚಾರಣೆಯನ್ನು ನಡೆಸಲು ಶ್ರೀ ಎಂ.ಜಿ. ಹಿರೇಮಠ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ನಂ.746, 15ನೇ ಮುಖ್ಯ ರಸ್ತೆ, ಜುಡಿಷಿಯಲ್ ಲೇಔಟ್, ಅಲ್ಲಾಳ ಸಂದ್ರ, ಜಿಕೆವಿಕೆ ಪೋಸ್ಟ್, ಬೆಂಗಳೂರು-560 065, ಇವರನ್ನು ವಿಚಾರಣಾಧಿಕಾರಿಗಳನ್ನಾಗಿ ನೇಮಿಸಿದೆ.

ಶಿಸ್ತು ಪ್ರಾಧಿಕಾರದ ಪರವಾಗಿ ಪ್ರಕರಣವನ್ನು ವಿಚಾರಣಾಧಿಕಾರಿಗಳ ಮುಂದೆ ಮಂಡಿಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ: 11(5)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಕೆ.ಸಿ. ಸಾಲಾಪುರ, ಜಂಟಿ ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಕೇಂದ್ರ ಕಛೇರಿ, ಬೆಂಗಳೂರು ಇವರನ್ನು ಈ ಪ್ರಕರಣದ ಮಂಡನಾಧಿಕಾರಿಯನ್ನಾಗಿ ನೇಮಿಸಿದೆ.

ವಿಚಾರಣಾಧಿಕಾರಿಗಳು ಈ ಪ್ರಕರಣದ ವಿಚಾರಣೆಯನ್ನು ಈ ನಿರ್ದೇಶನಾಲಯದ ಕೇಂದ್ರ ಕಛೇರಿಯಲ್ಲಿ ಅಥವಾ ಗುರುತಿಸಿ ನಿಗದಿಪಡಿಸುವ ಸ್ಥಳದಲ್ಲಿ ನಡೆಸಬಹುದಾಗಿರುತ್ತದೆ.

ಈ ಪ್ರಕರಣದ ವಿಚಾರಣೆಗಾಗಿ ವಿಚಾರಣಾಧಿಕಾರಿಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 22 ಸೇಇವಿ 2007 ದಿನಾಂಕ: 11.04.2008ರ ಅನ್ವಯ ರೂ. 8,000/- (ರೂಪಾಯಿ ಎಂಟು ಸಾವಿರ ಮಾತ್ರ) ಸಂಭಾವನೆಯನ್ನು ಹಾಗೂ ರೂ.1,500/- (ರೂಪಾಯಿ ಒಂದು ಸಾವಿರದ ಐದು ನೂರು ಮಾತ್ರ) ವಾಹನ ಭತ್ಯೆಯನ್ನು ವಿಚಾರಣಾಧಿಕಾರಿಗಳಿಗೆ ವಿಚಾರಣಾ ವರದಿಯನ್ನು ಸಲ್ಲಿಸಿದ ನಂತರ ಈ ನಿರ್ದೇಶನಾಲಯದ ಕೇಂದ್ರ ಕಛೇರಿಯಿಂದ ಪಾವತಿಸತಕ್ಕದ್ದು.

ವಿಚಾರಣಾಧಿಕಾರಿಗಳು ಇಲಾಖಾ ವಿಚಾರಣಾ ವರದಿಯನ್ನು 2 ತಿಂಗಳುಗಳೊಳಗಾಗಿ ಸಲ್ಲಿಸುವಂತೆ ಕೋರಲಾಗಿದೆ.

ಹೆಚ್.ಇ. ರಾಜಶೇಖರಪ್ಪ

ಪಿ.ಆರ್.540

ನಿರ್ದೇಶಕರು

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಮತ್ತು ಶಿಸ್ತು ಪ್ರಾಧಿಕಾರ.

/BG-GPO/2515/WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಂಪುಟ ೧೪೪	ಬೆಂಗಳೂರು, ಗುರುವಾರ, ಜುಲೈ ೩೦, ೨೦೦೯ (ಶ್ರಾವಣ ೮, ಶಕ ವರ್ಷ ೧೯೩೧)	ಸಂಚಿಕೆ ೩೧

ಭಾಗ – ೪ಎ

ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು ರಾಜ್ಯದ ಅಧಿನಿಯಮಗಳು ಮತ್ತು ಅಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು, ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ನಿಯಮಗಳು.

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಇ 41 ಎಂಆರ್‌ಇ 2009, ಬೆಂಗಳೂರು, ದಿನಾಂಕ: 6ನೇ ಜುಲೈ 2009

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966ರ ಕಲಂ 11(1) (ix) ರಲ್ಲಿ ದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಚಳ್ಳಕೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಸದಸ್ಯರನ್ನಾಗಿ ರ್ಕಾರದ ಅಧಿಸೂಚನೆ ಸಂಖ್ಯೆ:ಸಇ ೫೦ ಎಂಆರ್‌ಇ 2008 ದಿನಾಂಕ:17/6/2008ರಲ್ಲಿ ಮಾಡಿರುವ "ಶ್ರೀ ಜಿ.ಎನ್. ಹಾಲಿಂಗಪ್ಪ ಬಿನ್ ಕುರಿಲಿಂಗಪ್ಪ, ಕಾಪರಹಳ್ಳಿ ಅಂಚೆ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ" ಇವರ ನಾಮನಿರ್ದೇಶನವನ್ನು ದ್ದುಪಡಿಸಿ, ಅವರ ಸ್ಥಾನದಲ್ಲಿ "ಶ್ರೀ ಎಸ್. ಮಲ್ಲಪ್ಪ ಬಿನ್ ಸಣ್ಣ ಲಿಂಗಪ್ಪ, ಸಿದ್ದಾಪುರ, ಹೊಟ್ಟೆಪ್ಪನಹಳ್ಳಿ ಅಂಚೆ, ಚಳ್ಳಕೆರೆ ಲ್ಲೂಕು, ಚಿತ್ರದುರ್ಗ ಜಿಲ್ಲೆ" ಇವರನ್ನು ಚಳ್ಳಕೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಗೂ ಮುಂದಿನ ಆದೇಶದವರೆಗೆ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಿ.ಕೆ. ವಾಸುದೇವಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ

ಸಹಕಾರ ಇಲಾಖೆ

.ಆರ್. 402

URBAN DEVELOPMENT SECRETARIAT

NOTIFICATION

No. UDD 62 BEMRUPRA 2009, Bangalore, Dated: 29th June 2009

In exercise of the powers conferred by the Section-81 of the Karnataka Town and Country anning Act, 1961, the Government of Karnataka hereby delegates the powers relating to issue of

Commencement Certificate for buildings under the provisions of section 15 of Karnataka Town and Country Planning Act to the Commissioner of the Davanagere City Municipal Corporation with immediate effect and until further orders.

The delegation of powers is subject to the following conditions:

i) The proposed plan for the building construction shall be strictly in accordance with the land use and the Zoning Regulations of the approved Master plan for Davanagere Local Planning Area which is in force.

ii) The Deputy Director of Town Planning working on deputation in the Davanagere City Corporation will assist the Commissioner in discharging the duties delegate under this Notification.

iii) The officer of the Town Planning Department working as Town Planner Member in the Urban Development Authority of the above city will assist the Commissioner of the Corporation in the matters of sanctioning the building plans in addition to his own duties in the Urban Development Authority, in case of Deputy Director of Town Planning post in the corporation is vacant/not filled by the Town Planning Department.

iv) The fee shall be collected in accordance with the rates prescribed under Section-18 of the K T C.P. Act-1961 read with amended Rule-37A of the Karnataka Planning Authorities Rules, 1965 issued in Notification No:HUD/507/TTP/93 dated 19.11.1993 or as per the rates prescribed by Government from time to time.

By Order and in the name of the Governor of Karnataka

C.T. NARAYANASWAMY

Under Secretary to Government

Urban Development Department

P.R. 395

ಸಮಾಜ ಕಲ್ಯಾಣ ಸಚಿವಾಲಯ

• ಅಧಿಸೂಚನೆ ಸಂಖ್ಯೆ: ಸಕಇ 11 ಎಸ್‌ಎಡಿ 2007, ಬೆಂಗಳೂರು, ದಿನಾಂಕ: 29ನೇ ಜೂನ್ 2009

ವಿಚಾರಣಾ ಆಯೋಗಗಳ ಅಧಿನಿಯಮ 1952 (1952ರ ಕೇಂದ್ರ ಅಧಿನಿಯಮ ಸಂಖ್ಯೆ 60)ರ ಕಲಂ 3 ರಿಂದ ಪ್ರದತ್ತವಾದ ಅಧಿಕಾರ ಚಲಾಯಿಸಿ ಮಾನ್ಯ ನಿವೃತ್ತ ನ್ಯಾಯಾಧೀಶರಾದ ಶ್ರೀ ಎ.ಜೆ. ಸದಾಶಿವ ಇವರನ್ನೊಳಗೊಂಡ ವಿಚಾರಣಾ ಆಯೋಗವನ್ನು ಅಧಿಸೂಚನೆ ಸಂಖ್ಯೆ:ಸಕಇ 227 ಎಸ್‌ಎಡಿ 2003 ದಿನಾಂಕ:24.9.2005ರಲ್ಲಿ ನೇಮಕ ಮಾಡಲಾಗಿದ್ದು ಆ ಆಯೋಗವು ಈ ಕೆಳಗಿನ ಕಾರ್ಯವನ್ನು ನಿರ್ವಹಿಸಬೇಕಾಗಿರುತ್ತದೆ.

"to identify the particular castes, races and tribes of Scheduled Castes in the State of Karnataka to whom the benefits of reservation are not percolating equitably and to suggest within a period of twelve months what are all the measures and positive steps that should be taken so as to enable them to compete with other categories of the Schedules Castes in the State and other relevant aspects".

ನಂತರ ಆಯೋಗದ ಕಾರ್ಯ ನಿರ್ವಹಣಾ ಅವಧಿಯನ್ನು ಕಾಲಕಾಲಕ್ಕೆ ವಿಸ್ತರಿಸಲಾಗಿದ್ದು ಇತ್ತೀಚೆಗೆ ಅಧಿಸೂಚನೆ ಸಂಖ್ಯೆ:ಸಕಇ 11 ಎಸ್‌ಎಡಿ 2007 ದಿನಾಂಕ:25.11.2008ರಲ್ಲಿ ದಿನಾಂಕ:30.6.2009ರ ವರೆಗೆ ವಿಸ್ತರಿಸಲಾಗಿತ್ತು.

ಸದರಿ ಅವಧಿಯು ಸಹ ಮುಗಿದಿರುವುದರಿಂದ ಶ್ರೀ ಎ.ಜೆ. ಸದಾಶಿವ ವಿಚಾರಣಾ ಆಯೋಗದ ಕಾರ್ಯ ನಿರ್ವಹಣಾ ಅವಧಿಯನ್ನು ಇನ್ನೂ 06 ತಿಂಗಳ ಅವಧಿಗೆ (ದಿನಾಂಕ:1.7.2009 ರಿಂದ 31.12.2009)ವಿಸ್ತರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ರಾಮಸ್ವಾಮಿ

ಸರ್ಕಾರದ ಅಧೀನ ಕಾರ್ಯದರ್ಶಿ–2 (ಪ್ರ)

ಸಮಾಜ ಕಲ್ಯಾಣ ಇಲಾಖೆ

ಪಿ.ಆರ್. 397

URBAN DEVELOPMENT SECRETARIAT

NOTIFICATION

No: UDD 23 BeMaPra 2008, Bangalore, Dated: 30th June 2009.

The draft of the following rules further to amend the Karnataka Planning Authority Rules, 1965 ıch the Government of Karnataka proposes to make in exercise of the powers conferred under Section read with Section 74 of the Karnataka Town and Country Planning Act. 1961 (Karnataka Act 11 of 63) are hereby published as required under sub-section (1) of section 74 of the said Act for the ormation of all persons likely to be affected thereby and notice is hereby given that the said draft will be ken into consideration after thirty days from the date of its publication in the Official Gazette.

Any objection or suggestion which may be received by the State Government from any person h respect to the said draft before the expiry of the period specified above, will be considered by the ate Government. Objections and suggestions may be addressed to the Principal Secretary to overnment, Urban Development Department, Karnataka Government Secretariat, Vikasa Soudha, ngalore-560 001.

DRAFT RULES

1. Title and commencement:- (1) There rules may be called the Karnataka Planning Authority mendment) Rules, 2009.

(2) They shall come into force from the date of their publication in the official Gazette.

2. Amendment of rule 37A:- in the Karnataka Planning Authority Rules, 1965 (hereinafter erred to as the said rules), in rule 37A for sub-rule (1), the following shall be substituted, namely:-

"(1) For the purpose of sub section (1) of section 18, the fee leviable by the Planning Authority all be,-

(a) at the rates equal to such percentage of the value of the building, determined on the basis of idance value notified under section 45B of Karnataka Stamp Act, 1957, specified in column (3) of the ble below in the case of grant of permission for change in use of land or approval of layout; specified in lumn (2) thereof.

TABLE

For grant of permission for change in the use of land or approval of the layout

Sl. No.	Nature of change in use of land/approval of layout	Fee equal to the percentage of value of the building guidance value of total land specified below
(1)	(2)	(3)
1.	Residential	15.00%
2.	Industrial	17.00%
3.	Commercial	18.00%
4.	Other Purpose	8.00%

(b) at the rates equal to such percentage of the value of the building, determined on the basis of idance value notified under section 45B of Karnataka Stamp Act, 1957, specified in column (3) of the ble below in the case of grant of permission for development involving carrying out of building on the t approved by the Planning Authority or appropriate Authority, for the purpose specified in column (2) ereof.

TABLE

For grant of permission for development involving carrying out of Buildings

Sl. No.	Type of use	The rate of fee equal to the percentage of value of the Building's total built up area of the building sanctioned in accordance with percentage of guidance value
(1)	(2)	(3)
1.	Residential	15.00%
2.	Industrial	17.00%
3.	Commercial	18.00%
4.	Other Purpose	8.00%

Note:

(1) Other purpose include charitable, religious and philanthropic institutions such as old age home, destitute homes and child-care centers but does not include educational institutions, health institutions and any other public and semi-public buildings run by private individuals and institutions which are to be treated as commercial uses.

(2) The guidance value prevailing on the date of submission of application shall be considered for the purpose of calculating the fee.

(3) When the guidance value for a specific location is not available, then the rates as applicable to be the nearest area shall be followed.

(4) When the guidance value for a specific use is not available, then the guidelines issued by the Inspector General of Registration and Commissioner of Stamps shall be followed."

3. **Insertion of new rule 37-C:-** After rule 37-B of the said rules, the following new rule shall be inserted, namely:-

"37-C. Cess and Surcharge to be levied in certain cases for change in the land use or development of land or building:- For the purpose of levying and collecting the cess and surcharge under sub-section (1) of section 18-A, the Planning Authority shall fix the rates based on the project cost, repayment schedule and area covered with the prior approval of the Government.

Note:

(1) All the Urban Development Authorities, Planning Authorities, Municipal Planning Authorities and Local Bodies are required to keep the above cess and surcharge in a separate account and shall be utilized for the works as directed by the Government from time to time."

By Order and in the name of the Governor of Karnataka

C.T. NARAYANASWAMY

Under Secretary to Government

Urban Development Department

P.R. 398

ನಗರಾಭಿವೃದ್ಧಿ ಸಚಿವಾಲಯ

ಅಧಿಸೂಚನೆ

ನಂ. ನಅಇ 19 ಗುಅಪ್ರಾ 2009, ಬೆಂಗಳೂರು, ದಿನಾಂಕ:6ನೇ ಜುಲೈ 2009

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 4(ಸಿ)ರಲ್ಲಿನ (3)(iv)ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಈ ಕೆಳಕಂಡವರನ್ನು ಮಾನ್ವಿ ನಗರ ಯೋಜನಾ ಪ್ರಾಧಿಕಾರದ ಸದಸ್ಯರನ್ನಾಗಿ ಸರ್ಕಾರದ ಇಚ್ಛಾನುಸಾರ ಅಥವಾ 3 ವರ್ಷದ ಅವಧಿಯವರೆಗೆ ಇವುಗಳಲ್ಲಿ ಯಾವುದು ಮೊದಲು ಅಲ್ಲಿಯವರೆಗೆ ನಾಮ ನಿರ್ದೇಶನ ಮಾಡಿ ಆದೇಶಿಸಲಾಗಿದೆ.

ಕ್ರ.ಸಂ	ಹೆಸರು ಮತ್ತು ವಿಳಾಸ	ಪದನಾಮ
1	ಶ್ರೀ ರಾಮನಗೌಡ ಗವಿಗಟ್ಟಿ, ಮಾನ್ವಿ	ಸದಸ್ಯರು
2	ಶ್ರೀ ಶೇಖರಪ್ಪ ಕೋಟೆಕಲ್ ಮಾನ್ವಿ	ಸದಸ್ಯರು
3	ಶ್ರೀ ರೇಣುಕಾ ರೆಡ್ಡಿ, ಮಾನ್ವಿ	ಸದಸ್ಯರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಿ.ಟಿ. ನಾರಾಯಣಸ್ವಾಮಿ

ಪಿ.ಆರ್. 399 ಸರ್ಕಾರದ ಅಧೀನ ಕಾರ್ಯದರ್ಶಿ

ನಗರಾಭಿವೃದ್ಧಿ ಇಲಾಖೆ

KARNATAKA GOVERNOR'S SECRETARIAT

NOTIFICATION

No:GS 4 LUM 2009, Bangalore, Dated: 9th July 2009

In exercise of the powers conferred on me by Section 29(1) of the Karnataka State law University Act, 2009, I. H.R. BHARDWAJ, Governor of Karnataka and Chancellor of the Universities in Karnataka hereby constitute the Syndicate of the Karnataka State Law University, Hubli, with the following members:

Ex-officio Members (under Section 29(2) & (3) (a to d)

